
# ಇಮಾಮಿನ ಆವಶ್ಯಕತೆ

(ಝ಼ರೂರತುಲ್ ಇಮಾಮ್)



ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

## IMAMINA AVASHYAKATHE

'**Imamina Avashyakathe**' is the Kannada rendering of a treatise 'Zarooratul Imam' (The need for a world spiritual guide) composed in Urdu by the Promised Messiah and Mahdi, Hazrat Mirza Ghulam Ahmad(AS). In this work the author deals with the dire need of a spiritual guide in this age of intriguing conflicts in the mind of man regarding the spiritual aspect of worldly life. The booklet is being published by Nazarat Nashr - o - Ishaat, Qadian, India.

# ಇಮಾಮಿನ ಆವಶ್ಯಕತೆ

(ಝ಼ರೂರತುಲ್ ಇಮಾಮ್)

# ಇಮಾಮಿನ ಆವಶ್ಯಕತೆ

**(ಝ಼ುರೂರತುಲ್ ಇಮಾಮ್)**

*

ಗ್ರಂಥಕರ್ತ:

**ಹಝ಼್ರತ್ ಮಿರ್ಝ಼ಾ ಗ಼ುಲಾಂ ಅಹ್ಮದ್**

*

ಭಾಷಾಂತರ:

**ಎಂ. ಪಿ. ಇಬ್ರಾಹೀಂ**

ಮಂಜೇಶ್ವರ

*

ಪ್ರಕಾಶಕರು:

**ನಝ಼ಾರತ್ ನಶ್ರೋ ಇಶಾಅತ್**

ಭಾರತ

# Imaamina Aavashyakathe

Kannada rendering of Urdu work:

ضرورة الامام

*"Zarooratul Imam"*


| | |
|---|---|
| Translated by : | M.P. Ibrahim, Manjeshwar |
| Reviewed by : | Muhammad Yusuf, Mangalore |
| Assisted by : | Moulavi Inamullah |
| Type Setting : | U. Basheer Ahmad, Manjeshwar |
| Published by : | Nazarat Nashro - Isha'at, Qadian, |
| | Distt. Gurdaspur, Punjab -143516 |
| First Edition : | 2019 |
| Copies : | 1000 |
| Printed at : | Fazl-e-Umar Printing Press, Qadian |

# ಮುನ್ನುಡಿ

ಮುಸ್ಲಿಮ್ ಸಮುದಾಯದ ಎಲ್ಲ ತರದ ಲೌಕಿಕ ಹಾಗೂ ಆಧ್ಯಾತ್ಮಿಕ ಅಭಿವೃದ್ಧಿಗಳು ಕಾಲಘಟ್ಟದ ಇಮಾಮಿನೊಂದಿಗೆ ಸಂಬಂಧವಿರಿಸುವುದರಿಂದ ಮಾತ್ರ ಸಾಧ್ಯವಾಗುವುದು. ದೈವಿಕ ವಾಗ್ದಾನಗಳ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿಗಳ ಪ್ರಕಾರ ಅಲ್ಲಾಹನು ಹಝ್ರತ್ ಮಿರ್ಝಾ ಗ್ಶುಲಾಂ ಅಹ್ಮದ್‍ರನ್ನು(ಅ) ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‍ದೀ ಆಗಿ ನಿಯೋಜಿಸಿದನು. ಕ್ರಿ.ಶ. 1891ರಲ್ಲಿ ಅಲ್ಲಾಹನ ಆಜ್ಞೆ ಪ್ರಕಾರ ಅವರು ಈ ಸಂಗತಿಯನ್ನು ಘೋಷಿಸಿದರು.

ಹಿಜರೀ ಹದಿನಾಲ್ಕನೇ ಶತಮಾನದ ಆರಂಭವಾಗಿದ್ದ ಆ ಕಾಲದಲ್ಲಿ ಮುಸ್ಲಿಮರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಅವರು ನಾಮಮಾತ್ರದ ಮುಸ್ಲಿಮರಾಗಿದ್ದರು. ಅವರ ವಿಶ್ವಾಸಪರವಾದ ಮತ್ತು ಕರ್ಮಪರವಾದ ದೌರ್ಬಲ್ಯಗಳನ್ನು ಕಂಡುಕೊಂಡು ಕ್ರೈಸ್ತರು ಹಾಗೂ ಇತರ ಧರ್ಮೀಯರು ಇಸ್ಲಾಮಿನ ಮೇಲೆ ಎಲ್ಲ ಕಡೆಗಳಿಂದಲೂ ಹಲ್ಲೆ ಮಾಡುತ್ತಿದ್ದರು. ಇಸ್ಲಾಮನ್ನು ಸಂರಕ್ಷಿಸಲು ಹಾಗೂ ಇಸ್ಲಾಮಿಕ ಲೋಕಕ್ಕೆ ಒಂದು ಹೊಸ ಚೈತನ್ಯ ತುಂಬಿಕೊಂಡು ಅದರ ವಿರೋಧಿ ಶಕ್ತಿಗಳನ್ನು ಸದೆಬಡೆಯಲು ಮತ್ತು ಮುಹಮ್ಮದೀ ಸಮುದಾಯದ ವಿವಿಧ ಪಂಗಡಗಳ ನ್ಯೂನತೆಗಳನ್ನು ಕೊನೆಗೊಳಿಸಿ ಮತ್ತೊಮ್ಮೆ ನೇರವಾದ ಮಾರ್ಗದ ಕಡೆಗೆ ಅವರನ್ನು ಕೊಂಡೊಯ್ಯಲು ಹಾಗೂ ಬಹುದೂರ ಹೋಗಿರುವ ವಿಶ್ವಾಸವನ್ನು ಮರಳಿ ತರಲು ಯಾರಾದರೂ ಬರಬೇಕೆಂದು ಕಾಲಘಟ್ಟವು ಅವಶ್ಯಪಡುತ್ತಿತ್ತು. ಲೋಕವನ್ನು ಇಸ್ಲಾಮ್, ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮತ್ತು ಪವಿತ್ರ ಖುರ್‍ಆನಿನ ಪತಾಕೆಯ ಅಡಿಯಲ್ಲಿ ಒಟ್ಟುಸೇರಿಸುವುದು ತನ್ನ ಆಗಮನದ ಉದ್ದೇಶವೆಂದು ಹಝ್ರತ್ ಮಿರ್ಝಾ ಗ್ಶುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಸ್ಪಷ್ಟಪಡಿಸಿದರು.

ಅಲ್ಲಾಹನು ಮುಸ್ಲಿಮ್ ಸಮುದಾಯವನ್ನು ನೇರವಾದ ಮಾರ್ಗದಲ್ಲಿ ನಡೆಸಲಿ ಮತ್ತು ಅಂತಿಮ ಕಾಲಘಟ್ಟದ ಈ ಇಮಾಮನ್ನು ಗುರುತಿಸಿ ಅವರ ಕೈಯಲ್ಲಿ ನಿಷ್ಠೆಯ ಪ್ರತಿಜ್ಞೆಯನ್ನು ಮಾಡಲು ಸೌಭಾಗ್ಯ ನೀಡಲಿ. ಆಮೀನ್.

"ಝ಼ರೂರತುಲ್ ಇಮಾಮ್" ಎಂಬ ಈ ಕಿರುಪುಸ್ತಕವನ್ನು ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್(ಅ) ಕ್ರಿ.ಶ. 1897ನೇ ಇಸವಿಯಲ್ಲಿ ಬರೆದರು. ಕಾಲಘಟ್ಟದ ಇಮಾಮ್ ಯಾರು? ಅವರ ಲಕ್ಷಣಗಳೇನು? ಅವರಿಗೆ ಇತರ ಸ್ವಪ್ನದರ್ಶಿಗಳು ಮತ್ತು ದಿವ್ಯವಾಣಿ ಲಭಿಸುವ ಜನರ ಮೇಲೆ ಯಾವ ರೀತಿಯ ಆದ್ಯತೆಯಿದೆ? ಕಾಲಘಟ್ಟದ ಇಮಾಮನ್ನು ನಂಬುವುದು ಏಕೆ ಕಡ್ಡಾಯ? ಎಂಬೀ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರಗಳನ್ನು ಈ ಪುಸ್ತಕದಲ್ಲಿ ಅತ್ಯುತ್ತಮ ರೀತಿಯಲ್ಲಿ ನೀಡಲಾಗಿದೆ.

ಹಝ್ರತ್ ಖ಼ಲೀಫತುಲ್ ಮಸೀಹ್ ಖ಼ಾಮಿಸರ ಅನುಮತಿಯಿಂದ ನಝ಼ಾರತ್ ನಶ್ರೋ ಇಶಾಅತ್ ಖಾದಿಯಾನ್ ಈ ಪುಸ್ತಕವನ್ನು ಓದುಗರ ಪ್ರಯೋಜನಕ್ಕಾಗಿ ಪ್ರಕಟಿಸುತ್ತಿದೆ. ಅಲ್ಲಾಹನು ನಮಗೆಲ್ಲರಿಗೂ ಈ ಗ್ರಂಥದಿಂದ ಸರಿಯಾದ ಪ್ರಯೋಜನ ಪಡೆಯಲು ಸೌಭಾಗ್ಯ ನೀಡಲಿ. ಆಮೀನ್

ವಿನೀತ

ಹಾಫಿಝ್ ಮಖ್ದೂಮ್ ಶರೀಫ್

**ನಾಝಿ಼ರ್ ನಶ್ರೋ ಇಶಾಅತ್, ಖಾದಿಯಾನ್.**

# ضَرُوْرَةُ الْاِمَامِ

بِسۡمِ اللّٰہِ الرَّحۡمٰنِ الرَّحِیۡمِ

اَلۡحَمۡدُ لِلّٰہِ وَسَلَامٌ عَلٰی عِبَادِہِ الَّذِیۡنَ اصۡطَفٰی

## ಇಮಾಮಿನ ಆವಶ್ಯಕತೆ

ತನ್ನ ಕಾಲದ 'ಇಮಾಂ'ರನ್ನು ಕಂಡುಕೊಂಡು ಅವರನ್ನು ಸ್ವೀಕರಿಸದವನ ಮರಣವು ಜಾಹಿಲಿಯ್ಯತ್‌ನ (ಅಜ್ಞಾನದ) ಮರಣವಾಗಿದೆ ಎಂದು ಅಂಗೀಕೃತ ನಬಿವಚನ (ಸಹೀಹ್ ಹದೀಸ್)ಗಳಿಂದ ಸಾಬೀತಾಗಿದೆ.* ಈ ಹದೀಸ್ ವಚನವು ದೇವಭಯವಿರುವ ಓರ್ವ ಮುಸ್ಲಿಮನ ಹೃದಯವನ್ನು ತನ್ನ ಕಾಲದ ಇಮಾಮರ ಅನ್ವೇಷಣೆಯಲ್ಲಿ ತೊಡಗುವಂತೆ ಮಾಡಲು ಸಾಕು. ಯಾವುದೇ ಕೆಡುಕು ಮತ್ತು ದೌರ್ಭಾಗ್ಯವು ಹೊರತಾಗಿರದಷ್ಟು ನಿಕೃಷ್ಟವಾದುದಾಗಿದೆ ಜಾಹಿಲಿಯ್ಯತಿನ ಮರಣ. ಆದುದರಿಂದ ಪ್ರವಾದಿವರ್ಯರ ಈ ಆಜ್ಞೆಯನ್ವಯ ಪ್ರತಿಯೋರ್ವ ಸತ್ಯಾನ್ವೇಷಿಯೂ ತನ್ನ ಕಾಲದ ಸತ್ಯವಂತನಾದ ಇಮಾಮರ ಶೋಧನೆಗೆ ಮುಂದಾಗಲು ನಿರ್ಬಂಧಿತನಾಗುತ್ತಾನೆ.

ಯಾರಿಗಾದರೂ ಸತ್ಯವಾದ ಸ್ವಪ್ನಗಳು ಉಂಟಾದಲ್ಲಿ ಅಥವಾ 'ಇಲ್‌ಹಾಂ'ನ (ದೇವವಾಣಿಯ) ಬಾಗಿಲು ಆತನಿಗೆ ತೆರೆದಿಡಲ್ಪಟ್ಟಲ್ಲಿ ಅಂತಹ ಪ್ರತಿಯೊಬ್ಬನೂ 'ಇಮಾಂ' ಎಂಬ ಹೆಸರಿಗೆ ಅರ್ಹನಾಗುವನೆಂದು ತಿಳಿಯುವುದು ಸರಿಯಲ್ಲ. ಬದಲಾಗಿ, ಇಮಾಂ ಎಂಬುದರ ನಿಜಸ್ಥಿತಿಯು ಇತರ ಅನೇಕ ಕಾರ್ಯಗಳ ಸಮ್ಮಿಳಿತವೂ ಪರಿಪೂರ್ಣತೆಯ ಮತ್ತು ಸಮಗ್ರತೆಯ ಒಗ್ಗೂಡುವಿಕೆಯಿಂದ ಉಂಟಾಗುವ ಒಂದು ಸ್ಥಿತಿಯೂ ಆಗಿದೆ. ಆ ಕಾರಣದಿಂದ ಆಕಾಶದಲ್ಲಿ ಅವರ

---

* حدثنا عبداللہ حدثنی ابی حدثنا اسود بن عامر انا ابوبکر عن عاصم عن ابی صالح عن معاویۃ قال قال رسول اللہ صلی اللہ علیہ وسلم من مات بغیر امام مات میتۃ جاھلیۃ صفحہ نمبر ۹۶ جلد نمبر ۴ مسند احمد و اخرجہ احمد و الترمذی و ابن خزیمۃ و ابن حبان و صححہ من حدیث الحارث الاشعری بلفظ من مات ولیس علیہ امام جماعۃ فان موتتہ جاھلیۃ۔ ورواہ الحاکم من حدیث بن عمرو من حدیث معاویۃ ورواہ البزّار من حدیث ابن عباس ۔

ಹೆಸರು ಇಮಾಂ ಎಂದು ಇಡಲ್ಪಡುತ್ತದೆ. ಭಯಭಕ್ತಿ ಮತ್ತು ಪರಿಶುದ್ಧಿಯ ಕಾರಣದಿಂದ ಮಾತ್ರ ಯಾರೂ ಇಮಾಂ ಎಂದು ಕರೆಯಲ್ಪಡಲಾರರು ಎಂಬುದು ಸ್ಪಷ್ಟ.

وَاجْعَلْنَا لِلْمُتَّقِيْنَ اِمَامًا

**ವಜ್‌ಅಲ್‌ನಾ ಲಿಲ್ ಮುತ್ತಖೀನ ಇಮಾಮ** (25: 75)

"ನೀನು ನಮ್ಮನ್ನು ಭಯಭಕ್ತಿಯುಳ್ಳವರಿಗೆ ಇಮಾಂ ಆಗಿ ಮಾಡು" ಎಂದು ಪ್ರಾರ್ಥಿಸಲು ಅಲ್ಲಾಹನು ಹೇಳುತ್ತಾನೆ. ಭಯಭಕ್ತಿಯಿರುವ ಪ್ರತಿಯೋರ್ವನೂ ಇಮಾಂ ಎಂದು ಕರೆಯಲ್ಪಡುವನಾದರೆ, ದೇವಭಯವುಳ್ಳ ಎಲ್ಲ ಸತ್ಯವಿಶ್ವಾಸಿಗಳೂ ಇಮಾಂ ಆಗುತ್ತಾರೆ. ಇದು ಅಲ್ಲಾಹನ ವಚನದ ತಾತ್ಪರ್ಯಕ್ಕೆ ವಿರುದ್ಧವಾಗಿದೆ.

ಅದೇ ರೀತಿ, ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ತಿಳಿಸುವಂತೆ, ಪ್ರತಿಯೋರ್ವ ಮುಲ್‌ಹಂ (ಇಲ್‌ಹಾಂ ಲಭಿಸುವ ವ್ಯಕ್ತಿ) ಹಾಗೂ ಸತ್ಯವಾದ ಸ್ವಪ್ನ ಕಾಣುವ ವ್ಯಕ್ತಿಯೂ ಇಮಾಂ ಆಗಲಾರನು. ಯಾಕೆಂದರೆ, ಪವಿತ್ರ ಖುರ್‌ಆನಿನಲ್ಲಿ ಎಲ್ಲ ಸಾಮಾನ್ಯ ಸತ್ಯವಿಶ್ವಾಸಿಗಳಿಗೂ ಈ ಬಗ್ಗೆ ಸುವಾರ್ತೆ ನೀಡಲಾಗಿದೆ.

لَهُمُ الْبُشْرٰى فِى الْحَيٰوةِ الدُّنْيَا

**ಲಹುಮುಲ್ ಬುಶ್‌ರಾ ಫಿಲ್ ಹಯಾತಿದ್ದುನ್‌ಯಾ** (10: 65)

ಅಂದರೆ, ಸತ್ಯವಿಶ್ವಾಸಿಗಳಿಗೆ ಇಹಲೋಕದಲ್ಲೂ ಈ ಅನುಗ್ರಹಗಳು ಲಭಿಸುವುವು. ಬಹಳಷ್ಟು ಸತ್ಯವಾದ ಸ್ವಪ್ನಗಳು ಅವರಿಗೆ ಉಂಟಾಗುವುವು ಅಥವಾ ಸತ್ಯವಾದ ದಿವ್ಯವಾಣಿಗಳು ಅವರಿಗೆ ಲಭಿಸುತ್ತಿರುವುವು. ಮತ್ತೊಂದೆಡೆ ಪವಿತ್ರ ಖುರ್‌ಆನಿನಲ್ಲಿ ಈ ರೀತಿ ಹೇಳಲಾಗಿದೆ:

اِنَّ الَّذِيْنَ قَالُوْا رَبُّنَا اللّٰهُ ثُمَّ اسْتَقَامُوْا تَتَنَزَّلُ عَلَيْهِمُ الْمَلٰٓئِكَةُ اَلَّا تَخَافُوْا وَلَا تَحْزَنُوْا

**ಇನ್ನಲ್ಲಧೀನ ಖಾಲೂ ರಬ್ಬುನಲ್ಲಾಹು ಸುಮ್ಮಸ್ತಖಾಮೂ ತತನಝ್ಝಲು ಅಲೈಹಿಮುಲ್ ಮಲಾಇಕತು ಅಲ್ಲಾ ತಖಾಫೂ ವಲಾ ತಹ್‌ಝನೂ** (41: 31)

ಅಂದರೆ, ಯಾರು ಸತ್ಯವಿಶ್ವಾಸ ಸ್ವೀಕರಿಸುತ್ತಾರೋ ಮತ್ತು ಅದರಲ್ಲಿ ಸುದೃಢವಾಗಿ ನಿಲ್ಲುತ್ತಾರೋ ಅವರಿಗೆ ದೇವದೂತರು ಶುಭವಾರ್ತೆಯ ವಾಣಿಗಳನ್ನು ನೀಡುವರು ಮತ್ತು ಅವರನ್ನು ಸಾಂತ್ವನಗೊಳಿಸುತ್ತಲೇ ಇರುವರು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ತಾಯಿಗೆ ದೇವವಾಣಿಯ ಮೂಲಕ

ಸಾಂತ್ವನ ದೊರಕಿದಂತೆ. ಪವಿತ್ರ ಖುರ್‌ಆನ್ ಈ ರೀತಿಯ ಇಲ್‌ಹಾಮ್‌ಗಳನ್ನು ಅಥವಾ ಸ್ವಪ್ನಗಳನ್ನು ಸತ್ಯವಿಶ್ವಾಸಿಗಳಿಗೆ – ಅವರು ಪುರುಷರಾಗಲಿ, ಸ್ತ್ರೀಯರಾಗಲಿ – ಒಂದು ಆಧ್ಯಾತ್ಮಿಕ ಅನುಗ್ರಹವೆಂದು ತಿಳಿಸಿಕೊಡುತ್ತದೆ. ಆದರೆ, ಈ ರೀತಿಯ ಅನುಗ್ರಹಗಳು ಲಭಿಸುವ ಕಾರಣದಿಂದ ಅವರು ತನ್ನ ಕಾಲದ ಇಮಾಮರಿಂದ (ಇಮಾಮುಝ್ಝಮಾನ್‌ರಿಂದ) ಬೇರ್ಪಟ್ಟವರೋ ಸ್ವತಂತ್ರರೋ ಆಗುವುದಿಲ್ಲ. ಅಧಿಕಾಂಶವೂ ಇಂತಹ ದಿವ್ಯವಾಣಿಗಳು ಅವರ ವೈಯಕ್ತಿಕ ಕಾರ್ಯಗಳ ಕುರಿತೇ ಇರುವುದಲ್ಲದೆ ಅದರಲ್ಲಿ ಜ್ಞಾನ ವರ್ಧನೆಯ ಸಂಗತಿಗಳು ಇರಲಾರವು ಹಾಗೂ ಅವು (ಆ ಇಲ್‌ಹಾಮ್‌ಗಳು) ಅತಿ ಮಹತ್ತರವಾದ ಬದಲಾವಣೆಗಳನ್ನೇನೂ ಉಂಟುಮಾಡಲಾರವು. ಅದೂ ಅಲ್ಲದೆ ಅವು ಸಂಪೂರ್ಣ ಭರವಸೆಯನ್ನಿಡಬಹುದಾದ ಮಟ್ಟದಲ್ಲಿರುವುದಿಲ್ಲ. ಕೆಲವೊಮ್ಮೆ ಅವುಗಳು ದಾರಿ ತಪ್ಪಿಸುವವುಗಳಾಗಿ ಪರಿಣಮಿಸುವುದೂ ಇದೆ. ಎಲ್ಲಿಯವರೆಗೆ ಕಾಲದ ಇಮಾಮರ (ಇಮಾಮುಝ್ಝಮಾನರ) ಸಹಾಯದಿಂದ ಜ್ಞಾನ ವರ್ಧನೆ ಉಂಟಾಗುವುದಿಲ್ಲವೋ ಅಲ್ಲಿಯವರೆಗೆ ಅದು ಖಂಡಿತವಾಗಿಯೂ ಆಪತ್ತಿನಿಂದ ಸುರಕ್ಷಿತವಲ್ಲ. ಇಸ್ಲಾಮಿನ ಪ್ರಾರಂಭ ಕಾಲದ ಚರಿತ್ರೆಯಲ್ಲೇ ಇದಕ್ಕೆ ಉದಾಹರಣೆಯನ್ನು ಕಾಣಬಹುದು. ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಪವಿತ್ರ ಖುರ್‌ಆನ್ ದಿವ್ಯವಾಣಿ ಮೂಲಕ ಅವತರಣಗೊಳ್ಳುವಾಗ ಅದನ್ನು ಬರೆಯಲು ನಿಯುಕ್ತರಾದವರ ಪೈಕಿ ಓರ್ವ ವ್ಯಕ್ತಿಯ ಬಗ್ಗೆ ಉಲ್ಲೇಖವಿದೆ – ಹಝ್ರ‌ತ್ ಪೈಗಂಬರ್[ಸ] ತನಗೆ ದಿವ್ಯವಾಣಿ ಮೂಲಕ ಲಭಿಸಿದ ಪವಿತ್ರ ಖುರ್‌ಆನ್ ವಚನಗಳನ್ನು ಬರೆದಿಡಲು ಆತನೊಡನೆ ಹೇಳುವಾಗ ಕೆಲವೊಮ್ಮೆ ಅದೇ ವಚನಗಳು ಆತನಿಗೂ ಇಲ್‌ಹಾಂ ಮೂಲಕ ಪ್ರಕಟಗೊಳ್ಳುತ್ತಿದ್ದವು. ಇದು ಪ್ರವಾದಿವರ್ಯರ ನಿಕಟ ಸಂಪರ್ಕ ಮತ್ತು ಅನುಗ್ರಹೀತ ಸಾಮೀಪ್ಯದ ಕಾರಣದಿಂದಾಗಿತ್ತು. ಒಮ್ಮೆ ಆತನ ಮನಸ್ಸಿನಲ್ಲಿ ಒಂದು ಯೋಚನೆ ಬಂತು. ನನಗೂ ಹಝ್ರ‌ತ್ ಮುಹಮ್ಮದ್ ಪೈಗಂಬರರಿಗೂ[ಸ] ಮಧ್ಯೆ ಇರುವ ವ್ಯತ್ಯಾಸವೇನು? ನನಗೂ ಇಲ್‌ಹಾಂ ಉಂಟಾಗುತ್ತಿದೆಯಲ್ಲವೇ? ಈ ಯೋಚನೆಯು ಆತನನ್ನು ಸರ್ವನಾಶಕ್ಕೆ ಕೊಂಡೊಯ್ಯಿತು. ಆತ ಮರಣ ಹೊಂದಿದಾಗ ಸಮಾಧಿಯೂ (ಗೋರಿ) ಸಹ ಆತನನ್ನು ಸ್ವೀಕರಿಸದೆ ಹೊರಕ್ಕೆಸೆದುದಾಗಿ ಉಲ್ಲೇಖಿಸಲ್ಪಟ್ಟಿದೆ. 'ಬಲ್‌ಅಂ'ನಿಗೆ ಬಂದ ದುರ್ಗತಿ ಈತನಿಗೂ ಉಂಟಾಯಿತು.

ಇನ್ನೊಂದೆಡೆ, ಹಝ್ರ‌ತ್ ಉಮರ್‌ರವರಿಗೂ[ರ] ಇಲ್‌ಹಾಂ ಉಂಟಾಗುತ್ತಿತ್ತು.

ಆದರೆ ಅವರು ತನ್ನನ್ನು ಏನೂ ಅಲ್ಲವೆಂದು ತಿಳಿದಿದ್ದರು. ಅಲ್ಲಾಹನ ತೀರ್ಮಾನದ ಮೇರೆಗೆ ಆಕಾಶದಿಂದ ಅವತೀರ್ಣಗೊಳ್ಳುವ ಇಮಾಮತಿನಲ್ಲಿ ತನಗೂ ಪಾಲುಂಟೆಂದು ಅವರು ಭಾವಿಸಲಿಲ್ಲ. ಬದಲಾಗಿ, ಇಮಾಮರ ಓರ್ವ ವಿನೀತ ದಾಸನಾಗಿ ತನ್ನನ್ನು ಸ್ವಯಂ ಅರ್ಪಿಸಿಕೊಂಡರು. ಆ ಕಾರಣದಿಂದ ಅಲ್ಲಾಹನ ಕಾರುಣ್ಯವು ಅವರನ್ನು ಯಥಾರ್ಥ ಇಮಾಮರ ಪ್ರತಿಪುರುಷನನ್ನಾಗಿ ಮಾಡಿತು. ಅದೇ ರೀತಿ 'ಉವೈಸ್‌ಖರ್‌ನೀ'ಗೂ ಇಲ್‌ಹಾಂ ಉಂಟಾಗುತ್ತಿತ್ತು. ಆದರೆ ಅವರಲ್ಲಿ ಎಷ್ಟೊಂದು ವಿನಮ್ರತೆಯಿತ್ತೆಂದರೆ, ಪ್ರವಾದಿತ್ವವೆಂಬ ಸೂರ್ಯನ ಹಾಗೂ ಯಥಾರ್ಥ ಇಮಾಮತಿನ ಮುಂದೆ ಪ್ರತ್ಯಕ್ಷನಾಗುವುದು ಕೂಡ ಸಭ್ಯತೆಗೆ ವಿರುದ್ಧವಾಗಬಹುದೇ ಎಂದು ಅವರು ಅಂಜುತ್ತಿದ್ದರು. ಸಯ್ಯಿದುನಾ ಹಝ್ರತ್ ಮುಹಮ್ಮದ್ ಮುಸ್ತಫಾ[ಸ] ಎಷ್ಟೋ ಸಲ ಯಮನ್ ಕಡೆಗೆ ಮುಖ ತಿರುಗಿಸಿ 'ಯಮನ್‌ನಿಂದ ಪರಮ ದಯಾಮಯನ ಸುಗಂಧ ಬೀರುತ್ತಿದೆ' ಎಂದು ಹೇಳುತ್ತಿದ್ದರು. ಇದು ಉವೈಸ್‌ರ ಮೇಲೆ ಅಲ್ಲಾಹನ ಆಧ್ಯಾತ್ಮಿಕ ಪ್ರಕಾಶ ಇಳಿಯುತ್ತಿದೆ ಎಂಬುದರ ಸೂಚನೆಯಾಗಿತ್ತು.

ಆದರೆ ದುರದೃಷ್ಟವಶಾತ್ ಈ ಕಾಲದ ಬಹುತೇಕ ಜನರು ಇಮಾಮತಿನ ಆವಶ್ಯಕತೆಯನ್ನು ಮನಗಂಡವರಾಗಿಲ್ಲ. ಒಂದು ಸ್ವಪ್ನದರ್ಶನವು ನಿಜವಾಗಿ ಪರಿಣಮಿಸಿದ ಮಾತ್ರಕ್ಕೆ ಅಥವಾ ಕೆಲವು ಇಲ್‌ಹಾಂ ವಚನಗಳು ಅವರಿಗೆ ಲಭಿಸಿದ ಮಾತ್ರಕ್ಕೆ ತಮಗೆ ಕಾಲದ ಇಮಾಮರ (ಇಮಾಮುಝ್ಝಮಾನ್‌ರ) ಆವಶ್ಯಕತೆ ಇನ್ನಿಲ್ಲವೆಂದು ಅವರು ತಿಳಿದುಬಿಡುತ್ತಾರೆ! ನಾವೇನು ಕಡಿಮೆಯೇ ಎಂದು ಅವರು ಯೋಚಿಸುತ್ತಾರೆ. ಆದರೆ, ಈ ರೀತಿಯ ಭಾವನೆಗಳು ತೀರಾ ಅಸಂಬದ್ಧವೂ ಪಾಪಕರವೂ ಆಗಿದೆಯೆಂದು ಅವರು ತಿಳಿಯುವುದಿಲ್ಲ. ನಮ್ಮ ನಬಿವರ್ಯರು[ಸ] ಪ್ರತಿಯೊಂದು ಶತಮಾನದಲ್ಲೂ ಇಮಾಮುಝ್ಝಮಾನರ ಆವಶ್ಯಕತೆಯಿದೆ ಎಂದು ಒತ್ತಿ ಹೇಳಿದ್ದಾರೆ. ಯಾರಾದರೂ ತನ್ನ ಕಾಲದ ಇಮಾಮರನ್ನು ಸ್ವೀಕರಿಸದ ಸ್ಥಿತಿಯಲ್ಲಿ ಮರಣಹೊಂದಿದರೆ ಅಂಥವರು ಅಂಧರಾಗಿ ಅಲ್ಲಾಹನ ಮುಂದೆ ಹಾಜರಾಗುವರೆಂದೂ ಅವರ ಮರಣವು ಜಹಾಲತಿನ ಮರಣವಾಗಿರುವುದು ಎಂದೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಬಹಳ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈ ಹದೀಸ್ ವಚನದಲ್ಲಿ ನಬಿವರ್ಯರು[ಸ] ಯಾವ ಮುಲ್‌ಹಂ (ಇಲ್‌ಹಾಂ ಲಭಿಸುವ) ರನ್ನಾಗಲೀ ಯಾವ ಸ್ವಪ್ನದರ್ಶಿಯನ್ನಾಗಲೀ ಹೊರತುಪಡಿಸಲಿಲ್ಲ. ಇದರಿಂದ

ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ಮುಲ್‌ಹಂ ಅಥವಾ ಸ್ವಪ್ನದರ್ಶಿ, ಯಾರೇ ಆಗಲಿ ತನ್ನ ಕಾಲದ ಇಮಾಮರ ಸತ್ಯ ಸಂಘಟನೆಯಲ್ಲಿ ಸೇರಿಕೊಳ್ಳದಿದ್ದರೆ, ಅಂಥವರ ಪರ್ಯವಸಾನ ಆಪತ್ಕರವಾದುದು ಎಂದಾಗಿದೆ. ಯಾಕೆಂದರೆ, ಈ ಹದೀಸ್ ವಚನದ ಸಂಬೋಧಿತರು ಸಮಸ್ತ ಮುಸ್ಲಿಂ ಸಮುದಾಯವಾಗಿದೆ. ಎಲ್ಲ ಮುಅ್‌ಮಿನ್ ಮತ್ತು ಮುಸ್ಲಿಮ್ – ಅವರಲ್ಲಿ ಎಲ್ಲ ಕಾಲದ ಸಾವಿರಾರು ಸ್ವಪ್ನದರ್ಶಿಗಳೂ ಇಲ್‌ಹಾಂ ಲಭಿಸುವವರೂ ಒಳಪಡುತ್ತಾರೆ – ಅವರೆಲ್ಲರೂ ಈ ಹದೀಸ್ ವಚನದ ಸಂಬೋಧಿತರಾಗಿದ್ದಾರೆ. ವಾಸ್ತವದಲ್ಲಿ ಈ ರೀತಿ ಇಲ್‌ಹಾಂ ಲಭಿಸುವ ಕೋಟ್ಯಾಂತರ ಜನರು ಉಮ್ಮತೆ ಮುಹಮ್ಮದಿಯ್ಯ (ಮುಹಮ್ಮದ್ ಪೈಗಂಬರರ ಸಮುದಾಯ)ದಲ್ಲಿ ಹಾದು ಹೋಗಿದ್ದಾರೆ.

ಅದೂ ಅಲ್ಲದೆ, ಇಮಾಮುಝ್ಝಮಾನರ ಕಾಲದಲ್ಲಿ ಯಾರಿಗಾದರೂ ಸತ್ಯವಾದ ಸ್ವಪ್ನವಾಗಲೀ ಇಲ್‌ಹಾಂ ವಚನವಾಗಲೀ ಲಭಿಸುವುದಿದ್ದರೆ, ಯಥಾರ್ಥದಲ್ಲಿ ಅದು ಆ ಕಾಲಘಟ್ಟದ ಇಮಾಮರ ಆಧ್ಯಾತ್ಮಿಕ ಪ್ರಭಾವದ ಫಲವಾಗಿದೆ. ಯೋಗ್ಯ ಹೃದಯಗಳಲ್ಲಿ ಅವು ಪ್ರತಿಫಲನಗೊಳ್ಳುವುವು. ಇದು ನಬಿವಚನಗಳಿಂದ ಮತ್ತು ಪವಿತ್ರ ಖುರ್‌ಆನಿನಿಂದ ಸಾಬೀತಾಗುತ್ತದೆ. ಲೋಕದಲ್ಲಿ ಆ ಕಾಲಘಟ್ಟದ ಇಮಾಮರ ಆಗಮನವಾಗುವಾಗ ಅವರೊಂದಿಗೆ ಸಾವಿರಾರು ಆಧ್ಯಾತ್ಮಿಕ ಪ್ರಕಾಶ ಕಿರಣಗಳು ಸಹ ಇಳಿಯುತ್ತವೆ. ಆಕಾಶದಲ್ಲಿ ಒಂದು ರೀತಿಯ ವಿಜಯೋತ್ಸವದ ವಾತಾವರಣ ಸೃಷ್ಟಿಯಾಗುತ್ತದೆ. ಆಧ್ಯಾತ್ಮಿಕತೆಯೂ ದಿವ್ಯ ಪ್ರಕಾಶವೂ ಪ್ರಸರಣಗೊಂಡು ಅವು ಸತ್ಯದ ಚೈತನ್ಯವನ್ನು ಬಡಿದೆಬ್ಬಿಸುತ್ತದೆ. ಅದರ ಫಲವಾಗಿ ದೇವವಾಣಿಗಳನ್ನು ಗಳಿಸಲು ಯೋಗ್ಯವಾದ ಹೃದಯಗಳಲ್ಲಿ ಇಲ್‌ಹಾಂ ಉಂಟಾಗಲಾರಂಭಿಸುತ್ತದೆ. ಆಳವಾದ ಅಧ್ಯಯನದಿಂದಲೂ ಚಿಂತನೆ ಯಿಂದಲೂ ಧರ್ಮದ ಸೇವೆ ಮಾಡುವ ವ್ಯಕ್ತಿಗಳಿಗೆ ಅವರ ಚಿಂತನಾ ಶಕ್ತಿಯಲ್ಲಿ ವರ್ಧನೆಯುಂಟಾಗುತ್ತದೆ. ಆರಾಧನೆಯಲ್ಲಿ ಆಸಕ್ತಿಯಿರುವವರಿಗೆ ಅದರ ಕಡೆಗೆ ಹೆಚ್ಚಿನ ಶ್ರದ್ಧೆಯೂ ಆಸಕ್ತಿಯೂ ಉಂಟಾಗುತ್ತದೆ. ಅನ್ಯರೊಡನೆ ಸಂವಾದ – ವಿವಾದಗಳನ್ನು ನಡೆಸುವವರಿಗೆ ಅದಕ್ಕನುಗುಣವಾಗಿ ಹೊಸ ಹೊಸ ಸಾಕ್ಷ್ಯಾಧಾರ ಗಳು ಲಭ್ಯವಾಗುವುವು. ವಾಸ್ತವದಲ್ಲಿ ಇವೆಲ್ಲವೂ ಇಮಾಮುಝ್ಝಮಾನರ ಆಗಮನದೊಂದಿಗೆ ಆಕಾಶದಿಂದ ಇಳಿಯುವ ಆಧ್ಯಾತ್ಮಿಕ ಸ್ಫೂರ್ತಿಯ ಕಾರಣದಿಂದ ಉಂಟಾಗುವುವು. ಅದು ಅನುಯೋಜ್ಯವಾದ ಹೃದಯಗಳಲ್ಲಿ ಪ್ರತಿಫಲಿಸುವುದು. ಇದು ಪವಿತ್ರ ಖುರ್‌ಆನಿನಿಂದಲೂ ಸಹೀಹಾದ ಹದೀಸ್‌ಗಳಿಂದಲೂ ನಮಗೆ

ತಿಳಿದುಬರುವ ಅಲ್ಲಾಹನ ನಡವಳಿಕೆಯ ಒಂದು ಸಾಮಾನ್ಯ ಕ್ರಮವಾಗಿದೆ. ವೈಯಕ್ತಿಕ ಅನುಭವಗಳು ಕೂಡ ಇದನ್ನು ಸತ್ಯಪಡಿಸುತ್ತದೆ. ವಾಗ್ದತ್ತ ಮಸೀಹರ ಕಾಲಘಟ್ಟಕ್ಕೆ ಸಂಬಂಧಪಟ್ಟಂತೆ ಈ ಸಂಗತಿಗಳಿಗೆಲ್ಲ ಅತ್ಯಂತ ಹೆಚ್ಚಿನ ಮಹತ್ವ ನೀಡಲಾಗಿದೆ. ಅದೇನೆಂದರೆ, ಪೂರ್ವ ಪ್ರವಾದಿಗಳ ಗ್ರಂಥಗಳಲ್ಲೂ ನಬಿವರ್ಯರ ಹದೀಸ್‌ಗಳಲ್ಲೂ ಉಲ್ಲೇಖವಿರುವಂತೆ ಇಸ್ಲಾಮಿನಲ್ಲಿ ವಾಗ್ದಾನ ಮಾಡಲ್ಪಟ್ಟ ಮಸೀಹ್ ಆಗತರಾಗುವ ಕಾಲದಲ್ಲಿ ಈ ಆಧ್ಯಾತ್ಮಿಕ ತೇಜಸ್ಸು ಎಷ್ಟರ ಮಟ್ಟಿಗೆ ವ್ಯಾಪಕವಾಗಿ ಪ್ರಸರಣಗೊಳ್ಳುವುದೆಂದರೆ, ಸ್ತ್ರೀಯರಿಗೆ ಸಹ ಇಲ್‌ಹಾಂ ಉಂಟಾಗುವುದು. ಪ್ರೌಢಾವಸ್ಥೆಗೆ ತಲಪಿರದ ಬಾಲಕರು ಸಹ ಪ್ರವಾದನಗೈಯುವರು. ಸಾಮಾನ್ಯ ಜನರು ಕೂಡ ರೂಹುಲ್ ಖುದ್‌ಸಿನ ಸಹಾಯದಿಂದ ಮಾತನಾಡಲಾರಂಭಿಸುವರು ಎಂಬಿತ್ಯಾದಿಯಾಗಿ ಉಲ್ಲೇಖಗಳಿವೆ. ಇವೆಲ್ಲ 'ಮಸೀಹ್ ಮೌಊದ್'ರ ಆಧ್ಯಾತ್ಮಿಕ ಚೈತನ್ಯದಿಂದುಂಟಾಗುವುದು. ಯಾವ ರೀತಿಯಲ್ಲಿ ಒಂದು ಗೋಡೆಯ ಮೇಲೆ ಸೂರ್ಯನ ಕಿರಣಗಳು ಬೀಳುವಾಗ ಆ ಗೋಡೆಯು ಪ್ರಕಾಶಮಾನವಾಗಿ ಗೋಚರಿಸುವುದೋ ಅದೇ ರೀತಿ. ಸುಣ್ಣ-ಬಣ್ಣ ಹಚ್ಚಿದ ಗೋಡೆಯಾದರೆ ಅದು ಇನ್ನೂ ಹೆಚ್ಚು ಶುಭ್ರವಾಗಿಯೂ ಪ್ರಕಾಶಮಾನವಾಗಿಯೂ ಕಾಣುವುದು. ಮಾತ್ರವಲ್ಲ, ಅದರಲ್ಲಿ ಗಾಜಿನ ತುಂಡುಗಳನ್ನು ಅಳವಡಿಸಲಾಗಿದ್ದರೆ, ಅದರ ಪ್ರಭೆಯಿಂದ ಕಣ್ಣು ಕೋರೈಸಿ ಹೋಗುವುದು. ಆದರೆ, ಆ ಗೋಡೆಯು ಇವನ್ನೆಲ್ಲ ತನ್ನ ಸ್ವಂತಿಕೆಯೆಂದು ಹೇಳಿಕೊಳ್ಳುವಂತಿಲ್ಲ. ಯಾಕೆಂದರೆ, ಸೂರ್ಯನ ಅಸ್ತಮಯದ ನಂತರ ಆ ಗೋಡೆಯ ಪ್ರಭೆಯೂ ಇಳಿದು ಬಿಡುತ್ತದೆ. ಒಟ್ಟಿನಲ್ಲಿ, ಇಲ್‌ಹಾಮಿನ ಈ ಎಲ್ಲ ಪ್ರಜ್ವಲನವೂ ಆ ಕಾಲಘಟ್ಟದ ಇಮಾಮರ ಆಧ್ಯಾತ್ಮಿಕ ಪ್ರಕಾಶದ ಪ್ರತಿಚ್ಛಾಯೆಯಾಗಿರುತ್ತದೆ. ಅದೃಷ್ಟಹೀನನಾದ ಅಥವಾ ಅಲ್ಲಾಹನಿಂದ ಯಾವುದಾದರೂ ಪರೀಕ್ಷೆಗೆ ಗುರಿಯಾದ ದುರ್ವ್ಯಕ್ತಿಯ ಹೊರತು, ಸಾತ್ವಿಕನಾದ ಓರ್ವ ವ್ಯಕ್ತಿಗೆ ಈ ಸೂಕ್ಷ್ಮ ಸತ್ಯವನ್ನು ಸುಲಭವಾಗಿ ಕಂಡುಕೊಳ್ಳಲು ಸಾಧ್ಯವಿದೆ. ಆದರೆ, ದುರದೃಷ್ಟವಶಾತ್ ಈ ದೈವಿಕ ರಹಸ್ಯವನ್ನು ಯಾರಾದರೂ ಗ್ರಹಿಸದೆ ಹೋದಲ್ಲಿ, ಇಮಾಮುಝ್ಝಮಾನರ ಆವಿರ್ಭಾವದ ಕುರಿತು ತಿಳಿದ ನಂತರವೂ ಅವರೊಂದಿಗೆ ಸಂಪರ್ಕಹೊಂದಲು ಯಾರಾದರೂ ನಿರಾಕರಿಸಿದಲ್ಲಿ, ಅಂತಹ ವ್ಯಕ್ತಿ ಮೊದಲು ಇಮಾಮರ ಬಗ್ಗೆ ತಾತ್ಸಾರ ಹೊಂದುತ್ತಾನೆ. ಆ ತಾತ್ಸಾರದಿಂದ ಅನ್ಯತೆಯೂ ಅನ್ಯತೆಯ ಕಾರಣದಿಂದ ದುರ್ಭಾವನೆಯೂ ಉಂಟಾಗುತ್ತದೆ. ಈ ದುರ್ಭಾವನೆಯು ಕ್ರಮೇಣ ವಿದ್ವೇಷವಾಗಿ ಮಾರ್ಪಟ್ಟು ಕೊನೆಗೆ ಈಮಾನ್ ರಾಹಿತ್ಯದ ಅವಸ್ಥೆಗೂ ಗುರಿಯಾಗಬೇಕಾಗುತ್ತದೆ. (ನಊಧುಬಿಲ್ಲಾಹ್)

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆವಿರ್ಭಾವದ ಕಾಲದಲ್ಲಿ ದೇವವಾಣಿ ಮತ್ತು ದಿವ್ಯದರ್ಶನ ಸಿದ್ಧಿ ಲಭಿಸಿದ ಸಾವಿರಾರು ರಾಹಿಬ್‌ಗಳು (ಯಹೂದ್ಯ ಪುರೋಹಿತರು) ಇದ್ದರು. ಅಂತ್ಯಕಾಲದ ಮಹಾನ್ ಪ್ರವಾದಿಯ ಆಗಮನ ಕಾಲ ಸಮೀಪಿಸಿದೆ ಎಂಬ ಶುಭವಾರ್ತೆಯನ್ನು ಅವರು ಜನರಿಗೆ ನೀಡುತ್ತಲೂ ಇದ್ದರು. ಆದರೆ, ಇಮಾಮುಝ್ಝಮಾನ್ ಹಝ್ರತ್ ಖಾತಮುಲ್ ಅಂಬಿಯಾ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅವರು ಸ್ವೀಕರಿಸದೆ ಹೋದಾಗ ಅಲ್ಲಾಹನ ಕ್ರೋಧಾಗ್ನಿಯು ಅವರನ್ನು ಧ್ವಂಸಗೊಳಿಸಿಬಿಟ್ಟಿತು. ಅವರಿಗೆ ದೇವರೊಡನಿದ್ದ ಬಾಂಧವ್ಯ ಸಂಪೂರ್ಣ ಸ್ಥಗಿತಗೊಂಡಿತು. ಆ ಕುರಿತು ಪವಿತ್ರ ಖುರ್‌ಆನಿನಲ್ಲಿ ಏನೆಲ್ಲ ವಿವರಣೆಗಳಿವೆಯೋ ಅವನ್ನೆಲ್ಲ ಇಲ್ಲಿ ವಿವರಿಸುವ ಆವಶ್ಯಕತೆಯಿಲ್ಲ.

وَكَانُوا مِن قَبْلُ يَسْتَفْتِحُونَ

**ವ ಕಾನೂ ಮಿನ್ ಖಬ್‌ಲು ಯಸ್‌ತಫ್‌ತಿಹೂನ್** (2:90) ಎಂದು ಪವಿತ್ರ ಖುರ್‌ಆನಿನಲ್ಲಿ ಹೇಳಲ್ಪಟ್ಟಿರುವುದು ಇವರ ಕುರಿತಾಗಿದೆ. ಧರ್ಮದ ಸಂರಕ್ಷಣೆಗಾಗಿ ಇವರು ಅದಕ್ಕಿಂತ ಮೊದಲು ದೇವ ಸಹಾಯವನ್ನು ಯಾಚಿಸುವವರಾಗಿದ್ದರು ಎಂದಾಗಿದೆ ಈ ವಚನದ ಅರ್ಥ. ಅವರಿಗೆ ಇಲ್‌ಹಾಂ (ದಿವ್ಯವಾಣಿ) ಮತ್ತು ಕಶ್‌ಫ್ (ದಿವ್ಯದರ್ಶನ) ಉಂಟಾಗುತ್ತಿತ್ತು. ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ನಿರಾಕರಿಸಿದ ಕಾರಣದಿಂದ ಯಹೂದ್ಯರು ದೇವ ದೃಷ್ಟಿಯಲ್ಲಿ ಶಾಪಗ್ರಸ್ತರಾಗಿದ್ದರೂ ಕೂಡ, ಹಝ್ರತ್ ಪೈಗಂಬರರ(ಸ) ಕಾಲದ ಕ್ರೈಸ್ತ ಧರ್ಮವು ಸೃಷ್ಟಿ ಪೂಜೆಯಲ್ಲಿ ಮುಳುಗಿ ನಿರ್ಜೀವವಾಗಿ ಹೋಗಿದ್ದರಿಂದ ಹಾಗೂ ಅದರಲ್ಲಿ ಸತ್ಯಾಂಶ (ಹಖೀಖತ್) ಮತ್ತು ಆಧ್ಯಾತ್ಮಿಕ ಪ್ರಕಾಶ (ನೂರಾನಿಯತ್) ನಾಸ್ತಿಯಾದ ಕಾರಣದಿಂದ ಆ ಕಾಲದ ಯಹೂದ್ಯರು ಕ್ರೈಸ್ತ ಧರ್ಮವನ್ನು ಸ್ವೀಕರಿಸದ ಪಾಪದಿಂದ ವಿಮುಕ್ತರಾಗಿದ್ದರು. ಹಾಗೆ ಅವರಲ್ಲಿ ಪುನಃ ದೈವಿಕ ಪ್ರಕಾಶ ಉದ್ಭವವಾಗಿತ್ತು. ಇಲ್‌ಹಾಂ ಲಭಿಸುವವರು ಮತ್ತು ದಿವ್ಯದರ್ಶನ ಸಿದ್ಧಿ ಹೊಂದಿದವರು ಅವರಲ್ಲಿ ಹೆಚ್ಚು ಹೆಚ್ಚು ಉಂಟಾಗತೊಡಗಿದ್ದರು. ಯಹೂದ್ಯರೆಡೆಯಲ್ಲಿ ಶ್ರೇಷ್ಠ ದರ್ಜೆಯ ರಾಹಿಬ್‌ಗಳೂ ಬಹಳಷ್ಟಿದ್ದರು. ಕಾಲದ ಇಮಾಂ ಆಗಿ ಆಖಿರುಝ್ಝಮಾನದ ಶ್ರೇಷ್ಠ ಪ್ರವಾದಿ ಅತಿ ಶೀಘ್ರದಲ್ಲೇ ಅವತರಿಸುವರು ಎಂಬ ಕುರಿತು ಅವರಿಗೆ ದಿವ್ಯ ಶುಭ ಸಂದೇಶ ನಿರಂತರವಾಗಿ ಲಭಿಸುತ್ತಿತ್ತು. ದಿವ್ಯ ಜ್ಞಾನಿಗಳಾದ ಕೆಲವು ಯಹೂದ್ಯ ಪುರೋಹಿತರು ದೇವ ಸಂದೇಶ ಲಭಿಸಿದ ಕಾರಣದಿಂದ ಅರಬ್ ದೇಶಕ್ಕೆ ವಲಸೆ

ಬಂದಿದ್ದರು. ಸ್ವರ್ಗೀಯವಾದ ಒಂದು ಧರ್ಮ ವ್ಯವಸ್ಥೆ ಜಾರಿಯಾಗುವ ಕಾಲವು ಸನ್ನಿಹಿತವಾಗಿದೆಯೆಂದು ಅವರ ಚಿಕ್ಕ ಮಕ್ಕಳು ಸಹ ಅರಿತಿದ್ದರು.

يَعْرِفُونَهُ كَمَا يَعْرِفُونَ أَبْنَاءَهُمْ

**ಯಅ್‌ರಿಫೂನಹು ಕಮಾ ಯಅ್‌ರಿಫೂನ ಅಬ್‌ನಾಅಹುಂ** (2:147)

"ಅವರು ತಮ್ಮ ಮಕ್ಕಳನ್ನು ಗುರುತಿಸುವ ರೀತಿಯಲ್ಲಿ ಈ ಪ್ರವಾದಿಯನ್ನು ಗುರುತಿಸುತ್ತಾರೆ" ಎಂಬುದಾಗಿ ಪವಿತ್ರ ಖುರ್‌ಆನ್ ಹೇಳಿರುವುದು ಇದರ ಕುರಿತಾಗಿದೆ. ಆದರೆ, ಆ ವಾಗ್ದತ್ತ ಪ್ರವಾದಿಯ(ಸ) ಆಗಮನವಾದಾಗ ಅಹಂಕಾರ ಮತ್ತು ವಿದ್ವೇಷವು ಅನೇಕ ರಾಹಿಬ್‌ಗಳನ್ನು ವಿನಾಶಕ್ಕೆ ಗುರಿಪಡಿಸಿತು. ಅವರ ಹೃದಯಗಳು ಕರಟಿಹೋದವು. ಆದರೂ ಅವರಲ್ಲಿ ಕೆಲವು ಸಾತ್ವಿಕರು ಮುಸ್ಲಿಮ ರಾದರು. ಅವರದು ಕಳಂಕರಹಿತವಾದ ಸುದೃಢ ಇಸ್ಲಾಂ ಆಗಿತ್ತು. ಒಟ್ಟಿನಲ್ಲಿ, ಇದು ಭಯಪಡಬೇಕಾದ ಸನ್ನಿವೇಶವಾಗಿದೆ. ಬಹಳಷ್ಟು ಭಯಪಡಬೇಕಾದ ಸಂದರ್ಭವಾಗಿದೆ. ಅಲ್ಲಾಹನು ಯಾವ ಸತ್ಯವಿಶ್ವಾಸಿಯನ್ನಾದರೂ ಬಲ್‌ಅಮ್‌ನಂತೆ ದುರಂತಕ್ಕೆ ಗುರಿಪಡಿಸದಿರಲಿ. ನನ್ನ ಪ್ರಭೂ, ಈ ಸಮುದಾಯವನ್ನು ನೀನು ಪರೀಕ್ಷೆಯಿಂದ ಸಂರಕ್ಷಿಸು. ಯಹೂದ್ಯರ ಉದಾಹರಣೆ ಪುನರಾವರ್ತನೆಗೊಳ್ಳದಂತೆ ಈ ಉಮ್ಮತನ್ನು ನೀನು ಕಾಪಾಡು – **ಆಮೀನ್. ಸುಮ್ಮ ಆಮೀನ್.**

ಯಾವ ರೀತಿಯಲ್ಲಿ ಅಲ್ಲಾಹನು ಜನರನ್ನು ವಿವಿಧ ಗೋತ್ರಗಳನ್ನಾಗಿಯೂ ಸಮುದಾಯಗಳನ್ನಾಗಿಯೂ ವಿಂಗಡಿಸಿ, ಅವರೊಳಗೆ ಪರಸ್ಪರ ಸಂಬಂಧ ಗಳನ್ನೇರ್ಪಡಿಸಿ ಅನ್ಯೋನ್ಯ ಸಹಾನುಭೂತಿ ಮತ್ತು ಸಹಕಾರಗಳು ಉಂಟಾಗುವಂತೆ ಮಾಡಿ ಈ ಪ್ರಾಪಂಚಿಕ ವ್ಯವಹಾರ ವ್ಯವಸ್ಥೆಯನ್ನು ಸ್ಥಿರಗೊಳಿಸಿದನೋ ಅದೇ ರೀತಿಯಲ್ಲಿ ಮುಹಮ್ಮದೀ ಉಮ್ಮತಿನಲ್ಲಿ ಆಧ್ಯಾತ್ಮಿಕ ಸಂಬಂಧಗಳು ಉಂಟಾಗಲು ಹಾಗೂ ಕೆಲವರು ಇನ್ನು ಕೆಲವರಿಗೆ ಶಿಫಾರಸುದಾರರಾಗಲು ಅವನು ಆಧ್ಯಾತ್ಮಿಕ ಮಂಡಲದಲ್ಲಿ ನುಬುವ್ವತ್ ಮತ್ತು ಇಮಾಮತಿನ ಪರಂಪರೆಯನ್ನು ಸ್ಥಾಪಿಸಿರುವನು.

## ಇಮಾಮುಝ್ಝಮಾನ್ ಯಾರು?

ಇಮಾಮುಝ್ಝಮಾನ್ ಅಥವಾ ಕಾಲಘಟ್ಟದ ಇಮಾಂ ಎಂದು ಯಾರ ಕುರಿತು ಹೇಳಲಾಗುವುದು? ಇದು ಇಲ್ಲಿ ಉದ್ಭವಿಸುವ ಒಂದು ಪ್ರಮುಖ ಪ್ರಶ್ನೆಯಾಗಿದೆ. ಆ ಇಮಾಮರಿಗೆ ಇರಬೇಕಾದ ಲಕ್ಷಣಗಳೂ ಕುರುಹುಗಳೂ

ಯಾವುವು? ಇತರ ಮುಲ್‌ಹಂ (ದಿವ್ಯವಾಣಿ ಸಿದ್ಧಿಸುವವರು), ಸ್ವಪ್ನದರ್ಶಿಗಳು ಮತ್ತು ದಿವ್ಯದರ್ಶನ ಲಭಿಸುವ ಇತರ ವ್ಯಕ್ತಿಗಳಿಗಿಂತಲೂ ಕಾಲಘಟ್ಟದ ಈ ಇಮಾಮರಿಗೆ ಇರುವ ವ್ಯತ್ಯಾಸವೂ ಮಹತ್ವವೂ ಏನು? ಈ ಪ್ರಶ್ನೆಗಳ ಉತ್ತರ ಇದಾಗಿದೆ: ಯಾವ ವ್ಯಕ್ತಿಯ ಆಧ್ಯಾತ್ಮಿಕ ಶಿಕ್ಷಣವನ್ನು ಅಲ್ಲಾಹನು ಸ್ವಯಂ ನಿರ್ವಹಿಸುತ್ತಿದ್ದು ಲೋಕದೆಲ್ಲೆಡೆ ಇರುವ ಬುದ್ಧಿಶಾಲಿಗಳನ್ನೂ ತತ್ವಜ್ಞಾನಿಗಳನ್ನೂ ಎಲ್ಲ ತರದ ಸಂವಾದಗಳಲ್ಲೂ ಪರಾಭವಗೊಳಿಸಬಲ್ಲ ಇಮಾಮತಿನ ದಿವ್ಯ ಪ್ರಕಾಶವನ್ನು ಯಾರಲ್ಲಿ ಅಲ್ಲಾಹನು ನಿಕ್ಷಿಪ್ತಗೊಳಿಸುತ್ತಾನೋ ಅಂಥಹ ವ್ಯಕ್ತಿಯೇ ಇಮಾಮುಝ್ಝಮಾನ್ ಎಂಬ ಹೆಸರಿನಿಂದ ಗುರುತಿಸಲ್ಪಡುವರು. ಅವರು ಅಲ್ಲಾಹನಿಂದ ಲಭಿಸುವ ಶಕ್ತಿಯ ಮೂಲಕ, ಸೂಕ್ಷ್ಮಾತಿ ಸೂಕ್ಷ್ಮವಾದ ಎಲ್ಲ ಆರೋಪಗಳಿಗೂ ಸಮರ್ಪಕವಾದ ಉತ್ತರವನ್ನು ನೀಡಬಲ್ಲವರಾಗಿರುತ್ತಾರೆ. ಲೋಕದ ಸುಧಾರಣೆಗಾಗಿ ಸರ್ವ ಸಜ್ಜೀಕರಣ ಮತ್ತು ಸಿದ್ಧತೆಯೊಂದಿಗೆ ಈ ವ್ಯಕ್ತಿಯ ಆಗಮನವಾಗಿದೆ ಎಂದು ಒಪ್ಪಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಆದುದರಿಂದ ಯಾವನೇ ಎದುರಾಳಿಯ ಮುಂದೆ ಅಪಮಾನಿತನಾಗುವ ಸನ್ನಿವೇಶ ಅವರಿಗೆ ಬರುವುದಿಲ್ಲ. ಆಧ್ಯಾತ್ಮಿಕ ದೃಷ್ಟಿಯಲ್ಲಿ ಅವರು ಮುಹಮ್ಮದೀ ಸೇನೆಯ ಸೇನಾಧಿಪತಿಯಾಗಿರುತ್ತಾರೆ. ಅವರ ಕೈಗಳಿಂದ ಇಸ್ಲಾಮಿಗೆ ಪುನಃ ವಿಜಯ ಲಭಿಸಬೇಕೆಂಬುದು ಅಲ್ಲಾಹನ ಇಚ್ಛೆಯಾಗಿರುತ್ತದೆ. ಅವರ ಪತಾಕೆಯ ಕೆಳಗೆ ಒಟ್ಟುಸೇರುವವರಿಗೂ ಉನ್ನತ ಮಟ್ಟದ ಆಧ್ಯಾತ್ಮಿಕ ಶಕ್ತಿಯು ಲಭ್ಯವಾಗುವುದು. ಧರ್ಮ ಸುಧಾರಣೆಗೆ ಅಗತ್ಯವಿರುವ ಎಲ್ಲ ಚೈತನ್ಯಗಳನ್ನೂ ಅವರು ಹೊಂದಿರುವರು. ವಿವಿಧ ಆರೋಪಗಳಿಗೆ ಉತ್ತರ ನೀಡಲು ಹಾಗೂ ಇಸ್ಲಾಂ ಧರ್ಮದ ಮಹತ್ವವನ್ನು ಪ್ರಸಾರಪಡಿಸಲು ಬೇಕಾದ ಸರ್ವವಿಧ ಜ್ಞಾನಗಳನ್ನೂ ಅವರಿಗೆ ನೀಡಲಾಗಿರುವುದು.

ಅಂತೆಯೇ ಅವರಿಗೆ ಈ ಲೋಕದ ಅಸಭ್ಯರೊಡನೆಯೂ ದುರ್ಭಾಷಿಗಳೊಡನೆಯೂ ವ್ಯವಹರಿಸಬೇಕಾಗಿ ಬರುವುದೆಂದು ಅಲ್ಲಾಹನಿಗೆ ತಿಳಿದಿರುವುದರಿಂದ ಅತಿ ಉತ್ಕೃಷ್ಟವಾದ ಸ್ವಭಾವ ಗುಣಗಳನ್ನು ಸಹ ಅವರಿಗೆ ನೀಡಲಾಗುತ್ತದೆ. ಮಾನವ ಕುಲದೊಡನೆ ನಿಜವಾದ ಸಹಾನುಭೂತಿಯು ಅವರ ಹೃದಯದಲ್ಲಿ ಬೇರೂರಿರುವುದು. ಉತ್ಕೃಷ್ಟವಾದ ಸ್ವಭಾವಗುಣಗಳು ಎಂಬುದರ ಅರ್ಥವು ಅವರು ಯಾವಾಗಲೂ, ಎಲ್ಲ ಸಂದರ್ಭದಲ್ಲೂ ಶಾಂತರಾಗಿರುವರು ಎಂದಲ್ಲ. ಯಾಕೆಂದರೆ, ಹಾಗೆ ಇರುವುದು ಉತ್ತಮ ಸ್ವಭಾವದ ವೈಚಾರಿಕತೆಗೆ

ಅನುಯೋಜ್ಯವಾದ ಗುಣವಾಗಿರದು. ಬದಲಾಗಿ ಅದರ ಉದ್ದೇಶವೇನೆಂದರೆ, ಓರ್ವ ಸಂಕುಚಿತ ಮನಸ್ಸಿನ ವ್ಯಕ್ತಿ, ವಿರೋಧಿಗಳ ಮತ್ತು ದುರ್ಭಾಷಿಗಳ ಅಸಭ್ಯ ಮಾತುಗಳಿಂದ ತಕ್ಷಣ ಕೆರಳಿ ಕೆಂಡವಾಗಿ ಬಿಡುತ್ತಾನೆ. ರೋಷಾವೇಶ ಭರಿತನಾಗಿ ತನ್ನ ಮುಖದಲ್ಲಿ ಕ್ರೋಧವೆಂಬ ಅಗ್ನಿಯ ಕುರುಹುಗಳನ್ನು ತೋರ್ಪಡಿಸುತ್ತಾನೆ. ತನಗರಿವಿಲ್ಲದೆಯೇ ಆತನ ಬಾಯಿಯಿಂದ ಸಂದರ್ಭಕ್ಕೆ ಅನುಯೋಜ್ಯವಲ್ಲದ ಕೆಟ್ಟ ಮಾತುಗಳು ಹೊರಬೀಳುತ್ತಲೇ ಇರುತ್ತವೆ. ಈ ರೀತಿಯ ಪ್ರತಿಕ್ರಿಯೆಗಳು ಶ್ರೇಷ್ಠ ಮಟ್ಟದ ಸ್ವಭಾವಗುಣ ಹೊಂದಿದ ವ್ಯಕ್ತಿಯಿಂದ ಹೊರಹೊಮ್ಮಲು ಸಾಧ್ಯವಿಲ್ಲ. ಆದರೆ ಒಂದು ಚಿಕಿತ್ಸೆ ಎಂಬ ರೂಪದಲ್ಲಿ ಸಂದರ್ಭೋಚಿತವಾಗಿ ಕೆಲವೊಮ್ಮೆ ಕಠಿಣ ಪದಗಳನ್ನು ಉಪಯೋಗಿಸಬೇಕಾಗಿಯೂ ಬರುತ್ತದೆ. ಆದರೂ ಇಂತಹ ಕಠಿಣ ಸನ್ನಿವೇಶಗಳಲ್ಲಿ ಕೂಡ ಅವರ ಹೃದಯದಲ್ಲಿ ವಿದ್ವೇಷಾಗ್ನಿ ಜ್ವಲಿಸುವುದಿಲ್ಲ. ಅದು ಆವೇಶಭರಿತವಾಗುವುದೂ ಇಲ್ಲ. ಅವರ ಮುಖ ವಿಲಕ್ಷಣ ರೂಪ ಹೊಂದುವುದೂ ಇಲ್ಲ. ಅಂದರೆ, ಕೆಲವೊಮ್ಮೆ ಕೋಪ ತಾಪಗಳನ್ನು ತೋರ್ಪಡಿಸಬೇಕಾಗಿ ಬಂದರೂ ಆ ಮಹಾನ್ ವ್ಯಕ್ತಿಯ ಹೃದಯವಂತೂ ಪ್ರಸನ್ನವಾಗಿಯೇ ಇರುವುದು. ಅದು ಶಾಂತವೂ ಸ್ವಚ್ಛವೂ ಆಗಿರುವುದು. ಈ ಕಾರಣದಿಂದಲೇ ಪ್ರವಾದಿ ಹಝ್ರತ್ ಈಸಾ ಅಲೈಹಿಸ್ಸಲಾಂ (ಯೇಸುಕ್ರಿಸ್ತರು) ತನ್ನ ಎದುರಾಳಿಗಳ ಕುರಿತು ಅನೇಕ ಸಲ ಅತ್ಯಂತ ಕಠೋರ ಪದಗಳಾದ ಹಂದಿಗಳು, ನಾಯಿಗಳು, ನಂಬಿಕೆಯಿಲ್ಲದವರು, ದುಷ್ಟರು ಎಂಬಿತ್ಯಾದಿಗಳನ್ನು ಬಳಸಿದ್ದರೂ ಕೂಡ ನಾವು ಅವರನ್ನು ಓರ್ವ ಉತ್ತಮ ಸ್ವಭಾವ ಗುಣಗಳನ್ನು ಹೊಂದಿರದ ವ್ಯಕ್ತಿ ಎಂದು ಹೇಳಲು ಸಾಧ್ಯವಿಲ್ಲ (ನಊಧುಬಿಲ್ಲಾಹ್). ಯಾಕೆಂದರೆ, ಅವರು ಸ್ವಯಂ ಶ್ರೇಷ್ಠ ಮಟ್ಟದ ಸ್ವಭಾವ ಗುಣಗಳ ಬಗ್ಗೆ ಉಪದೇಶ ನೀಡಿದವರೂ ಸೌಮ್ಯತೆಯನ್ನೂ ಶಾಂತಿಯನ್ನೂ ಬೋಧಿಸಿದವರೂ ಆಗಿದ್ದರು. ಹಲವು ಬಾರಿ ಅವರ ಬಾಯಿಯಿಂದ ಈ ರೀತಿಯ ಕಠಿಣ ಪದಗಳು ಹೊರಟಿದ್ದರೂ, ಅವು ರೋಷಾವೇಶದಿಂದ ಉದ್ಭವಿಸಿದ ಮತಿಗೆಟ್ಟ ಮಾತುಗಳಾಗಿರಲಿಲ್ಲ. ಬದಲಾಗಿ, ಹೃದಯವು ಶಾಂತ ನಿರ್ಮಲವಾಗಿದ್ದ ಅವಸ್ಥೆಯಲ್ಲಿಯೇ ಸಂದರ್ಭೋಚಿತವಾಗಿ ನಾಲಗೆಯಿಂದ ಹೊರಬಿದ್ದ ಎಚ್ಚರಿಕೆಯ ಮಾತುಗಳಾಗಿದ್ದವು. ಒಟ್ಟಿನಲ್ಲಿ, ಉತ್ತಮ ಸ್ವಭಾವ ಗುಣಗಳ ಸಂಪೂರ್ಣತೆಯನ್ನು ಹೊಂದಿರಬೇಕಾದುದು ಇಮಾಮರ ಅನಿವಾರ್ಯ ಅರ್ಹತೆಯಾಗಿರುತ್ತದೆ. ಅನಿವಾರ್ಯ ಸಂದರ್ಭಗಳಲ್ಲಿ ಸಮಯೋಚಿತವಾಗಿ ಕೆಲವೊಮ್ಮೆ ಪ್ರಯೋಗಿಸಲ್ಪಡುವ ಕಠಿಣ ಮಾತುಗಳು, ಅವು

ರೋಷಾವೇಶದಿಂದ ಕೂಡಿರದಿದ್ದರೆ, ಅಂತಹ ಮಾತುಗಳು ಉತ್ಕೃಷ್ಟ ಗುಣ ನಡತೆಗಳಿಗೆ ವಿರುದ್ಧವಾದುದಲ್ಲ.

ಇಲ್ಲಿ ಪ್ರಸ್ತಾಪ ಯೋಗ್ಯವಾದ ಮತ್ತೊಂದು ಮುಖ್ಯ ಸಂಗತಿಯೆಂದರೆ, ಅಲ್ಲಾಹನ ಕೈಗಳು ಯಾರನ್ನು ಇಮಾಂ ಆಗಿ ಮಾಡುತ್ತದೋ ಅಂಥವರ ಸಹಜ ಗುಣದಲ್ಲಿ ಇಮಾಮತಿನ ಚೈತನ್ಯವು ಅಡಕವಾಗಿರುತ್ತದೆ.

اَعْطٰى كُلَّ شَىْءٍ خَلْقَهٗ

**ಅಅ್ತಾ ಕುಲ್ಲ ಶೈಇನ್ ಖ಼ಲ್‌ಖಹು (20: 51)**

"ಎಲ್ಲ ಜೀವಿಗಳಿಗೂ ಅದರ ಅಗತ್ಯಕ್ಕೆ ಹೊಂದಿಕೊಂಡು ಸಾಮರ್ಥ್ಯವನ್ನು ನೀಡಲಾಗಿದೆ" ಎಂಬ ಪವಿತ್ರ ಖುರ್‌ಆನ್ ವಚನದಲ್ಲಿ ವಿವರಿಸಲಾದಂತೆ ಪ್ರತಿಯೊಂದು ಪ್ರಾಣಿ ಪಕ್ಷಿಗಳಿಗೂ ಅದರದರ ಕಾರ್ಯ ನಿರ್ವಹಣೆಗೆ ಬೇಕಾಗಬಹುದೆಂದು ಅಲ್ಲಾಹನು ತಿಳಿದಿರುವ ಸಾಮರ್ಥ್ಯವನ್ನು ದೈವಿಕ ನಿಸರ್ಗ ನಿಯಮವು ಮೊದಲೇ ಆ ಜೀವಿಯಲ್ಲಿ ಅಡಕಗೊಳಿಸಿರುತ್ತದೆ. ಆದುದರಿಂದ ಯಾರು ಇಮಾಮತಿನ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ದೇವನ ತಿಳುವಳಿಕೆಯಲ್ಲಿರುವುದೋ ಅವರಲ್ಲಿ ಇಮಾಮತಿನ ಕಾರ್ಯ ನಿರ್ವಹಣೆಗೆ ಬೇಕಾದ ಎಲ್ಲ ಆಧ್ಯಾತ್ಮಿಕ ಸಾಮರ್ಥ್ಯಗಳೂ ಅಡಕಗೊಳಿಸಲ್ಪಟ್ಟಿರುತ್ತದೆ. ಅದೇ ರೀತಿ ಮುಂದೆ ಯಾವೆಲ್ಲ ಸಾಮರ್ಥ್ಯಗಳ ಆವಶ್ಯಕತೆಯಿರುವುದೋ ಆ ಸಾಮರ್ಥ್ಯಗಳ ಬೀಜವನ್ನು ಸಹ ಅವರ ಪರಿಶುದ್ಧ ಪ್ರಕೃತಿಯಲ್ಲಿ ನಿಕ್ಷಿಪ್ತಗೊಳಿಸಲಾಗುತ್ತದೆ.

ಮಾನವಕುಲದ ಪ್ರಯೋಜನಕ್ಕಾಗಿಯೂ ಆಧ್ಯಾತ್ಮಿಕ ಪುರೋಗಮನಕ್ಕಾಗಿಯೂ ಇಮಾಮರಲ್ಲಿ ಈ ಕೆಳಗಿನ ಸಾಮರ್ಥ್ಯಗಳು ಇರಬೇಕಾದುದು ಅಗತ್ಯವೆಂದು ನಾನು ಭಾವಿಸುತ್ತೇನೆ.

## ಒಂದು: ಸದಾಚಾರದ ಸಾಮರ್ಥ್ಯ (ಖುವ್ವತೆ ಅಖ್‌ಲಾಖ್)

ಇಮಾಮರಿಗೆ ವಿವಿಧ ರೀತಿಯ ದುಷ್ಟ ಸ್ವಭಾವದವರನ್ನೂ ವಿದ್ರೋಹಿಗಳನ್ನೂ ದುರ್ಭಾಷಿಗಳಾದ ಜನರನ್ನೂ ಎದುರಿಸಬೇಕಾದ ಸಂದರ್ಭಗಳು ಬರಲಿರುವುದರಿಂದ ಅವರಲ್ಲಿ ಅತಿ ಶ್ರೇಷ್ಠವಾದ ಸದಾಚಾರ ಗುಣಗಳನ್ನು ತೋರ್ಪಡಿಸುವ ಶಕ್ತಿ ಇರಬೇಕಾದುದು ಅನಿವಾರ್ಯವಾಗಿದೆ. ಯಾಕೆಂದರೆ, ಅಂತಹ ಸಂದರ್ಭಗಳಲ್ಲಿ ಅವರು ಭಾವಾವೇಶಕ್ಕೆ ಒಳಗಾಗಿ ಉನ್ಮತ್ತರಂತಾಗಬಾರದು. ಜನರು ಅವರ ಮೂಲಕ

ಲಭಿಸಬೇಕಾದ ಅನುಗ್ರಹ ಸಿದ್ಧಿಗಳಿಂದ ದೂರ ಉಳಿಯುವಂತಾಗಬಾರದು. ಓರ್ವ ವ್ಯಕ್ತಿ ದೇವನ ಸ್ನೇಹಿತನೆಂದು ಕರೆಯಲ್ಪಡುತ್ತಾ, ನೀಚ ಸ್ವಭಾವದ ಮುಷ್ಟಿಯಲ್ಲಿ ಬಂಧಿತನಾಗಿರುವುದು ಹಾಗೂ ಅನಿಷ್ಟ ಮಾತುಗಳ ಬಗ್ಗೆ ಸ್ವಲ್ಪವಾದರೂ ತಾಳ್ಮೆವಹಿಸಲು ಸಾಧ್ಯವಾಗದಿರುವುದು ಅತ್ಯಂತ ಲಜ್ಜಾಕರವಾದ ಸಂಗತಿಯಾಗಿದೆ. 'ಇಮಾಮುಝ್ಝಮಾನ್' ಎಂದು ಕರೆಯಲ್ಪಡುತ್ತಾ ಸಣ್ಣ ಪುಟ್ಟ ಮಾತುಗಳಿಗೇ ಸಿಟ್ಟಾಗುವುದು, ಮುಖ ವಿಕಾರಮಯವಾಗುವುದು, ಕಣ್ಣು ಕೆಂಪೇರುವುದು ಇತ್ಯಾದಿ ಅಪಕ್ವ ಸ್ವಭಾವಗಳನ್ನು ಹೊಂದಿರುವ ವ್ಯಕ್ತಿ ಯಾವ ಕಾರಣಕ್ಕೂ 'ಇಮಾಮುಝ್ಝಮಾನ್' ಆಗಲಾರ. ಇಮಾಂ ಆಗಿರುವ ವ್ಯಕ್ತಿಯಲ್ಲಿ

اِنَّكَ لَعَلٰى خُلُقٍ عَظِيْمٍ

**ಇನ್ನಕ ಲಅಲಾ ಖುಲುಖಿನ್ ಅಝೀಂ** (68: 5)

"ಖಂಡಿತವಾಗಿಯೂ ನೀನು ಮಹೋನ್ನತವಾದ ನೈತಿಕಗುಣಗಳನ್ನು ಹೊಂದಿರುವೆ" ಎಂಬ ಪವಿತ್ರ ಖುರ್‌ಆನಿನ ಪ್ರಸ್ತಾಪವು ಸಂಪೂರ್ಣವಾಗಿ ಸಾಕ್ಷಾತ್ಕಾರಗೊಂಡಿರಬೇಕಾದುದು ಅತಿ ಅಗತ್ಯವಾಗಿದೆ.

### ಎರಡು: ನೇತೃತ್ವದ ಸಾಮರ್ಥ್ಯ (ಖುವ್ವತೆ ಇಮಾಮತ್)

ಅವರಲ್ಲಿ ಇಮಾಮತಿನ (ಮುಂದಾಳುತ್ವದ) ಸಾಮರ್ಥ್ಯ ಇರುವುದರಿಂದಲೇ ಅವರನ್ನು ಇಮಾಂ ಎಂದು ಹೆಸರಿಸಲಾಗುತ್ತದೆ. ಅಂದರೆ, ಒಳ್ಳೆಯ ಮಾತುಗಳು, ಒಳ್ಳೆಯ ಸ್ವಭಾವ, ದೈವಿಕ ಜ್ಞಾನ ಮತ್ತು ದೇವಸ್ನೇಹ ಇವುಗಳಲ್ಲಿ ಮುಂದೆ ಮುಂದೆ ಸಾಗುವ ಇಚ್ಛಾಶಕ್ತಿ ಇರುವುದು. ಇವುಗಳಲ್ಲಿ ಯಾವುದರ ಅತಿ ಚಿಕ್ಕ ನಷ್ಟವನ್ನು ಕೂಡ ಅವರ ಆತ್ಮವು ಇಷ್ಟಪಡಲಾರದು ಅಥವಾ ಅವುಗಳಲ್ಲಿ ಕೊರತೆಯುಂಟಾಗುವ ಅವಸ್ಥೆಯನ್ನು ಅವರು ಒಪ್ಪಲಾರರು. ಅಭಿವೃದ್ಧಿಯ ಪಥದಲ್ಲಿ ತೊಡಕುಗಳು ಉಂಟಾಗುವಾಗ ಅವರ ಮನಸ್ಸು ನೋವನ್ನು ಅನುಭವಿಸುತ್ತದೆ. ಇದು ಇಮಾಮರಲ್ಲಿ ನೈಸರ್ಗಿಕವಾಗಿ ಅಡಕಗೊಂಡಿರುವ ಒಂದು ಚೇತನವಾಗಿದೆ. ಜನರು ಅವರ ತಿಳುವಳಿಕೆಯನ್ನೂ ದೇವಜ್ಞಾನವನ್ನೂ ಮನವರಿಕೆ ಮಾಡಿಕೊಂಡು ಅವರಿಗೆ ಲಭಿಸಿದ ದಿವ್ಯಪ್ರಕಾಶವನ್ನು ಅನುಸರಿಸಿ ನಡೆಯಲು ತಯಾರಿಲ್ಲದ ಒಂದು ಅವಸ್ಥೆ ಸೃಷ್ಟಿಯಾದರೂ ಕೂಡ ತನ್ನ ಈ ಸಹಜವಾದ ದಿವ್ಯ ಚೇತನಗಳ ಕಾರಣದಿಂದ ಅವರು ಇಮಾಂ ಎಂದೇ

ಗಣಿಸಲ್ಪಡುವರು. ಇಮಾಮತ್ ಎಂದರೆ, ಅಲ್ಲಾಹನು ಈ ಕಾರ್ಯ ಸಾಧನೆಗಾಗಿ ತಾನು ಆರಿಸುವ ವ್ಯಕ್ತಿಯ ಪರಿಶುದ್ಧ ಪ್ರಕೃತಿಯಲ್ಲಿ ನಿಕ್ಷಿಪ್ತಗೊಳಿಸುವ ಒಂದು ದಿವ್ಯ ಚೇತನವಾಗಿದೆ ಎಂಬುದು ನೆನಪಿಟ್ಟುಕೊಳ್ಳಬೇಕಾದ ಪರಮಾರ್ಥವಾಗಿದೆ. 'ಇಮಾಮತ್' ಎಂಬ ಶಬ್ದವನ್ನು ಭಾಷಾಂತರಿಸುವುದಿದ್ದರೆ, ಮುಂದಾಳುತ್ವದ ಚೇತನ ಎಂದು ಇದಕ್ಕೆ ಅರ್ಥ ನೀಡಬಹುದು, ಒಟ್ಟಿನಲ್ಲಿ, ಇದು ನಂತರ ಬಂದು ಸೇರುವಂತಹ ತಾತ್ಕಾಲಿಕವಾದೊಂದು ಪದವಿಯಲ್ಲ. ಬದಲಾಗಿ, ಯಾವ ರೀತಿ ಮನುಷ್ಯನಲ್ಲಿ ಕಾಣುವ ಶಕ್ತಿಯೂ ಕೇಳುವ ಶಕ್ತಿಯೂ ಮನವರಿಕೆ ಮಾಡುವ ಶಕ್ತಿಯೂ ಸಹಜವಾಗಿ ಬೆಳೆದು ಬರುತ್ತದೋ ಅದೇ ರೀತಿ ಇದು ಸಹ ದೈವಿಕ ಕಾರ್ಯಗಳಲ್ಲಿ ಮುಂದೆ ಮುಂದೆ ಸಾಗುವ ಹಾಗೂ ಎಲ್ಲರಿಗಿಂತಲೂ ಮೊದಲನೆಯ ಸ್ಥಾನಗಳಿಸುವ ಒಂದು ಶಕ್ತಿಯಾಗಿದೆ. ಇಮಾಮತ್ ಎಂಬ ಶಬ್ದವು ಈ ಎಲ್ಲ ಅರ್ಥಗಳನ್ನೂ ಬಿಂಬಿಸುತ್ತದೆ.

## ಮೂರು: ಅಪರಿಮಿತ ಮತ್ತು ಆಳವಾದ ಜ್ಞಾನ (ಬಸ್ತತ್ ಫಿಲ್ ಇಲ್ಮ್)

ಮೂರನೆಯ ಅನಿವಾರ್ಯ ಘಟಕವು ಜ್ಞಾನದ ವೈಶಿಷ್ಟ್ಯತೆಯಾಗಿದೆ. ಇಮಾಮತಿನ ಉದ್ದೇಶವು ಸರ್ವ ವಿಧ ವಾಸ್ತವಾಂಶಗಳಲ್ಲೂ ದಿವ್ಯ ಜ್ಞಾನದಲ್ಲೂ ಅವಶ್ಯಕವಾದ ಸ್ನೇಹದಲ್ಲೂ ಸತ್ಯಸಂಧತೆ ಮತ್ತು ನಿಷ್ಠೆಯಲ್ಲೂ ಎಲ್ಲರಿಗಿಂತ ಮುಂದೆ ಆಗಿರಲು ಪ್ರೇರಣೆ ನೀಡುವುದರಿಂದ ಅವರು ತನ್ನ ಇತರ ಎಲ್ಲ ಸಾಮರ್ಥ್ಯಗಳನ್ನೂ ಇದರ ಸೇವೆಗಾಗಿ ಉಪಯೋಗಿಸುತ್ತಾರೆ. ಅವರು **ರಬ್ಬಿ ಝಿದ್‌ನೀ ಇಲ್‌ಮಾ (20:115)** "ನನ್ನ ಪ್ರಭೂ, ನನಗೆ ಜ್ಞಾನವನ್ನು ಹೆಚ್ಚಿಸು" ಎಂದು ಪ್ರಾರ್ಥಿಸುತ್ತಲೇ ಇರುತ್ತಾರೆ. ಮೊದಲೇ ಅವರ ಗ್ರಹಣಶಕ್ತಿಯೂ ಜ್ಞಾನೇಂದ್ರಿಯಗಳೂ ಈ ಕಾರ್ಯಗಳಿಗಾಗಿ ಪಕ್ವವಾಗಿರುವ ಕಾರಣ ದೇವಾನುಗ್ರಹದಿಂದ ಅವರಿಗೆ ದಿವ್ಯ ಜ್ಞಾನಗಳಲ್ಲಿ ಪರಿಪೂರ್ಣತೆಯನ್ನು ಪ್ರದಾನ ಮಾಡಲಾಗುತ್ತದೆ. ಹಾಗೆ, ಅವರ ಕಾಲದಲ್ಲಿ ಪವಿತ್ರ ಖುರ್‌ಆನಿನ ದಿವ್ಯಜ್ಞಾನವನ್ನು ಗ್ರಹಿಸುವುದರಲ್ಲೂ ಅದರ ಪರಿಪಕ್ವತೆಯಲ್ಲೂ ಅದರ ಹೊಣೆಗಾರಿಕೆಯ ನಿರ್ವಹಣೆಯಲ್ಲೂ ಅವರಿಗೆ ಸರಿಸಾಟಿಯಾಗಿ ಬೇರೆ ಯಾರೂ ಇರಲಾರರು. ಅವರ ನಿರೂಪಣೆಯು ಇತರರ ತಿಳುವಳಿಕೆಗಳನ್ನು ತಿದ್ದಿ ಸರಿಪಡಿಸುತ್ತದೆ. ಧರ್ಮ ತತ್ವಗಳ ನಿರೂಪಣೆಯಲ್ಲಿ ಇತರರ ಅಭಿಪ್ರಾಯಗಳು ಅವರ ಅಭಿಪ್ರಾಯಕ್ಕಿಂತ ಭಿನ್ನವಾಗಿದ್ದಲ್ಲಿ ಸತ್ಯವು ಅವರ ಪಕ್ಷದಲ್ಲಿರುವುದು. ಯಾಕೆಂದರೆ, ಯಥಾರ್ಥ ಜ್ಞಾನವನ್ನು ಗ್ರಹಿಸಲು ಅವರಿಗೆ ದಿವ್ಯ

ಪ್ರಕಾಶದ ಸಹಾಯ ದೊರಕುತ್ತದೆ. ಅಂತಹ ಉಜ್ವಲ ತೇಜಸ್ಸಿನಿಂದೊಡಗೂಡಿದ ಆ ಪ್ರಕಾಶದ ಸಹಾಯವು ಇತರರಿಗೆ ಲಭಿಸಲಾರದು. ذٰلِكَ فَضۡلُ اللّٰهِ يُؤۡتِيۡهِ مَنۡ يَّشَآءُ **ಧ್ವಾಲಿಕ ಫಝ್‌ಲುಲ್ಲಾಹಿ ಯುಅ್‌ತೀಹಿ ಮನ್‌ಯಶಾಉ** **(62: 5)** "ಅದು ಅಲ್ಲಾಹನ ಅನುಗ್ರಹವಾಗಿದೆ. ಅವನು ಇಚ್ಛಿಸುವವರಿಗೆ ಅದನ್ನು ದಯಪಾಲಿಸುತ್ತಾನೆ."

ಯಾವ ರೀತಿ ಕೋಳಿಯು ಮೊಟ್ಟೆಗಳನ್ನು ತನ್ನ ರೆಕ್ಕೆಗಳೊಳಗೆ ಇರಿಸಿಕೊಂಡು ಅವುಗಳನ್ನು ಮರಿಗಳನ್ನಾಗಿ ಪರಿವರ್ತಿಸಿ ನಂತರ ಆ ಮರಿಗಳನ್ನು ತನ್ನ ಬಾಹುಗಳೊಳಗೆ ಇರಿಸಿಕೊಂಡು ತನ್ನ ಶರೀರದ ಕಾವಿನಿಂದ ಅವುಗಳಿಗೆ ಚೈತನ್ಯವನ್ನು ನೀಡುತ್ತದೋ ಅದೇ ರೀತಿ ಕಾಲದ ಇಮಾಂ ಆದವರು ಅವರ ಸಮೀಪವರ್ತಿಗಳನ್ನು ತನ್ನ ಆಧ್ಯಾತ್ಮಿಕ ಜ್ಞಾನ ಮೂಲಕ ವರ್ಣರಂಜಿತರನ್ನಾಗಿ ಮಾಡುತ್ತಾರೆ ಹಾಗೂ ಸುದೃಢವಾದ ವಿಶ್ವಾಸ ಮತ್ತು ದೇವಜ್ಞಾನದಲ್ಲಿ ಅವರನ್ನು ಅಭಿವೃದ್ಧಿಪಡಿಸುತ್ತಲೇ ಇರುತ್ತಾರೆ. ಆದರೆ, ಇತರ ಮುಲ್‌ಹಂ ಮತ್ತು ಝ್ಹಾಹಿದ್‌ಗಳಿಗೆ ಈ ರೀತಿಯ ವಿಶಿಷ್ಟ ಜ್ಞಾನದ ಆವಶ್ಯಕತೆಯಿರುವುದಿಲ್ಲ. ಯಾಕೆಂದರೆ, ಸಮಸ್ತ ಜನರ ಜ್ಞಾನ ಸಂಬಂಧವಾದ ಶಿಕ್ಷಣದ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿರುವುದಿಲ್ಲ. ಅಂತಹ ಝ್ಹಾಹಿದ್ ಮತ್ತು ಸ್ವಪ್ನದರ್ಶಿಗಳಲ್ಲಿ ಜ್ಞಾನದ ಸ್ವಲ್ಪ ಕೊರತೆಯಿದ್ದರೂ ಅಥವಾ ಅಜ್ಞತೆಯೇ ಉಳಿದು ಬಿಟ್ಟರೂ ಅದು ಆಕ್ಷೇಪಾರ್ಹವಲ್ಲ. ಯಾಕೆಂದರೆ ಅವರು ಯಾವುದೇ ದೋಣಿಯ ಚುಕ್ಕಾಣಿ ಹಿಡಿದವರಾಗಿರುವುದಿಲ್ಲ. ಬದಲಾಗಿ ಅವರು ನಿಜವಾದ ಅಂಬಿಗನ ಆಸರೆಯಲ್ಲಿರುವವರಾಗಿದ್ದಾರೆ. ಆದುದರಿಂದ ಅವರು ತಮ್ಮ ಬಗ್ಗೆ ಸ್ವಯಂ ಏನೇನೋ ತಿಳಿದುಕೊಂಡು ನಮಗೆ ಆಧ್ಯಾತ್ಮಿಕ ಅಂಬಿಗನ ಆವಶ್ಯಕತೆಯಿಲ್ಲವೆಂಬ ತಪ್ಪು ಭಾವನೆಯಲ್ಲಿ ಮುಂದುವರಿಯಬಾರದು. ಖಂಡಿತವಾಗಿಯೂ ಅವರಿಗೆ ಅಂತಹ ಆಧ್ಯಾತ್ಮಿಕ ನೇತಾರನ ಆವಶ್ಯಕತೆಯಿದೆ ಎಂದು ಅವರು ತಿಳಿದುಕೊಳ್ಳತಕ್ಕದ್ದು. ಯಾವ ರೀತಿ ಹೆಣ್ಣಿಗೆ ಗಂಡಿನ ಆವಶ್ಯಕತೆಯಿದೆಯೋ ಅದೇ ರೀತಿ. ಅಲ್ಲಾಹನು ಪ್ರತಿಯೊಂದನ್ನೂ ಒಂದೊಂದು ಉದ್ದೇಶಕ್ಕಾಗಿ ಸೃಷ್ಟಿಸಿರುವನು. ಒಟ್ಟಿನಲ್ಲಿ ಇಮಾಮತಿಗಾಗಿ ಸೃಷ್ಟಿಸಲ್ಪಡದ ಓರ್ವ ವ್ಯಕ್ತಿ ತನ್ನ ನಾಲಗೆಯಿಂದ ಅಂತಹ ಒಂದು ವಾದವನ್ನು ಹೊರಡಿಸಿದರೆ, ಆತನು ಜನರ ಮಧ್ಯೆ ಅಪಹಾಸ್ಯಕ್ಕೀಡಾಗುವನು. ತಿಳಿಗೇಡಿ ಸಂತನೋರ್ವ ರಾಜನ ಸನ್ನಿಧಿಯಲ್ಲಿ ಅಪಹಾಸ್ಯಕ್ಕೀಡಾದಂತೆ. ಆ ಕಥೆ ಈ ರೀತಿಯಿದೆ: ಒಂದು ಊರಿನಲ್ಲಿ ಓರ್ವ ಝ್ಹಾಹಿದ್ (ಯೋಗಿ) ಇದ್ದರು. ಅವರು ಗುಣವಂತರೂ ಭಯಭಕ್ತಿಯುಳ್ಳವರೂ ಆಗಿದ್ದರೂ ಸಹ ಜ್ಞಾನಸಂಪನ್ನರಾಗಿರಲಿಲ್ಲ. ಊರಿನ ಅರಸನಿಗಾದರೋ ಅವರ

ಮೇಲೆ ತುಂಬಾ ಗೌರವ. ಆದರೆ, ಅವರು ಜ್ಞಾನವಂತರಲ್ಲದ ಕಾರಣ ಆಸ್ಥಾನದ ಮಂತ್ರಿ ಅವರನ್ನು ಗೌರವಿಸುತ್ತಿರಲಿಲ್ಲ. ಒಂದು ಸಲ ಮಂತ್ರಿ ಮತ್ತು ರಾಜ ಆ ಸಂತನನ್ನು ಭೇಟಿಯಾಗಲು ಹೋದರು. ಮಾತಿನ ಮಧ್ಯೆ ಅವರು ಅನಾವಶ್ಯಕವಾಗಿ ಇಸ್ಲಾಮಿನ ಚರಿತ್ರೆಯನ್ನು ವಿವರಿಸಲು ಹೋಗಿ ರಾಜನೊಡನೆ: 'ಅಲೆಕ್ಸಾಂಡರ್ ಸಹ ಈ ಉಮ್ಮತಿನಲ್ಲಿ ಆಗಿಹೋದ ಓರ್ವ ಪ್ರಸಿದ್ಧ ರಾಜನಾಗಿದ್ದ' ಎಂದು ಹೇಳಿದರು. ಆಗ ಮಂತ್ರಿಗೆ ಅವರನ್ನು ಕೆಣಕಲು ಒಳ್ಳೆಯ ಸಂದರ್ಭ ಲಭಿಸಿತು. ಕೂಡಲೇ ಮಂತ್ರಿ ಈ ರೀತಿ ಹೇಳಿದರು: "ನೋಡಿ ಮಹಾರಾಜರೇ, ಈ ಸಂತರಿಗೆ ಆಧ್ಯಾತ್ಮಿಕ ಪರಿಣತಿಯೊಂದಿಗೆ ಇತಿಹಾಸದ ಕುರಿತು ಸಹ ವಿಶೇಷವಾದ ಜ್ಞಾನವಿದೆ!"

ಒಟ್ಟಿನಲ್ಲಿ, ಕಾಲದ ಇಮಾಮರಿಗೆ ತನ್ನ ವಿರೋಧಿಗಳನ್ನು ಮತ್ತು ಸಾಮಾನ್ಯ ಜಿಜ್ಞಾಸುಗಳನ್ನು ಎದುರಿಸುವ ವಿಷಯದಲ್ಲಿ ಇಲ್‌ಹಾಮಿನ ಆವಶ್ಯಕತೆಗಿಂತಲೂ ಜ್ಞಾನ ಸಂಪನ್ನತೆಯ ಸಾಮರ್ಥ್ಯವು ಹೆಚ್ಚು ಅವಶ್ಯಕವಾಗಿರುತ್ತದೆ. ಯಾಕೆಂದರೆ, ಶರೀಅತಿನ ಕುರಿತು ವಿವಿಧ ರೀತಿಯಲ್ಲಿ ಆಕ್ಷೇಪ ಎತ್ತುವವರು ಇರುತ್ತಾರೆ. ವೈದ್ಯ ಶಾಸ್ತ್ರದ ವೀಕ್ಷಣೆಯಲ್ಲಿ, ಖಗೋಳ ಶಾಸ್ತ್ರದ ದೃಷ್ಟಿಕೋನದಲ್ಲಿ, ಪ್ರಕೃತಿ ವಿಜ್ಞಾನದ ಬಗ್ಗೆ, ಭೂಮಿ ಶಾಸ್ತ್ರದ ಕುರಿತು, ಇಸ್ಲಾಮೀ ಗ್ರಂಥಗಳ ಇತಿಹಾಸದ ಕುರಿತು, ಅಂತೆಯೇ ವಿಚಾರವಾದದ ದೃಷ್ಟಿಕೋನದಲ್ಲೂ ಹಾಗೂ ಪುರಾವೆಗಳನ್ನು ಒದಗಿಸುವ ಬಗ್ಗೆಯೂ ಹೀಗೆ ಹಲವಾರು ರೀತಿಯ ಪ್ರಶ್ನೆಗಳೂ ವಿಮರ್ಶೆಗಳೂ ಉದ್ಭವಿಸಬಹುದು. ಕಾಲದ ಇಮಾಮರು ಇಸ್ಲಾಂ ಧರ್ಮದ ಅಜೇಯ ಸೇನಾನಿ ಎಂದು ಗುರುತಿಸಲ್ಪಡುವವರಾಗಿದ್ದಾರೆ. ಧರ್ಮವೆಂಬ ತೋಟಕ್ಕೆ ಅಲ್ಲಾಹನಿಂದ ನಿಯುಕ್ತಿಗೊಂಡ ತೋಟಗಾರ. ಪ್ರತಿಯೊಂದು ಆರೋಪಕ್ಕೂ ಉತ್ತರ ನೀಡಬೇಕಾದುದು ಹಾಗೂ ಎಲ್ಲ ವಿಮರ್ಶಕರನ್ನೂ ಆಕ್ಷೇಪಕರನ್ನೂ ನಿರುತ್ತರಗೊಳಿಸಬೇಕಾದುದು ಇಮಾಮುಝ್ಝಮಾನರ ಕರ್ತವ್ಯವಾಗಿರುತ್ತದೆ. ಅಷ್ಟು ಮಾತ್ರವಲ್ಲ, ಅವರು ಕೇವಲ ಆರೋಪಗಳನ್ನೂ ಸಂಶಯಗಳನ್ನೂ ನಿವಾರಿಸಿದರೆ ಮಾತ್ರ ಸಾಲದು. ಇಸ್ಲಾಂ ಧರ್ಮದ ಮಹತ್ವವನ್ನೂ ಸೌಂದರ್ಯವನ್ನೂ ಲೋಕಕ್ಕೆ ವಿವರಿಸಿಕೊಡಬೇಕಾದುದು ಸಹ ಅವರ ಹೊಣೆಗಾರಿಕೆಯಾಗಿರುತ್ತದೆ. ಆದುದರಿಂದ ಅಂತಹ ವ್ಯಕ್ತಿ ಅತ್ಯಂತ ಆದರಣೀಯನಾಗಿರುತ್ತಾರೆ. ಮುಟ್ಟಿದ್ದನ್ನೆಲ್ಲ ಬಂಗಾರವನ್ನಾಗಿ ಮಾರ್ಪಡಿಸುವ ದಿವ್ಯ ಸಾಮರ್ಥ್ಯ ಅವರಿಗಿರುತ್ತದೆ. ಯಾಕೆಂದರೆ, ಅವರ ವ್ಯಕ್ತಿತ್ವದ ಮೂಲಕ ಇಸ್ಲಾಮಿನ ಜೀವ ಚೈತನ್ಯವು ಪ್ರತ್ಯಕ್ಷವಾಗುವುದು. ಅವರು

ಇಸ್ಲಾಮಿನ ಅಭಿಮಾನದ ಚಿಹ್ನೆಯಾಗಿರುವರು. ಸಮಸ್ತ ಜನರಿಗೋಸ್ಕರ ಅವರು ಅಲ್ಲಾಹನ ನ್ಯಾಯಪೂರ್ತೀಕರಣದ ಹೇತುವಾಗುವರು. ಅವರಿಂದ ಬೇರ್ಪಟ್ಟು ನಿಲ್ಲುವುದು ಯಾರಿಗೂ ಅನುಮತನೀಯವಲ್ಲ. ಯಾಕೆಂದರೆ, ಅವರು ಅಲ್ಲಾಹನ ಇಚ್ಛೆ ಮತ್ತು ಉದ್ದೇಶದಂತೆ ಇಸ್ಲಾಮಿನ ಅಭಿಮಾನದ ಸಂರಕ್ಷಕರಾಗಿರುತ್ತಾರೆ. ಎಲ್ಲ ಮುಸ್ಲಿಮರೊಡನೆಯೂ ಸಹಾನುಭೂತಿ ಹೊಂದಿದವರಾಗಿರುತ್ತಾರೆ. ಧಾರ್ಮಿಕ ಪರಿಪೂರ್ಣತೆಯ ಮಂಡಲವನ್ನು ಪೂರ್ಣವಾಗಿ ಆವರಿಸಿ ನಿಲ್ಲುವವರೂ ಆಗಿರುತ್ತಾರೆ. ಇಸ್ಲಾಂ ಮತ್ತು ಕುಫ್ರ್‌ನ (ಅವಿಶ್ವಾಸದ) ಪ್ರತಿಯೊಂದು ಹೋರಾಟದಲ್ಲೂ ಮೇಲುಗೈ ಅವರದೇ ಆಗಿರುತ್ತದೆ. ಅವರ ಪರಿಶುದ್ಧ ನಿಶ್ವಾಸ ದಿಂದ ಕುಫ್ರ್ ನಿಗ್ರಹಿಸಲ್ಪಡುವುದು. ಅವರು ಕಾಂಡದಂತೆ; ಇತರ ಎಲ್ಲವೂ ಅದರ ಶಾಖೆಯಂತೆ.

او چو کل و تو چو جزئی نے کلی
تو ہلاک استی گر از وے بگسلی

"ಅವರು ಪರಿಪೂರ್ಣತೆಯನ್ನು ಹೊಂದಿದವರು ಮತ್ತು ನೀನು ಅದರ ಒಂದು ಭಾಗ ಮಾತ್ರ. ಅವರಿಂದ ನೀನು ಬೇರ್ಪಟ್ಟು ದೂರವಾದರೆ ನಿನಗೆ ವಿನಾಶ ನಿಶ್ಚಿತ."

## ನಾಲ್ಕು: ದೃಢನಿಶ್ಚಯ ಅಥವಾ ಸ್ಥಿರಸಂಕಲ್ಪದ ಸಾಮರ್ಥ್ಯ (ಖುವ್ವತೆ ಅಝ್ಮ್)

ಸ್ಥಿರಸಂಕಲ್ಪದ ಸಾಮರ್ಥ್ಯ ಇಮಾಮುಝ್ಝಮಾನ್‌ರಿಗೆ ಇರಬೇಕಾದ ಮತ್ತೊಂದು ಅನಿವಾರ್ಯ ಗುಣ. ಸ್ಥಿರಸಂಕಲ್ಪದ ಸಾಮರ್ಥ್ಯ ಎಂಬುದರ ತಾತ್ಪರ್ಯವು, ಯಾವತ್ತೂ ಯಾವ ಸನ್ನಿವೇಶದಲ್ಲೂ ಆಯಾಸಗೊಳ್ಳದಿರುವುದು, ತಾಳ್ಮೆಗೆಡದಿರುವುದು, ನಿರಾಶೆಗೊಳ್ಳದಿರುವುದು ಮತ್ತು ತನ್ನ ಉದ್ದೇಶ ನಿರ್ವಹಣೆಯಲ್ಲಿ ಯಾವತ್ತೂ ನಿರಾಸಕ್ತಿ ತೋರಿಸದಿರುವುದು ಆಗಿದೆ. ಕೆಲವೊಮ್ಮೆ ಇಮಾಮುಝ್ಝಮಾನರಾದ ಪ್ರವಾದಿಗಳಿಗೂ ಮುರ್‌ಸಲ್‌ಗಳಿಗೂ ಮುಹದ್ದಸ್‌ಗಳಿಗೂ ಕೆಲವು ಪರೀಕ್ಷೆಗಳು ಎದುರಾಗುತ್ತವೆ. ಅಲ್ಲಾಹನು ತಮ್ಮನ್ನು ಕೈಬಿಟ್ಟಿರುವನೇ, ನಾಶಪಡಿಸಲು ಬಯಸಿರುವನೇ ಎಂದು ತೋರಿಬಿಡುವಂತಹ ಕೆಲವು ವಿಪತ್ತುಗಳಿಗೂ ಸಂಕಷ್ಟಗಳಿಗೂ ಅವರು ಗುರಿಯಾಗುತ್ತಾರೆ. ಕೆಲವೊಮ್ಮೆ ಅವರಿಗೆ ಲಭಿಸುವ ವಹ್ಯ್‌ಗಳೂ ಇಲ್‌ಹಾಮ್‌ಗಳೂ ಸ್ಥಗಿತಗೊಳ್ಳುತ್ತವೆ. ಅಂದರೆ,

ಸ್ವಲ್ಪ ಕಾಲದ ವರೆಗೆ ಅವರಿಗೆ ವಹ್ಯ್ ಲಭಿಸುವುದಿಲ್ಲ. ಮತ್ತೆ ಕೆಲವೊಮ್ಮೆ ಅವರ ಕೆಲವು ಭವಿಷ್ಯವಾಣಿಗಳು ಪರೀಕ್ಷೆಯ ರೂಪದಲ್ಲಿ ಪ್ರಕಟಗೊಳ್ಳುತ್ತವೆ. ಅಂದರೆ, ಅದರ ಸತ್ಯಾವಸ್ಥೆಯು ಸಾಮಾನ್ಯ ಜನರಿಗೆ ಮನವರಿಕೆಯಾಗದ ರೂಪದಲ್ಲಿ ಇರುತ್ತದೆ. ಕೆಲವೊಮ್ಮೆ ಅವುಗಳ ಗುರಿಸಾಧನೆಯ ಕಾಲಾವಧಿಯು ತುಂಬಾ ದೀರ್ಘವಾಗಿ ಬಿಡುತ್ತದೆ. ಅದೇ ರೀತಿ ಕೆಲವೊಂದು ಸಂದರ್ಭದಲ್ಲಿ ಅವರು ಲೋಕದಲ್ಲಿ ತಡೆಹಿಡಿಯಲ್ಪಟ್ಟವರಂತೆ ಆಗುತ್ತಾರೆ. ಉಪೇಕ್ಷಿಸಲ್ಪಟ್ಟವರಂತೆಯೂ ಶಾಪಗ್ರಸ್ತರಂತೆಯೂ ದೂರೀಕರಿಸಲ್ಪಟ್ಟವರಂತೆಯೂ ಆಗಿ ಬಿಡುತ್ತಾರೆ. ಅವರನ್ನು ನಿಂದಿಸುವ ಪ್ರತಿಯೊಬ್ಬ ವ್ಯಕ್ತಿ ತಾನು ದೊಡ್ಡ ಸತ್ಕರ್ಮ ಮಾಡುತ್ತಿರುವುದಾಗಿ ಭಾವಿಸುತ್ತಾ ಅವರನ್ನು ನಿಂದಾತ್ಮಕ ದೃಷ್ಟಿಯಿಂದ ನೋಡುವನು ಹಾಗೂ ಸಲಾಂ ಹೇಳಿದರೆ ಉತ್ತರ ನೀಡಲು ಕೂಡ ಬಯಸುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಅವರ ದೃಢನಿಶ್ಚಯದ ಸಾಮರ್ಥ್ಯವು ಪರೀಕ್ಷಿಸಲ್ಪಡುತ್ತದೆ. ಆದರೆ, ಈ ರೀತಿಯ ಪರೀಕ್ಷೆಗಳಲ್ಲಿ ಅವರು ಯಾವತ್ತೂ ತಾಳ್ಮೆಗೆಡುವುದಿಲ್ಲ. ತಮ್ಮ ಕಾರ್ಯ ನಿರ್ವಹಣೆಯಲ್ಲಿ ಆಲಸ್ಯಕ್ಕೊಳಗಾಗುವುದೂ ಇಲ್ಲ. ಅಲ್ಲಾಹನ ಸಹಾಯದ ಕಾಲ ಸನ್ನಿಹಿತವಾಗುವವರೆಗೂ ಇದು ಮುಂದುವರಿಯುತ್ತದೆ.

**ಐದು: ದೇವಾರ್ಪಣೆಯ ಸಾಮರ್ಥ್ಯ (ಖುವ್ವತೆ ಇಖ್‌ಬಾಲ್ ಅಲಲ್ಲಾಹ್)**

ಇಮಾಮುಝ್ಝಮಾನ್‌ರಿಗೆ ಅವಶ್ಯವಾಗಿ ಇರಬೇಕಾದ ಮತ್ತೊಂದು ಸಾಮರ್ಥ್ಯವು ಅಲ್ಲಾಹನಲ್ಲಿ ಸರ್ವವನ್ನೂ ಸಮರ್ಪಿಸುವ ಮನೋಭಾವವಾಗಿದೆ. ಇಖ್‌ಬಾಲ್ ಅಲಲ್ಲಾಹ್ ಅಂದರೆ, ಅವರು ಸಂಕಷ್ಟದ ಅವಸ್ಥೆಯಲ್ಲಿ ಅಥವಾ ಪರೀಕ್ಷಿಸಲ್ಪಡುವ ಸಮಯದಲ್ಲಿ, ಅದೇ ರೀತಿ ಕಡು ವಿರೋಧಿಗಳನ್ನು ಎದುರಿಸಬೇಕಾದ ಸಂದರ್ಭಗಳಲ್ಲಿ ಹಾಗೂ ಯಾವುದಾದರೂ ದಿವ್ಯ ದೃಷ್ಟಾಂತವನ್ನು ತೋರಿಸಬೇಕಾದ ವೇಳೆಯಲ್ಲಿ ಅಥವಾ ಯಾವುದಾದರೂ ವಿಜಯದ ಆವಶ್ಯಕತೆ ಉಂಟಾಗುವಾಗ ಅಥವಾ ಯಾರ ಮೇಲಾದರೂ ಸಹಾನುಭೂತಿ ತೋರಿಸಬೇಕಾದ ಅನಿವಾರ್ಯ ಪ್ರಸಂಗ ನಿರ್ಮಾಣವಾದಾಗ, ಹೀಗೆ ಎಲ್ಲ ಸಂದರ್ಭಗಳಲ್ಲೂ ಅವರು ಅಲ್ಲಾಹನ ಮುಂದೆ ಸರ್ವ ಸಮರ್ಪಣೆಯೊಂದಿಗೆ ಬಾಗುತ್ತಾರೆ. ಯಾವ ರೀತಿ ಬಾಗುತ್ತಾರೆಂದರೆ, ಸತ್ಯಸಂಧತೆಯಿಂದಲೂ ನಿಷ್ಕಳಂಕತೆಯಿಂದಲೂ ಪ್ರೀತಿ ಮತ್ತು ನಿಷ್ಠೆಯಿಂದಲೂ ಸುದೃಢವಾದ ವಿಶ್ವಾಸದಿಂದಲೂ ಕೂಡಿದ ಅವರ ಪ್ರಾರ್ಥನೆಗಳು ಗಗನದಲ್ಲಿ ಒಂದು ಅಲ್ಲೋಲ ಕಲ್ಲೋಲವನ್ನೇ ಸೃಷ್ಟಿಸುತ್ತದೆ. ಅವರ

ವೇದನೆಭರಿತವಾದ ವಿಲಾಪಗಳು ಆಕಾಶದಲ್ಲಿ ಕೋಲಾಹಲವನ್ನು ಉಂಟುಮಾಡಿ ಅದು "ಮಲಾಇಕ್"ಗಳಲ್ಲಿ (ದೇವದೂತರು) ಒಂದು ರೀತಿಯ ತಲ್ಲಣವನ್ನು ಉಂಟುಮಾಡುತ್ತದೆ. ಆಗ, ಯಾವ ರೀತಿ ಅತಿ ಕಠಿಣವಾದ ಉಷ್ಣತೆಯ ನಂತರ ಮಳೆ ಸುರಿಸುವ ಮೋಡಗಳು ಬಾನಿನಲ್ಲಿ ಗೋಚರವಾಗುವುವೋ ಅದೇ ರೀತಿ ಅವರ ದೇವ ಸಮರ್ಪಣೆಯ ಶಕ್ತಿ, ಅಂದರೆ ಅಲ್ಲಾಹನ ಮೇಲಿರುವ ಅವರ ಅತ್ಯಂತವಾದ ಶ್ರದ್ಧೆ ಮತ್ತು ಅನುರಕ್ತಿಯ ತೀಕ್ಷ್ಣತೆಯು ಆಕಾಶದಲ್ಲಿ ಕೆಲವೊಂದು ಮಾರ್ಪಾಟುಗಳನ್ನು ಉಂಟುಮಾಡುತ್ತದೆ. ವಿಧಿಗಳು ಬದಲಾವಣೆಗೊಳ್ಳುತ್ತವೆ. ಅಲ್ಲಾಹನ ಇಚ್ಛೆಗಳು ಬೇರೊಂದು ರೀತಿಯಲ್ಲಿ ರೂಪಾಂತರಗೊಳ್ಳಲು ತೊಡಗುತ್ತವೆ. ಹಾಗೆ, ದೇವ ವಿಧಿ ವಿಧಾನಗಳ ತಂಗಾಳಿ ಬೀಸಲು ಶುರುವಾಗುತ್ತದೆ. ಯಾವ ರೀತಿ ಜ್ವರದ ಅಣುಗಳು ಅಲ್ಲಾಹನಿಂದಲೇ ಸೃಷ್ಟಿಸಲ್ಪಟ್ಟು ಅದರ ಪ್ರತಿರೋಧ ಔಷಧಗಳು ಸಹ ಅಲ್ಲಾಹನ ಇಂಗಿತ ಪ್ರಕಾರವೇ ರೋಗಾಣುಗಳನ್ನು ಶರೀರದಿಂದ ಹೊರಗಟ್ಟುವವೋ, ಈ ದಿವ್ಯಪುರುಷನ ದೇವಾರ್ಪಣೆಯ ಶಕ್ತಿಯೂ ಅದೇ ರೀತಿ ಇರುವುದು.

آں دعائے شیخ نے چوں ہر دعاست

فانی است و دستِ او دستِ خداست

"ಈ ಮಹಾತ್ಮರ ಪ್ರಾರ್ಥನೆಯು ಇತರರ ಪ್ರಾರ್ಥನೆಗಳಂತೆ ಅಲ್ಲ. ಅವರು ಅಲ್ಲಾಹನಲ್ಲಿ ಲೀನಗೊಂಡವರಾಗಿದ್ದಾರೆ. ಅವರ ಕೈ ಅಲ್ಲಾಹನ ಕೈಯಾಗಿದೆ."

ಒಟ್ಟಿನಲ್ಲಿ, ಕಾಲದ ಇಮಾಮರ ದೇವ ಸಮರ್ಪಣೆ ಅಥವಾ ದೇವನ ಮೇಲಿರುವ ಅವರ ಭರವಸೆಯು ಇತರ ಎಲ್ಲ ಔಲಿಯಾಗಳಿಗಿಂತಲೂ ಅತ್ಯಂತ ತೀವ್ರ ತರದ್ದೂ ಪರಿಣಾಮಕಾರಿಯೂ ಆಗಿರುವುದು. ಹಝ್ರತ್ ಮೂಸಾ ಅಲೈಹಿಸ್ಸಲಾಂ ತನ್ನ ಕಾಲದ ಇಮಾಮುಝ್ಝಮಾನ್ ಆಗಿದ್ದರು. ಅದೇ ರೀತಿ ಬಲ್‌ಅಂ ಎಂಬವರು ಸಹ ಆ ಕಾಲದಲ್ಲಿ ದೇವ ಸಂಭಾಷಣೆ ಮತ್ತು ದಿವ್ಯ ಬೋಧನೆಯ ಭಾಗ್ಯ ಲಭಿಸಿದ್ದ ಓರ್ವ 'ವಲಿ' ಆಗಿದ್ದರು. ಅವರ ಪ್ರಾರ್ಥನೆಗಳು ಸ್ವೀಕರಿಸಲ್ಪಡುತ್ತಿದ್ದವು. ಆದರೆ, ಹಝ್ರತ್ ಮೂಸಾ ಅಲೈಹಿಸ್ಸಲಾಮರೊಂದಿಗೆ ಬಲ್‌ಅಂ ಸಂಘರ್ಷಕ್ಕೆ ಹೊರಟಾಗ, ಯಾವ ರೀತಿ ಒಂದು ಹರಿತವಾದ ಖಡ್ಗವು ಕ್ಷಣಮಾತ್ರದಲ್ಲಿ ಶರೀರದಿಂದ ಶಿರವನ್ನು ಬೇರ್ಪಡಿಸುವುದೋ ಅದೇ ರೀತಿ ಆ ಮುಖಾಮುಖಿಯು ಬಲ್‌ಅಮ್‌ನನ್ನು ಸರ್ವನಾಶ ಮಾಡಿ

ಬಿಟ್ಟಿತ್ತು! ಯಾರೊಂದಿಗಾದರೂ ಅಲ್ಲಾಹನು ಸಂಭಾಷಿಸಿದರೂ ಅವರನ್ನು ತನ್ನ ಪ್ರೀತ್ಯಾದರಗಳಿಂದ ಗೌರವಿಸಿದರೂ ಅವರಿಗಿಂತಲೂ ಹೆಚ್ಚಾಗಿ ಅಲ್ಲಾಹನ ಸಾಮೀಪ್ಯವನ್ನು ಗಳಿಸಿದವರೊಂದಿಗೆ ಅವರು ವಿರುದ್ಧವಾಗಿ ನಿಲ್ಲುವಾಗ ಖಂಡಿತವಾಗಿಯೂ ಮೊದಲಿನವನು ವಿನಾಶಕ್ಕೆ ಗುರಿಯಾಗುತ್ತಾನೆಂಬ ತತ್ವವನ್ನು ಭಾಗ್ಯಹೀನನಾದ ಬಲ್‌ಅಂ ಮನಗಾಣಲಿಲ್ಲ. ಆ ವೇಳೆಯಲ್ಲಿ ಯಾವುದೇ ಇಲ್‌ಹಾಂ ಕೂಡ ಉಪಯೋಗಕ್ಕೆ ಬರಲಾರದು. ಪ್ರಾರ್ಥನೆಗಳು ಸ್ವೀಕರಿಸಲ್ಪಡುತ್ತವೆ ಎಂಬ ಸಂಗತಿ ಸಹ ಏನೂ ಪ್ರಯೋಜನಕ್ಕೆ ಬರದು. ಅಲ್ಲಿ (ಪ್ರವಾದಿ ಮೂಸಾರ ಕಾಲದಲ್ಲಿ) ಇದ್ದುದು ಓರ್ವ ಬಲ್‌ಅಂ ಮಾತ್ರ. ಆದರೆ, ಈಸಾನಬಿಯರ ಧರ್ಮಸಾರವು ಅಂತರ್ಧಾನವಾದ ಬಳಿಕ ಯಹೂದ್ಯ ಪಂಡಿತರಲ್ಲಿ ಅಂತಹ ಪದವಿ ಗಳಿಸಿದ ಸಾವಿರಾರು ಬಲ್‌ಅಂಗಳು ನಮ್ಮ ನಾಯಕರಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದಲ್ಲಿ ನಾಶ ಹೊಂದಿದರು.

## ಆರು: ದಿವ್ಯದರ್ಶನ ಮತ್ತು ದಿವ್ಯಬೋಧನೆಗಳು (ಕಶೂಫ್ ವ ಇಲ್‌ಹಾಮಾತ್)

ಇಮಾಮರಿಗೆ ಅವಶ್ಯವಾಗಿ ಇರಬೇಕಾದ ಮತ್ತೊಂದು ಪ್ರಧಾನ ಸಾಮರ್ಥ್ಯವು ದಿವ್ಯದರ್ಶನ ಮತ್ತು ದೇವವಾಣಿಯ ಶೃಂಖಲೆಯಾಗಿದೆ. ಇಮಾಮುಝ್ಝಮಾನ್ ಹೆಚ್ಚಾಗಿ ದಿವ್ಯವಾಣಿಗಳ ಮೂಲಕ ಜ್ಞಾನ ಸಂಪತ್ತನ್ನು ಅಲ್ಲಾಹನಿಂದ ಗಳಿಸುತ್ತಾರೆ. ದಿವ್ಯಜ್ಞಾನ ಮತ್ತು ಸತ್ಯಧರ್ಮ ತತ್ವಗಳ ಅರಿವು ಅವರಿಗೆ ಇಲ್‌ಹಾಂ ಮೂಲಕ ಲಭಿಸುತ್ತದೆ. ಅವರಿಗೆ ಉಂಟಾಗುವ ದಿವ್ಯ ಬೋಧನೆಗಳು ಇತರರ ಆಲೋಚನೆಗಳಿಗೆ ಎಟಕುವಂಥದ್ದಲ್ಲ. ಯಾಕೆಂದರೆ, ಅವುಗಳ ಸ್ಥಿತಿ ಮತ್ತು ಆಧಿಕ್ಯವು ಎಷ್ಟು ಉನ್ನತ ಮಟ್ಟದ್ದಾಗಿರುತ್ತದೆಂದರೆ, ಅದಕ್ಕಿಂತಲೂ ಮಿಗಿಲಾದುದನ್ನು ಗಳಿಸಲು ಮನುಷ್ಯನಿಗೆ ಸಾಧ್ಯವಲ್ಲ. ಅವರ ಮೂಲಕ ಜ್ಞಾನದ ಬಾಗಿಲುಗಳು ತೆರೆಯಲ್ಪಡುತ್ತವೆ. ಪವಿತ್ರ ಖುರ್‌ಆನಿನ ತತ್ವಜ್ಞಾನಗಳು ಪ್ರಕಟಗೊಳ್ಳುತ್ತವೆ. ಧಾರ್ಮಿಕ ವಿಧಿ ವಿಧಾನಗಳ ಸಮಸ್ಯೆಗಳೂ ಸಂಕೀರ್ಣತೆಗಳೂ ಬಗೆಹರಿಯುತ್ತವೆ. ಇತರ ಸಮುದಾಯಗಳ ಮೇಲೆ ಪ್ರಭಾವ ಬೀರಲು ಪರ್ಯಾಪ್ತವಾದಂತಹ ಮಹತ್ವಪೂರ್ಣ ಭವಿಷ್ಯವಾಣಿಗಳು ಅವರ ಮುಖಾಂತರ ಪ್ರಕಟಗೊಳ್ಳುತ್ತವೆ. ಒಟ್ಟಿನಲ್ಲಿ, ಯಾರು ಇಮಾಮುಝ್ಝಮಾನ್ ಆಗಿರುತ್ತಾರೋ ಅವರಿಗುಂಟಾಗುವ ದಿವ್ಯದರ್ಶನ ಮತ್ತು ದಿವ್ಯವಾಣಿಗಳು ಕೇವಲ

ಅವರ ವೈಯಕ್ತಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿರದೆ, ಅವು ಇಸ್ಲಾಂ ಧರ್ಮದ ಸಾರ್ವತ್ರಿಕ ಸಹಾಯಕ್ಕಾಗಿಯೂ ಸತ್ಯವಿಶ್ವಾಸದ ದೃಢೀಕರಣಕ್ಕಾಗಿಯೂ ಅತ್ಯಂತ ಆವಶ್ಯಕವೂ ಅನುಗ್ರಹಪೂರ್ಣವೂ ಆಗಿರುತ್ತವೆ. ಅಲ್ಲಾಹನು ಅವರೊಡನೆ ಅತಿ ಸ್ಪಷ್ಟವಾದ ರೀತಿಯಲ್ಲಿ ಸಂಭಾಷಿಸುತ್ತಾನೆ. ಅವರ ಪ್ರಾರ್ಥನೆಗಳಿಗೆ ಉತ್ತರ ನೀಡುತ್ತಾನೆ. ಕೆಲವೊಮ್ಮೆ ಪ್ರಶ್ನೋತ್ತರಗಳ ಒಂದು ಸರಣಿಯೇ ಜಾರಿಗೊಂಡು ಒಂದೇ ಸಲ ಪ್ರಶ್ನೆಯ ಬಳಿಕ ಉತ್ತರ, ಮತ್ತೆ ಪ್ರಶ್ನೆ ಮತ್ತೆ ಉತ್ತರ, ಮತ್ತೂ ಪ್ರಶ್ನೆ- ಉತ್ತರ, ಈ ರೀತಿಯಾಗಿ ಅತ್ಯಂತ ನಿರ್ಮಲವೂ ಮನೋಹರವೂ ನಿರರ್ಗಳವೂ ಆದ ಇಲ್‌ಹಾಮ್‌ಗಳು ಜಾರಿಗೊಂಡು ಅವು ಆ ದಿವ್ಯಬೋಧನೆಗಳು ಲಭಿಸುವ ವ್ಯಕ್ತಿ ತಾನು ಅಲ್ಲಾಹನನ್ನು ಕಾಣುತ್ತಿರುವೆನೆಂದು ಭಾವಿಸುವ ರೀತಿಯಲ್ಲಿ ಇರುತ್ತವೆ. ಅವರೊಡನೆ ಅಲ್ಲಾಹನು ಸಂಭಾಷಣೆ ಮಾಡುವ ಶೈಲಿಯು ಓರ್ವನು ಮರೆಯಲ್ಲಿ ನಿಂತು ಕಲ್ಲೆಸೆದು ಅನಂತರ ಮಾಯವಾಗುವ ರೀತಿಯಲ್ಲಿ ಇರುವುದಿಲ್ಲ. ಕಲ್ಲೆಸೆದದ್ದು ಯಾರು, ಆತ ಎಲ್ಲಿ ಹೋದ ಎಂದು ತಿಳಿಯದ ರೀತಿಯಲ್ಲಿ ಅಸ್ಪಷ್ಟವಾಗಿರುವುದಿಲ್ಲ. ಬದಲಾಗಿ, ಅಲ್ಲಾಹನು ಅವರ ಅತ್ಯಂತ ನಿಕಟದಲ್ಲಿರುತ್ತಾನೆ. ತನ್ನ ಪರಿಶುದ್ಧವಾದ, ಪ್ರಕಾಶಮಯವಾದ ಹಾಗೂ ಪ್ರಭಾಪೂರಿತವಾದ ಮುಖದಿಂದ ಪರದೆಯ ಒಂದಂಶವನ್ನು ನೀಗಿಸಿ ತೋರಿಸುತ್ತಾನೆ. ಈ ಸ್ಥಿತಿಯು ಇತರರಿಗೆ ಅನುಭವ ವೇದ್ಯವಾಗುವಂತಹದ್ದಲ್ಲ. ಅಷ್ಟು ಮಾತ್ರವಲ್ಲ, ಕೆಲವೊಮ್ಮೆ ತನ್ನೊಡನೆ ಯಾರೋ ಅಣಕವಾಡುತ್ತಿರುವಂತೆ ಆಗಿರುತ್ತದೆ ಇತರರ ಅವಸ್ಥೆ. ಆದರೆ ಇಮಾಮುಝ್ಝಮಾನರ ದೇವಪ್ರೋಕ್ತ ಭವಿಷ್ಯವಾಣಿಗಳು ಅತಿ ನಿಗೂಢವಾದ ಕಾರ್ಯಗಳನ್ನು ಬಹಿರಂಗಪಡಿಸುವಂಥದ್ದು ಆಗಿರುತ್ತವೆ. ಅಂದರೆ, ಮರೆಯಾಗಿರುವ ಸಂಗತಿಗಳನ್ನು ಅವು ಎಲ್ಲ ಕಡೆಗಳಿಂದಲೂ ಆವರಿಸಿರುತ್ತವೆ. ಓರ್ವ ಸಮರ್ಥ ಕುದುರೆಸವಾರ ಕುದುರೆಯನ್ನು ಸಂಪೂರ್ಣವಾಗಿ ತನ್ನ ನಿಯಂತ್ರಣದಲ್ಲಿಡುವಂತೆ. ಅವರಿಗೆ ಲಭಿಸುವ ಪರಿಶುದ್ಧವಾದ ದಿವ್ಯಬೋಧನೆಗಳು ಪೈಶಾಚಿಕವಾದ ಭಾವನೆಗಳಿಂದ ಸಂಪೂರ್ಣ ಮುಕ್ತವಾಗಿವೆಯೆಂದು ಪ್ರಕಟಪಡಿಸಲಿಕ್ಕಾಗಿ ಅವರ ಇಲ್‌ಹಾಮ್‌ಗಳಿಗೆ ಈ ರೀತಿಯ ದಿವ್ಯತ್ವವನ್ನೂ ಬಲವನ್ನೂ ನೀಡಲಾಗುತ್ತದೆ. ಹಾಗಿದ್ದಲ್ಲಿ ಮಾತ್ರವೇ ಅದು ಇತರರಿಗೆ ದೃಷ್ಟಾಂತವಾಗಬಲ್ಲದು.

ಪೈಶಾಚಿಕವಾದ ಇಲ್‌ಹಾಮ್‌ಗಳು ಸಹ ಉಂಟಾಗುತ್ತವೆ ಎಂಬುದನ್ನು ಅಲ್ಲಗಳೆಯಲಾಗದು. ಅಪ್ರಬುದ್ಧರಾದ ಕೆಲವು ಅನ್ವೇಷಕರಿಗೆ ಅವು ಉಂಟಾಗುತ್ತವೆ. ಅಂತೆಯೇ ಆತ್ಮ ಪ್ರೇರಣೆಯ ಮಾತುಗಳು ಸಹ ಇವೆ. ಅವುಗಳನ್ನು اَضْغَاثُ اَحْلَام

**ಅಝ್ಘಾಸು ಅಹ್ಲಾಂ** (ಹುಸಿ ಸ್ವಪ್ನಗಳು) ಎನ್ನಲಾಗುತ್ತದೆ **(21:6)**. ಇವುಗಳನ್ನು ಅಲ್ಲಗಳೆಯುವುದೆಂದರೆ ಪವಿತ್ರ ಖುರ್‌ಆನನ್ನು ನಿರಾಕರಿಸಿದಂತೆ. ಯಾಕೆಂದರೆ, ಇಂತಹ ಪೈಶಾಚಿಕ ಪ್ರೇರಣೆಗಳು ಉಂಟಾಗುತ್ತವೆಯೆಂದು ಪವಿತ್ರ ಖುರ್‌ಆನಿನ ವಿವರಣೆಗಳಿಂದ ಸಾಬೀತಾಗುತ್ತದೆ. ಎಲ್ಲಿಯವರೆಗೆ ಮನುಷ್ಯನ ಆತ್ಮಶುದ್ಧೀಕರಣವು ಪರಿಪೂರ್ಣತೆಯನ್ನು ಪಡೆಯುವುದಿಲ್ಲವೋ ಅಂತಹವರಿಗೆ ಈ ರೀತಿ ಪೈಶಾಚಿಕ ಉದ್ಬೋಧನೆಗಳು ಉಂಟಾಗಬಹುದು. ಪವಿತ್ರ ಖುರ್‌ಆನಿನಲ್ಲಿ ಇದನ್ನು **ಅಲಾ ಕುಲ್ಲಿ ಅಫ್ಫಾಕಿನ್ ಅಸೀಂ** "ಮಹಾ ಸುಳ್ಳುಗಾರ ಮತ್ತು ಪಾಪಿಗಳ ಮೇಲೆ ಅವು ಇಳಿಯುತ್ತವೆ" **(26:223)** ಎಂದು ವಿವರಿಸಲಾಗಿದೆ. ಆದರೆ, ಪರಿಶುದ್ಧಾತ್ಮರಿಗೆ ಪೈಶಾಚಿಕ ಪ್ರೇರಣೆಗಳ ಕುರಿತು ತಡವಿಲ್ಲದೆ ನಿಜಸ್ಥಿತಿಯ ಅರಿವುಂಟಾಗುವುದು.

ದುರದೃಷ್ಟವಶಾತ್, ಕೆಲವು ಕ್ರೈಸ್ತ ಧರ್ಮ ವಿದ್ವಾಂಸರು, ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಶೈತಾನನು ಒಂದು ಬೆಟ್ಟದ ಮೇಲಕ್ಕೆ ಕರೆದುಕೊಂಡು ಹೋದ ವೃತ್ತಾಂತವನ್ನು ತಮ್ಮ ಗ್ರಂಥಗಳಲ್ಲಿ ವಿವರಿಸುತ್ತಾ, ಅದೊಂದು ಸೂಕ್ಷ್ಮ ರೂಪದ ಆಧ್ಯಾತ್ಮಿಕ ಪ್ರಸಂಗವಾಗಿರಲಿಲ್ಲ, ಬದಲಾಗಿ ಜನರೆಲ್ಲರೂ ಕಣ್ಣಾರೆ ಕಂಡ ಒಂದು ಪ್ರತ್ಯಕ್ಷ ಘಟನೆಯಾಗಿತ್ತೆಂದೂ ಯಹೂದ್ಯರು ಸಹ ಇದಕ್ಕೆ ಸಾಕ್ಷಿಗಳಾದರು ಎಂದೂ ಬರೆಯಲು ಧೈರ್ಯಪಟ್ಟಿದ್ದಾರೆ! ಅಷ್ಟು ಮಾತ್ರವಲ್ಲ, ಹಝ್ರತ್ ಮಸೀಹರಿಗೆ ಈ ರೀತಿಯ ಪೈಶಾಚಿಕ ಪ್ರೇರಣೆಯು ಮೂರು ಸಲ ಉಂಟಾಯಿತೆಂದೂ, ಆದರೆ ಅವರು ಅದನ್ನು ಸ್ವೀಕರಿಸಲಿಲ್ಲವೆಂದೂ ಬರೆದಿದ್ದಾರೆ. ಆದರೆ, ಬೈಬಲಿನ ಸುವಾರ್ತೆಗಳಲ್ಲಿ ಉಲ್ಲೇಖವಿರುವ ಈ ಘಟನೆಗೆ ಧರ್ಮಪಂಡಿತರು ನೀಡಿರುವ ಈ ರೀತಿಯ ವ್ಯಾಖ್ಯಾನ ವಿವರಣೆಗಳನ್ನು ನೋಡುವಾಗ ನಮ್ಮ ಶರೀರ ಕಂಪಿಸುತ್ತದೆ. ಮಸೀಹರ ಮೇಲೆ ಶೈತಾನನ ನಿಯಂತ್ರಣವೇ? ವಾಸ್ತವದಲ್ಲಿ ಹಝ್ರತ್ ಮಸೀಹ್ ಶೈತಾನನೊಂದಿಗೆ ನಡೆಸಿದ ಈ ಸಂವಾದವನ್ನು ತಾತ್ಕಾಲಿಕವಾದೊಂದು ಪೈಶಾಚಿಕ ಪ್ರೇರಣೆ (ಶೈತಾನೀ ಇಲ್‌ಹಾಂ) ಮಾತ್ರವೆಂದು ನಾವು ಪರಿಗಣಿಸದೆ, ಅದೊಂದು ಸ್ಥೂಲವಾದ ಪ್ರತ್ಯಕ್ಷ ಸಂಭವವಾಗಿತ್ತೆಂದೂ ಹಾಗೂ ನಿಜವಾಗಿಯೂ ಶೈತಾನನು ಮನುಷ್ಯರೂಪವನ್ನು ಪಡೆದು ಈಸಾ ಮಸೀಹರೊಂದಿಗೆ ಸಂವಾದ ನಡೆಸಿದ್ದೆಂದೂ ನಾವು ಭಾವಿಸುವುದಾದರೆ, ಆಗ ಕೆಲವು ಸಂಶಯಗಳು ಉದ್ಭವಿಸುತ್ತವೆ. ಒಂದನೆಯದಾಗಿ, ಹಿಂದೆ ಸರ್ಪರೂಪವನ್ನು ತಾಳಿದ ಶೈತಾನನು ಈಗ ಭೌತಿಕ ಶರೀರವನ್ನು ಪಡೆದುಕೊಂಡು ಮನುಷ್ಯನ ರೂಪವನ್ನು ತಾಳಿ ಯಹೂದ್ಯರ ನೂರಾರು ಕುಟುಂಬಗಳು ವಾಸಿಸುವ ಅವರ ಪುಣ್ಯ ಸ್ಥಳದಲ್ಲಿ

ಬಂದು ನಿಂತಿದ್ದನೆಂದಾದರೆ, ಅದನ್ನು ನೋಡಲು ಸಹಸ್ರ ಸಂಖ್ಯೆಯಲ್ಲಿ ಜನರು ಅಲ್ಲಿ ಬಂದು ಸೇರಬೇಕಾಗಿತ್ತಲ್ಲವೇ? ಅಲ್ಲದೆ ಹಝ್ರತ್ ಮಸೀಹರು ಸಹ ಯಹೂದ್ಯರನ್ನೆಲ್ಲ ಕೂಗಿ ಕರೆದು ಅವರಿಗೆ ಶೈತಾನನನ್ನು ತೋರಿಸಿಕೊಡುತ್ತಿದ್ದರು. ಯಾಕೆಂದರೆ, ಆ ಕಾಲದ ಕೆಲವು ಯಹೂದಿ ಪಂಗಡದವರು ಶೈತಾನನ ಅಸ್ತಿತ್ವದಲ್ಲಿ ನಂಬಿಕೆಯಿಲ್ಲದವರಾಗಿದ್ದರು. ಅವರಿಗೆ ಶೈತಾನನನ್ನು ಪ್ರತ್ಯಕ್ಷದಲ್ಲಿ ತೋರಿಸಿಕೊಡುವುದು ಹಝ್ರತ್ ಮಸೀಹರ ಸತ್ಯತೆಗೆ ಒಂದು ಪುರಾವೆಯಾಗುತ್ತಿತ್ತು. ಅನೇಕ ಜನರು ಆ ಮೂಲಕ ಸನ್ಮಾರ್ಗ ಪ್ರಾಪ್ತಿಸುತ್ತಿದ್ದರು. ಅಷ್ಟು ಮಾತ್ರವಲ್ಲ, ರೋಮ್ ಸಾಮ್ರಾಜ್ಯದ ಉನ್ನತ ಅಧಿಕಾರಿಗಳು ಸಹ ಶೈತಾನನನ್ನು ನೋಡಿ, ಅದರ ಚಲನವಲನಗಳನ್ನು ಕಣ್ಣೆದುರಲ್ಲೇ ಪ್ರತ್ಯಕ್ಷವಾಗಿ ಕಂಡುಕೊಂಡು, ಖಂಡಿತವಾಗಿಯೂ ಅವರು ಹಝ್ರತ್ ಮಸೀಹರ ಅನುಯಾಯಿಗಳಾಗಿ ಮಾರ್ಪಡುತ್ತಿದ್ದರು. ಆದರೆ, ಆ ರೀತಿಯಲ್ಲಿ ಏನೂ ಸಂಭವಿಸಲಿಲ್ಲ. ಆದುದರಿಂದಲೇ ಅದೊಂದು ಆಧ್ಯಾತ್ಮಿಕ ಸಂವಾದವಾಗಿತ್ತೆಂದು ಸ್ಪಷ್ಟವಾಗುತ್ತದೆ. ಇನ್ನೊಂದು ರೀತಿಯಲ್ಲಿ ಇದನ್ನು ಪೈಶಾಚಿಕ ಉದ್ಬೋಧನೆ ಎಂದೂ ಹೇಳಬಹುದಾಗಿದೆ. ನನ್ನ ಭಾವನೆಯಲ್ಲಿ ಬರುವ ಮತ್ತೊಂದು ವಿಚಾರ ಇದಾಗಿದೆ: ಅದೇನೆಂದರೆ, ಯಹೂದ್ಯರ ಗ್ರಂಥಗಳಲ್ಲಿ ಅನೇಕ ದುಷ್ಟ ಜನರನ್ನು ಶೈತಾನ್ ಎಂದು ಹೆಸರಿಸಲಾಗಿದೆ. ಈ ವಾಡಿಕೆಯಂತೆ ಯೇಸು ಕ್ರಿಸ್ತರು ತಾವೇ ತಮ್ಮ ಓರ್ವ ಮಾನ್ಯ ಶಿಷ್ಯನನ್ನು ಶೈತಾನ್ ಎಂದು ಕರೆದದ್ದೂ ಉಂಟು. ಬೈಬಲಿನಲ್ಲಿ ಮೇಲಿನ ಘಟನೆಯನ್ನು ವಿವರಿಸುವ ಸ್ವಲ್ಪ ಮೊದಲು ಆ ಶಿಷ್ಯನ ಬಗ್ಗೆ ಸ್ವರ್ಗದ ಕೀಲಿಗೈಗಳನ್ನು ನೀಡಲ್ಪಟ್ಟವರು ಎಂದು ಪ್ರಸ್ತಾಪಿಸಲಾಗಿದೆ! ಹಾಗೆ ನೋಡುವಾಗ ಯಾರೋ ಯಹೂದಿ ದುಷ್ಟನು ಹಝ್ರತ್ ಮಸೀಹರನ್ನು ನಿಂದಿಸಲು ಹಾಗೂ ಪರಿಹಾಸ್ಯಮಾಡಲು ಅವರ ಬಳಿಗೆ ಬಂದುದಾಗಿರಬಹುದು. ಅಂತಹ ದುಷ್ಟತನ ಯಹೂದ್ಯರಲ್ಲಿತ್ತು. ಅಲ್ಲದೆ ಆ ರೀತಿಯಲ್ಲಿ ಕುಹಕ ಪ್ರಶ್ನೆಗಳನ್ನು ಕೇಳುವುದು ಯಹೂದ್ಯರ ವಿಶಿಷ್ಟ ಸ್ವಭಾವವೂ ಆಗಿದೆ. ಹಝ್ರತ್ ಮಸೀಹರು ತನ್ನ ಓರ್ವ ಶಿಷ್ಯನಾದ ಪೇತ್ರನನ್ನು ಶೈತಾನ್ ಎಂದು ಹೇಳಿದ ಹಾಗೆ ಈತನಿಗೂ ಶೈತಾನ್ ಎಂದು ಹೆಸರು ನೀಡಿರಬಹುದಾಗಿದೆ.

ಈ ಕಥನ ಸಂಪೂರ್ಣ ಸುಳ್ಳಾಗಿರಬಹುದಾದ ಸಾಧ್ಯತೆಯೂ ಇದೆ. ಅದು ಉದ್ದೇಶಪೂರ್ವಕವಾಗಿಯೋ ಅಥವಾ ತಪ್ಪು ತಿಳಿವಳಿಕೆಯ ಕಾರಣದಿಂದಲೋ ಬೈಬಲಿನ ಸುವಾರ್ತೆಗಳಲ್ಲಿ ಸೇರಿಹೋದದ್ದಾಗಿರಬಹುದು. ಯಾಕೆಂದರೆ, ಈ ಸುವಾರ್ತೆಗಳು (ಇಂಜೀಲ್) ಹಝ್ರತ್ ಮಸೀಹರ ಸುವಾರ್ತೆಗಳಲ್ಲ.

ಅವರಿಂದ ದೃಢೀಕರಿಸಲ್ಪಟ್ಟವೂ ಅಲ್ಲ. ಬದಲಾಗಿ, ಅಪೋಸ್ತಲರು (ಯೇಸುಕ್ರಿಸ್ತರ ಶಿಷ್ಯರು) ಅಥವಾ ಇತರ ಬರಹಗಾರರು ತಮ್ಮ ಭಾವನೆ ಮತ್ತು ತಿಳಿವಳಿಕೆಯ ಆಧಾರದಲ್ಲಿ ಅವುಗಳನ್ನು ಬರೆದಿದ್ದಾರೆ. ಅವುಗಳ ಪ್ರಸ್ತಾವನೆಗಳಲ್ಲಿ ಪರಸ್ಪರ ವೈರುಧ್ಯಗಳು ಕಾಣಲ್ಪಡುವುದು ಇದೇ ಕಾರಣದಿಂದಾಗಿದೆ. ಆದುದರಿಂದ, ಈ ವಿಚಾರದಲ್ಲಿ ಕೆಲವು ಲೇಖಕರಿಗೆ ತಪ್ಪು ಸಂಭವಿಸಿದೆ ಎಂದು ಹೇಳಬಹುದಾಗಿದೆ. ಉದಾಹರಣೆಗೆ, ಸುವಾರ್ತೆಯ ಕೆಲವು ಲೇಖಕರು ಹಝ್ರತ್ ಮಸೀಹ್ ಅಲೈಹಿಸ್ಸಲಾಂ ಶಿಲುಬೆಯಲ್ಲಿ ಗತಿಸಿದರೆಂಬ ತಪ್ಪು ಭಾವನೆ ಹೊಂದಿದ್ದರು*. ಇಂತಹ ತಪ್ಪುಗಳು ಅಪೋಸ್ತಲರ ಸ್ವಭಾವದಲ್ಲೇ ಇದ್ದವು. ಅವರಿಗೆ ಪರಿಪಕ್ವವಾದ ಸೂಕ್ಷ್ಮ ಬುದ್ಧಿ ಇರಲಿಲ್ಲವೆಂದು ಸುವಾರ್ತೆಗಳೇ ನಮಗೆ ತಿಳಿಸಿಕೊಡುತ್ತವೆ. ಅವರ ಈ ನ್ಯೂನತೆಯ ಕುರಿತು ಸ್ವತಃ ಹಝ್ರತ್ ಮಸೀಹರೇ ಸಾಕ್ಷ್ಯ ನೀಡಿರುವುದು, ಅವರು ಬುದ್ಧಿಶಕ್ತಿಯಲ್ಲೂ ವೈಚಾರಿಕತೆಯಲ್ಲೂ ಮತ್ತು ಕ್ರಿಯಾಶೀಲತೆಯಲ್ಲೂ ಸಹ ದುರ್ಬಲರಾಗಿದ್ದರು ಎಂದಾಗಿದೆ! ಒಟ್ಟಿನಲ್ಲಿ, ಪರಿಶುದ್ಧಾತ್ಮರ ಹೃದಯದ ಮೇಲೆ ಪೈಶಾಚಿಕ ಚಿಂತನೆಗಳಿಗೆ ಮೇಲುಗೈ ಸಾಧಿಸಲು ಸಾಧ್ಯವಿಲ್ಲವೆಂಬುದು ಒಂದು ವಾಸ್ತವಿಕತೆ ಆಗಿದೆ. ಏನಾದರೂ ಚಂಚಲತೆಯ ವಿಚಾರ ಒಂದು ಸಲ ಅವರ ಮನಸ್ಸನ್ನು ಆವರಿಸಿದರೂ ಅಂತಹ ಪೈಶಾಚಿಕ ಚಿಂತನೆಗಳನ್ನು ಕೂಡಲೇ ದೂರೀಕರಿಸಲಾಗುವುದು ಅಥವಾ ಸಂಶಯ ನಿವಾರಣೆ ಮಾಡಲಾಗುವುದು. ಅವರ ಪರಿಶುದ್ಧವಾದ ವ್ಯಕ್ತಿತ್ವಕ್ಕೆ ಅದರಿಂದ ಏನೂ ಕಳಂಕ ಉಂಟಾಗುವುದಿಲ್ಲ.

ಅಸ್ಪಷ್ಟವೂ ಸಂಶಯಾಸ್ಪದವೂ ಆದ ವಿಚಾರಗಳಂತೆ ಕಂಡುಬರುವ ಈ ರೀತಿಯ ಅನುಮಾನಗಳನ್ನು ಪವಿತ್ರ ಖುರ್‌ಆನಿನಲ್ಲಿ 'ತ್ವಾಯಿಫ್' ಎಂದು ಹೆಸರಿಸಲಾಗಿದೆ. ಅರಬಿ ಶಬ್ದಾರ್ಥಕೋಶಗಳಲ್ಲಿ ಇದನ್ನು ತ್ವಾಯಿಫ್, ತೌಫ್, ತ್ವಯ್ಯಿಫ್, ತ್ವೈಫ್ ಎಂಬ ಶಬ್ದಗಳಾಗಿಯೂ ಕಾಣಬಹುದು. ಈ ರೀತಿಯ ಸಂಶಯಗಳಿಗೆ ಹೃದಯದ ಮೇಲೆ ಅತಿ ಕಡಿಮೆ ಪ್ರಭಾವವಿರುತ್ತದೆ, ಇಲ್ಲವೆಂದೇ ಹೇಳಬಹುದಾದಷ್ಟು ಕಡಿಮೆ. ಬಹಳ ದೂರದಲ್ಲಿರುವ ಒಂದು ವೃಕ್ಷದಿಂದ ಬೀಳುವ ನೆರಳಿನಂತೆ ಬಹಳ ಅಸ್ಪಷ್ಟವಾಗಿರುತ್ತದೆ ಈ ಸಂಶಯಗಳು. ಶಪಿಸಲ್ಪಟ್ಟ ಶೈತಾನನು

* ಕ್ರೈಸ್ತರ ಅನೇಕ ಸುವಾರ್ತೆಗಳ (ಇಂಜೀಲ್) ಪೈಕಿ ಅವರ ಬಳಿ ಈಗಲೂ ಇರುವ ಒಂದು ಸುವಾರ್ತೆಯಲ್ಲಿ ಯೇಸು ಕ್ರಿಸ್ತರು ಶಿಲುಬೆಯಲ್ಲಿ ಗತಿಸಲಿಲ್ಲವೆಂದು ಬರೆಯಲಾಗಿದೆ. ಈ ವಿವರಣೆ ಸತ್ಯವೂ ಆಗಿದೆ. ಯಾಕೆಂದರೆ, 'ಮರ್‌ಹಮೆ ಈಸಾ' ಎಂಬ ಔಷಧ ಇದನ್ನು ಸತ್ಯಪಡಿಸುತ್ತದೆ. ಇದರ ಬಗ್ಗೆ ನೂರಾರು ವೈದ್ಯರ ಹೇಳಿಕೆಗಳೂ ಇವೆ.

ಹಝ್ರತ್ ಮಸೀಹ್ ಅಲೈಹಿಸ್ಸಲಾಮರ ಮನಸ್ಸಿನಲ್ಲಿ ಈ ರೀತಿಯ ನಾಜೂಕಾದ ಒಂದು ಅನುಮಾನವನ್ನು ಸೃಷ್ಟಿಸಲು ಪ್ರಯತ್ನಿಸಿರಲೂಬಹುದು. ಆದರೆ ಅವರು ತನ್ನ ಪ್ರವಾದಿತ್ವದ ಶಕ್ತಿಯಿಂದ ಈ ಅನುಮಾನವನ್ನು ದೂರೀಕರಿಸಿರಬಹುದು. ಇದರ ಕುರಿತು ಪ್ರಸ್ತಾಪವು ಕೇವಲ ಇಂಜೀಲ್‌ಗಳಲ್ಲಿ ಮಾತ್ರವಲ್ಲ ನಮ್ಮ ಸಹೀಹ್ ಹದೀಸ್‌ಗಳಲ್ಲೂ ಕಾಣಲ್ಪಡುವುದರಿಂದ ಹೀಗೆ ಹೇಳಲು ನಾವು ನಿರ್ಬಂಧಿತ ರಾಗಿದ್ದೇವೆ. ಆ ಹದೀಸ್ ಈ ರೀತಿಯಿದೆ:

**عن محمد بن عمران الصيرفی قال حدثنا الحسن بن عليل العنزی عن العباس بن عبدالواحد عن محمد بن عمرو عن محمد بن مناذر عن سفيان بن عينة عن عمرو بن دينار عن طاؤس عن ابی هريرة قال جاء الشيطان الی عيسیٰ قال الست تزعم انك صادق قال بلیٰ قال فاوف علی هذه الشاهقة فالق نفسك منها فقال ويلك الم يقل الله يا ابن آدم لا تبلنی بهلاكك فانی افعل ما اشاء۔**

"ಮುಹಮ್ಮದ್ ಬಿನ್ ಇಮ್‌ರಾನುಸ್ಸಯರ್‌ಫೀ ವರದಿ ಮಾಡುತ್ತಾರೆ: ಅವರು ಹಸನಿಬ್ನು ಅಲೀಲುಲ್ ಅನ್‌ಝೀಯಿಂದಲೂ, ಹಸನ್ ಅಬ್ಬಾಸ್‌ರಿಂದಲೂ, ಅಬ್ಬಾಸ್ ಮುಹಮ್ಮದಿಬ್ನು ಅಮ್ರ್‌ರಿಂದಲೂ, ಮುಹಮ್ಮದಿಬ್ನು ಅಮ್‌ರ್, ಮುಹಮ್ಮದಿಬ್ನು ಮುನಾಧರ್‌ರಿಂದಲೂ, ಅವರು ಸುಫ್‌ಯಾನ್ ಬಿನ್ ಅಯಿನರಿಂದಲೂ, ಸುಫ್‌ಯಾನ್ ಅಮ್ರ್ ಬಿನ್ ದೀನಾರ್‌ರಿಂದಲೂ, ಅಮ್ರ್ ಬಿನ್ ದೀನಾರ್ ತಾವೂಸ್‌ರಿಂದಲೂ, ಹಾಗೂ ತಾವೂಸ್ ಅಬೂ ಹುರೈರರಿಂದಲೂ ಕೇಳಿರುವುದಾಗಿ ಹೇಳುತ್ತಾರೆ – ಈಸಾ ಅಲೈಹಿಸ್ಸಲಾಮರ ಬಳಿ ಶೈತಾನನು ಬಂದು ಹೇಳಿದ: ನೀನು ಸತ್ಯವಂತನಾಗಿರುವೆ ಎಂದು ನೀನು ತಿಳಿಯುವುದಿಲ್ಲವೇ? ಅವರು ಹೇಳಿದರು: ಯಾಕಿಲ್ಲ? ಶೈತಾನ ಹೇಳಿದ: ಇದು ಸತ್ಯವೆಂದಾದರೆ ನೀನು ಬೆಟ್ಟದ ಮೇಲೇರು, ನಂತರ ಅಲ್ಲಿಂದ ಸ್ವಯಂ ಕೆಳಗೆ ಧುಮುಕು. ಆಗ ಹಝ್ರತ್ ಈಸಾ ಅಲೈಹಿಸ್ಸಲಾಂ, 'ನಿನಗೆ ನಾಶ, ನಿನ್ನ ದೇವರನ್ನು ಮರಣದಿಂದ ಪರೀಕ್ಷಿಸಬೇಡ, ನಾನೇನು ಬಯಸುತ್ತೇನೋ ಅದನ್ನೇ ನಾನು ಮಾಡುವೆನು ಎಂಬುದಾಗಿ ದೇವರು ಹೇಳಿರುವುದು ನಿನಗೆ ಗೊತ್ತಿಲ್ಲವೇ?' ಎಂದು ಹೇಳಿದರು."

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಶೈತಾನನು ಬಂದಿರುವುದು ಪ್ರವಾದಿಗಳ ಬಳಿಗೆ ದೇವದೂತ ಜಿಬ್‌ರೀಲ್ ಬರುವಂತಹ ರೀತಿಯಲ್ಲೇ

ಆಗಿರಬೇಕಲ್ಲವೇ. ಜಿಬ್‌ರೀಲ್ ಆದರೋ ಮನುಷ್ಯನು ಯಾವುದಾದರೊಂದು ಬಂಡಿಯಲ್ಲಿ ಕೂತುಕೊಂಡು ಅಥವಾ ಬಾಡಿಗೆಯ ಕುದುರೆಯ ಮೇಲೇರಿ ಮುಂಡಾಸುಧಾರಿಯಾಗಿ ಶಾಲು ಹೊದ್ದುಕೊಂಡು ಬರುವುದಿಲ್ಲವಷ್ಟೆ. ಜಿಬ್‌ರೀಲಿನ ಆಗಮನವು ಪಾರಲೌಕಿಕವಾದ ಸೂಕ್ಷ್ಮರೂಪದಲ್ಲಿರುತ್ತದೆ. ಹಾಗಿರುವಾಗ ಅಧಮನೂ ನೀಚನೂ ಆದ ಶೈತಾನ ಮನುಷ್ಯ ರೂಪದಲ್ಲಿ ಬಹಿರಂಗವಾಗಿ ಬರಲು ಹೇಗೆ ತಾನೆ ಸಾಧ್ಯ? ಈ ವಿಚಾರಗಳನ್ನೆಲ್ಲ ಪರಿಗಣಿಸುವಾಗ ಇದಕ್ಕೆ 'ಡ್ರೇಪರ್' ನೀಡಿದ ವಿವರಣೆಗಳನ್ನು ಒಪ್ಪಬೇಕಾಗುತ್ತದೆ. ಆದರೂ ಹಝ್ರತ್ ಈಸಾ ಅಲೈಹಿಸ್ಸಲಾಮರು ಪ್ರವಾದಿತ್ವದ ಶಕ್ತಿಯಿಂದಲೂ ಪಾರಮಾರ್ಥಿಕ ಪ್ರಕಾಶದ ಬಲದಿಂದಲೂ ಶೈತಾನನ ಪ್ರೇರಣೆ ಯಾವ ರೀತಿಯಲ್ಲೂ ತನ್ನ ಸಮೀಪಕ್ಕೆ ಬರದಂತೆ ತಡೆದರು ಎಂದು ಹೇಳಬಹುದಾಗಿದೆ. ಮಾತ್ರವಲ್ಲ, ಅವರು ತಕ್ಷಣವೇ ಅದನ್ನು ಪ್ರತಿರೋಧಿಸಿ ತಡೆಹಿಡಿಯಲು ಶ್ರಮಿಸಿದರು. ಯಾವ ರೀತಿ ಪ್ರಕಾಶದ ಮುಂದೆ ಅಂಧಕಾರಕ್ಕೆ ನಿಲ್ಲಲು ಸಾಧ್ಯವಿಲ್ಲವೋ ಅದೇ ರೀತಿ ಶೈತಾನನಿಗೆ ಅವರ ಮುಂದೆ ನಿಲ್ಲಲು ಸಾಧ್ಯವಾಗದೆ ಅವನು ಓಡಿಹೋದನು. **ಇನ್ನ ಇಬಾದೀ ಲೈಸ ಲಕ ಅಲೈಹಿಂ ಸುಲ್‌ತಾನ್.** **(15: 43)** "ಖಂಡಿತವಾಗಿಯೂ ನನ್ನ ದಾಸರ ಮೇಲೆ ನಿನಗೆ ಯಾವ ಅಧಿಕಾರವೂ ಇಲ್ಲ" ಎಂಬುದರ ಸರಿಯಾದ ಅರ್ಥವೂ ಇದೇ ಆಗಿದೆ. ಯಾಕೆಂದರೆ, ನಿಜವಾಗಿಯೂ ಶೈತಾನನ ಸುಲ್‌ತಾನ್ (ಸ್ವಾಧೀನ ಶಕ್ತಿ) ಇರುವುದು ಪೈಶಾಚಿಕವಾದ ಚಿಂತನೆ ಮತ್ತು ಉದ್ಬೋಧನೆಗಳಿಗೆ ವಿಧೇಯರಾದವರ ಮೇಲೆ ಮಾತ್ರ. ಆದರೆ, ಪ್ರಕಾಶವೆಂಬ ಅಸ್ತ್ರದ ಮೂಲಕ ದೂರದಿಂದಲೇ ಶೈತಾನನನ್ನು ಘಾಸಿಗೊಳಿಸಿ ಬೆದರಿಕೆಯ ಮತ್ತು ಶಾಪದ ಚಪ್ಪಲಿಯೇಟು ನೀಡಿ ಹಾಗೂ ಅವನ ಮಾತುಗಳಿಗೆ ತಲೆಬಾಗದೆ ಇರುವವರ ಮೇಲೆ ಅವನ ಯಾವ ಪ್ರಭಾವವೂ ನಡೆಯದು. ಆದರೂ ಅಂಥವರಿಗೆ ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅಥವಾ ಅಧೀಶಾಧಿಕಾರವನ್ನು ತೋರಿಸಿಕೊಡಲು ಬಯಸುವುದರಿಂದಲೂ ಶೈತಾನನು ಈ ಭೂಮಿಗೆ ಸಂಬಂಧಪಟ್ಟವನಾಗಿರುವುದರಿಂದಲೂ ದೇವನ ಸೃಷ್ಟಿಯ ವ್ಯಾಪ್ತಿಯನ್ನು ಸಂಪೂರ್ಣವಾಗಿ ತಿಳಿಯಲಿಕ್ಕಾಗಿ ಶೈತಾನನೆಂಬ ಹೆಸರಿನ ಆ ವಿಚಿತ್ರ ಸೃಷ್ಟಿಯ ಮುಖವನ್ನು ನೋಡಬೇಕಾದುದು ಹಾಗೂ ಅವನ ಮಾತನ್ನು ಕೇಳಬೇಕಾದುದು ಸಹ ಅವರಿಗೆ ಅನಿವಾರ್ಯವಾಗುತ್ತದೆ. ಆದರೆ, ಅದರಿಂದ ಅವರ ಪರಿಶುದ್ಧಿಯ ವರ್ಚಸ್ಸಿಗಾಗಲಿ ಶ್ರೇಷ್ಠತೆಗಾಗಲಿ ಯಾವ ಕಳಂಕವೂ ಉಂಟಾಗುವುದಿಲ್ಲ. ಶೈತಾನನು

ಸಂಶಯದ ಬೀಜ ಬಿತ್ತುವ ತನ್ನ ಕೆಟ್ಟ ಚಾಳಿಯ ಪ್ರಕಾರ ಚೇಷ್ಟೆಯಿಂದ ಒಂದು ಬೇಡಿಕೆಯನ್ನು ಹಝ್ರತ್ ಮಸೀಹರ ಮುಂದಿಟ್ಟಿದ್ದನು. ಆದರೆ, ಅವರ ಪರಿಶುದ್ಧ ಪ್ರಕೃತಿಯು ಕೂಡಲೇ ಅದನ್ನು ತಳ್ಳಿ ಹಾಕಿತು. ಅದನ್ನು ಸ್ವೀಕರಿಸಲಿಲ್ಲ. ಅದರಿಂದ ಅವರ ಶ್ರೇಷ್ಠತೆಗೆ ಮತ್ತು ಪರಿಶುದ್ಧತೆಗೆ ಯಾವ ಕಳಂಕವೂ ಉಂಟಾಗಲಿಲ್ಲ. ಮಹಾರಾಜರ ದರ್ಬಾರಿನಲ್ಲಿ ಕೆಲವೊಮ್ಮೆ ಅಧಮರೂ ಮಾತನಾಡುವುದಿಲ್ಲವೇ, ಅದೇ ರೀತಿ. ಅಧ್ಯಾತ್ಮ ರೂಪದಲ್ಲಿ ಹೇಳುವುದಾದರೆ, ಶೈತಾನನು ಯೇಸು ಮಸೀಹರ ಮನಸ್ಸಿನಲ್ಲಿ ತನ್ನ ಕೆಲವು ವಚನಗಳನ್ನು ಹಾಕಿದನು. ಯೇಸು ಈ ಪೈಶಾಚಿಕ ಉದ್ಬೋಧನೆಯನ್ನು ಸ್ವೀಕರಿಸದೆ ತಿರಸ್ಕರಿಸಿ ಬಿಟ್ಟರು. ಆದ್ದರಿಂದ ಅದೊಂದು ಪ್ರಶಂಸನೀಯ ಸಂಗತಿಯೇ ಆಗಿದೆ. ಅದನ್ನು ಟೀಕಿಸುವುದು ಮೌಢ್ಯವೂ ಆಧ್ಯಾತ್ಮಿಕ ಪರಿಜ್ಞಾನದ ಕೊರತೆಯೂ ಆಗಿದೆ. ಆದರೆ, ಯಾವ ರೀತಿ ಯೇಸು ಮಸೀಹ್ ತನ್ನ ಆಧ್ಯಾತ್ಮಿಕ ಪ್ರಭಾವದಿಂದ ಆ ಪೈಶಾಚಿಕ ಚಿಂತನೆಗಳನ್ನು ತಡೆಗಟ್ಟಿ ಅವನ ಬೋಧನೆಗಳ ಅಶುದ್ಧತೆಯನ್ನು ಬಹಿರಂಗಗೊಳಿಸಿದರೋ ಆ ರೀತಿ ಮಾಡುವುದು ಪ್ರತಿಯೊಬ್ಬ ಸೂಫಿ ಸಂತರಿಗೂ ಸಾಧ್ಯವಾಗುವ ಕೆಲಸವಲ್ಲ. ಸೈಯ್ಯದ್ ಅಬ್ದುಲ್ ಖಾದಿರ್ ಜೀಲಾನಿ[ರ] ಹೇಳುತ್ತಾರೆ: "ನನಗೂ ಒಮ್ಮೆ ಪೈಶಾಚಿಕ ಇಲ್‌ಹಾಂ ಉಂಟಾಗಿತ್ತು. ಶೈತಾನ ಹೇಳಿದನು: 'ಎಲ್ಲೈ ಅಬ್ದುಲ್ ಖಾದಿರ್, ನಿನ್ನ ಆರಾಧನೆಗಳನ್ನೆಲ್ಲ ಸ್ವೀಕರಿಸಲಾಗಿದೆ. ಈಗ ಇತರರಿಗೆ ಹರಾಂ ಆದುದೆಲ್ಲವೂ ನಿನಗೆ ಹಲಾಲ್ (ಅನುಮತನೀಯ) ಆಗಿದೆ. ನಮಾಝ್ ಮಾಡುವುದರಿಂದಲೂ ಈಗ ನಿನಗೆ ವಿನಾಯಿತಿ ನೀಡಲಾಗಿದೆ. ಇನ್ನು ನೀನು ನಿನ್ನ ಇಷ್ಟ ಪ್ರಕಾರ ವರ್ತಿಸಿಕೊಳ್ಳಬಹುದು.' ಆಗ ನಾನು ಹೇಳಿದೆ: 'ಎಲ್ಲೈ ಶೈತಾನ್, ದೂರಸರಿ. ಹಝ್ರತ್ ಪೈಗಂಬರರಿಗೆ[ಸ] ಅನುಮತನೀಯವಲ್ಲದ ಸಂಗತಿಗಳು ನನಗೆ ಹೇಗೆ ಅನುಮತನೀಯವಾಗುವುದು?' ಆಗ ಶೈತಾನ್ ತನ್ನ ಸುವರ್ಣ ಸಿಂಹಾಸನದೊಂದಿಗೆ ನನ್ನ ಕಣ್ಣೆದುರಿನಿಂದ ಮಾಯವಾದನು." ನೋಡಿರಿ, ಪುಣ್ಯಾತ್ಮರಾದ ಅಬ್ದುಲ್ ಖಾದಿರ್ ಜೀಲಾನಿಯವರಂತಹ ಅಹ್ಲುಲ್ಲಾಹ್‌ರಿಗೂ ಶೈತಾನೀ ಇಲ್‌ಹಾಂ ಉಂಟಾಯಿತೆಂದಾದರೆ, ಇನ್ನೂ ತಮ್ಮ ಸ್ಥಿತಿಯನ್ನೇ ಸರಿಪಡಿಸಿಕೊಂಡಿಲ್ಲದ ಸಾಮಾನ್ಯ ಜನರು ಅದರಿಂದ ಸುರಕ್ಷಿತರಾಗಿರಲು ಹೇಗೆ ಸಾಧ್ಯ? ಸಯ್ಯದ್ ಅಬ್ದುಲ್ ಖಾದಿರ್ ಜೀಲಾನಿ ಮತ್ತು ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರಂತೆ ಶೈತಾನೀ ಇಲ್‌ಹಾಮ್‌ಗಳನ್ನು ಪ್ರತ್ಯೇಕಿಸಿ ಗುರುತಿಸುಕೊಳ್ಳುವ ದಿವ್ಯ ನೇತ್ರಗಳು ಇವರಿಗೆ ಎಲ್ಲಿ ಲಭಿಸಿರುತ್ತವೆ? ನೋಡಿರಿ,

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆಗಮನಕ್ಕೂ ಮೊದಲು ಅರೇಬಿಯಾದಲ್ಲಿ ಇಂತಹ ಜೋಯಿಸರು (ಕಣಿ ಹೇಳುವ ಜ್ಯೋತಿಷಿಗಳು) ತುಂಬಾ ಇದ್ದರು. ಅವರಿಗೆ ಧಾರಾಳವಾಗಿ ಶೈತಾನೀ ಇಲ್‌ಹಾಮ್‌ಗಳೂ ಲಭಿಸುತ್ತಿದ್ದವು. ಕೆಲವೊಮ್ಮೆ ಅವರು ಈ ಶೈತಾನೀ ಇಲ್‌ಹಾಮ್‌ಗಳ ಅಧಾರದಲ್ಲಿ ಭವಿಷ್ಯವನ್ನು ಸಹ ಹೇಳುತ್ತಿದ್ದರು. ಆಶ್ಚರ್ಯಕರ ಸಂಗತಿಯೆಂದರೆ, ಒಮ್ಮೊಮ್ಮೆ ಇವರ ಭವಿಷ್ಯವಾಣಿಗಳು ಸತ್ಯವಾಗುತ್ತಿದ್ದವು. ಇಸ್ಲಾಮೀ ಗ್ರಂಥಗಳು ಇಂತಹ ಕಥೆಗಳಿಂದ ತುಂಬಿಕೊಂಡಿವೆ. ಒಟ್ಟಿನಲ್ಲಿ ಈ ರೀತಿಯ ಶೈತಾನೀ ಇಲ್‌ಹಾಮ್‌ಗಳು ಉಂಟಾಗುತ್ತವೆ ಎಂಬ ವಿಚಾರವನ್ನು ನಿರಾಕರಿಸುವವನು ಸತ್ಯಪ್ರವಾದಿಗಳ ಬೋಧನೆಗಳನ್ನೇ ನಿರಾಕರಿಸುವವನಾಗುತ್ತಾನೆ. ಅಂಥವನು ಪ್ರವಾದಿತ್ವದ ಸಕಲ ಪರಂಪರೆಗಳನ್ನೂ ನಿರಾಕರಿಸುವವನಾಗುತ್ತಾನೆ. ಬೈಬಲಿನಲ್ಲಿ ಉಲ್ಲೇಖವಿರುವ ಒಂದು ಘಟನೆ ಈ ರೀತಿಯಿದೆ: ಒಮ್ಮೆ ಇಂತಹ ನೂರಾರು ಪ್ರವಚನಕಾರರಿಗೆ ಶೈತಾನೀ ಇಲ್‌ಹಾಮ್ ಉಂಟಾಯಿತು. ಒಂದು ಶ್ವೇತ ಜಿನ್ನ್ ಮೂಲಕ ಉಂಟಾದ ಆ ಇಲ್‌ಹಾಮ್‌ಗಳ ಆಧಾರದಲ್ಲಿ ಅಲ್ಲಿನ ರಾಜನ ವಿಜಯದ ಕುರಿತು ಅವರು ಭವಿಷ್ಯವಾಣಿ ನುಡಿದರು. ಆದರೆ, ಅದೇ ಯುದ್ಧದಲ್ಲಿ ಆ ರಾಜ ಅತ್ಯಂತ ದಾರುಣವಾಗಿ ಕೊಲ್ಲಲ್ಪಟ್ಟನು. ಬಲು ದೊಡ್ಡ ಪರಾಭವ ಉಂಟಾಯಿತು. ಆದರೆ, ಹಝ್ರತ್ ಜಿಬ್ರೀಲ್ ಅಲೈಹಿಸ್ಸಲಾಮ್ ಮೂಲಕ ಇಲ್‌ಹಾಂ ಲಭಿಸಿದ ಓರ್ವ ಪ್ರವಾದಿ, ರಾಜನು ಯುದ್ಧದಲ್ಲಿ ಕೊಲ್ಲಲ್ಪಡುವನೆಂದೂ ಆತನ ಮೃತ ಶರೀರವನ್ನು ನಾಯಿಗಳು ಕಚ್ಚಿ ತಿನ್ನುವವೆಂದೂ ಹಾಗೆ ದೊಡ್ಡ ಪರಾಭವ ಸಂಭವಿಸಲಿದೆಯೆಂದೂ ಮೊದಲೇ ಭವಿಷ್ಯ ನುಡಿದಿದ್ದರು. ಅದು ಹಾಗೆಯೇ ಸಂಭವಿಸಿತು ಹಾಗೂ ಆ 400 ಪ್ರವಚನಕಾರರ ಭವಿಷ್ಯವಾಣಿ ಸುಳ್ಳೆಂದು ಸಾಬೀತಾಯಿತು.

ಇಲ್ಲಿ ಸಹಜವಾಗಿಯೂ ಒಂದು ಪ್ರಶ್ನೆ ಉದ್ಭವಿಸುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಶೈತಾನೀ ಇಲ್‌ಹಾಮ್‌ಗಳು ಉಂಟಾಗುತ್ತವೆಯೆಂದಾದರೆ, ಇಲ್‌ಹಾಮಿನ ಕುರಿತಾದ ವಿಶ್ವಾಸವೇ ಅಪ್ರಸ್ತುತವೆನಿಸುವುದಿಲ್ಲವೇ? ಹಾಗೂ ಶೈತಾನೀ ಇಲ್‌ಹಾಂ ಆಗಿರಬಹುದಾದ ಸಾಧ್ಯತೆ ಇರುವುದರಿಂದ ಯಾವುದೇ ಇಲ್‌ಹಾಮ್ ಸಹ ನಂಬಿಕೆಗೆ ಯೋಗ್ಯವಾಗಿರುವುದಿಲ್ಲವಲ್ಲ ಎಂಬುದೇ ಆ ಸಂಶಯ. ಅದು ಸಹ ಮಸೀಹ್‌ರಂತಹ ಪ್ರಭಾವಶಾಲಿ ಪ್ರವಾದಿಗೆ ಕೂಡ ಈ ರೀತಿ ಸಂಭವಿಸಬಹುದೆಂದಾದರೆ ಮತ್ತೆ ಮುಲ್‌ಹಮ್‌ಗಳ (ಇಲ್‌ಹಾಂ

ಲಭಿಸುವವರ) ಸೊಂಟ ಮುರಿದಂತೆಯೇ ಸರಿ. ಇದರಿಂದ ಇಲ್‌ಹಾಂ ಒಂದು ಶಾಪವಾಗಿ ಪರಿಣಮಿಸುವುದಿಲ್ಲವೇ? ಈ ಪ್ರಶ್ನೆಗೆ ಉತ್ತರ ಇದಾಗಿದೆ: ನಿರಾಶೆ ಹೊಂದಬೇಕಾದ ಯಾವ ಅಗತ್ಯವೂ ಇರುವುದಿಲ್ಲ. ಯಾಕೆಂದರೆ ಈ ಪ್ರಪಂಚದಲ್ಲಿ ದೇವನ ಪ್ರಕೃತಿ ನಿಯಮವೇ ಆ ರೀತಿಯಿರುತ್ತದೆ. ಯಾವೊಂದು ಬೆಲೆಬಾಳುವ ವಸ್ತುವಿನೊಂದಿಗೂ ತುಚ್ಛವಾದ ನಕಲಿ ವಸ್ತುಗಳು ಸಹ ಜೋಡಿಸಲ್ಪಟ್ಟಿರುತ್ತವೆ. ನೋಡಿರಿ, ನದಿಗಳಿಂದ ಲಭಿಸುವ ಅಮೂಲ್ಯ ಮುತ್ತು ರತ್ನಗಳು ಒಂದೆಡೆ; ಮನುಷ್ಯರು ಸ್ವಯಂ ನಿರ್ಮಿಸಿ ಮಾರಾಟ ಮಾಡುವ ಕಡಿಮೆ ಬೆಲೆಯ ನಕಲಿಗಳು ಮತ್ತೊಂದೆಡೆ. ಈಗ ನೋಡಿರಿ, ಪ್ರಪಂಚದಲ್ಲಿ ನಕಲಿ ರತ್ನಗಳು ಇರುವ ಕಾರಣದಿಂದ ನಿಜವಾದ ಮುತ್ತು ರತ್ನಗಳ ಕ್ರಯ ವಿಕ್ರಯ ನಿಂತುಹೋಗುವುದಿಲ್ಲ. ಯಾಕೆಂದರೆ, ದೇವದತ್ತವಾದ ಸೂಕ್ಷ್ಮ ದೃಷ್ಟಿಯಿರುವ ಓರ್ವ ರತ್ನ ವ್ಯಾಪಾರಿ, ಒಂದೇ ನೋಟದಲ್ಲಿ ಅಸಲಿ ಮತ್ತು ನಕಲಿಗಳನ್ನು ಗುರುತಿಸಬಲ್ಲನು. ಹೌದು, 'ಇಲ್‌ಹಾಂ' ಎಂಬ ರತ್ನಾಭರಣಗಳ ರತ್ನ ವ್ಯಾಪಾರಿಯು 'ಇಮಾಮುಝ್ಝಮಾನ್' ಆಗಿದ್ದಾರೆ. ಅವರೊಂದಿಗೆ ಸಹವಾಸ ಪಡೆಯುವ ಜನರು ಸಹ ಅಸಲಿ ಮತ್ತು ನಕಲಿಗಳನ್ನು ಬೇರ್ಪಡಿಸಿ ತಿಳಿದುಕೊಳ್ಳಬಲ್ಲರು.

## ಸತ್ಯವಾದ ಇಲ್‌ಹಾಮ್‌ಗಳು

ಆದುದರಿಂದ ಎಲೈ ಸೂಫಿಗಳೇ, ಇಂತಹ ಸಂಶಯಗಳಿಂದ ಬಂಧಿತರಾದ ಜನರೇ, ಸ್ವಲ್ಪ ಎಚ್ಚರವಹಿಸಿಕೊಂಡು ಈ ಮಾರ್ಗದಲ್ಲಿ ನೀವು ಹೆಜ್ಜೆಯಿಡಿರಿ. ಅಲ್ಲಾಹನ ಕಡೆಯಿಂದ ಬರುವ ಸತ್ಯವಾದ ಇಲ್‌ಹಾಮ್‌ಗಳಿಗೆ ಈ ಕೆಳಗಿನ ಸವಿಶೇಷ ಲಕ್ಷಣಗಳಿವೆಯೆಂಬುದನ್ನು ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ:

1. ಮನುಷ್ಯನ ಹೃದಯವು ಅತಿಯಾದ ವೇದನೆಯೆಂಬ ಅಗ್ನಿಯಿಂದ ಕರಗಿ, ಶುದ್ಧವಾದ ಜಲದಂತೆ ಅದು ದೇವ ಸನ್ನಿಧಿಗೆ ಹರಿಯತೊಡಗುವ ಒಂದು ಅವಸ್ಥೆ ನಿರ್ಮಾಣವಾದಾಗ ಅದು ಉಂಟಾಗುತ್ತದೆ. 'ಪವಿತ್ರ ಖುರ್‌ಆನ್ ಅತಿ ವೇದನೆಯ ಅವಸ್ಥೆಯಲ್ಲಿ ಇಳಿಸಲ್ಪಟ್ಟಿದೆ. ಆದುದರಿಂದ ನೀವು ಸಹ ಅದನ್ನು ದುಃಖಭರಿತ ಹೃದಯದೊಂದಿಗೆಯೇ ಓದಿರಿ' ಎಂಬ ಹದೀಸ್ ವಚನವು ಇದನ್ನೇ ಸೂಚಿಸುತ್ತದೆ.

2. ಸತ್ಯವಾದ ಇಲ್‌ಹಾಂ ತನ್ನೊಂದಿಗೆ ಒಂದು ಬಗೆಯ ಸಂತೃಪ್ತಿಯನ್ನೂ ಆನಂದವನ್ನೂ ತರುತ್ತದೆ. ಅಜ್ಞಾತ ಕಾರಣದಿಂದ ಅದು ದೃಢವಿಶ್ವಾಸವನ್ನು

ಅಂಕುರಿಸುತ್ತದೆ. ಒಂದು ಉಕ್ಕಿನ ಮೊಳೆಯ ರೀತಿಯಲ್ಲಿ ಅದು ಹೃದಯದೊಳಗೆ ಪ್ರವೇಶಿಸುತ್ತದೆ. ಅದರ ಶಬ್ದಗಳು ಅರ್ಥಗರ್ಭಿತವೂ ತಪ್ಪುಗಳಿಂದ ಮುಕ್ತವಾದದ್ದೂ ಆಗಿರುತ್ತವೆ.

3. ಸತ್ಯವಾದ ಇಲ್‌ಹಾಮಿನಲ್ಲಿ ಒಂದು ಬಗೆಯ ಗಾಂಭೀರ್ಯ ಹಾಗೂ ಶ್ರೇಷ್ಠತೆ ಇರುತ್ತದೆ. ಅದರಿಂದಾಗಿ ಹೃದಯಕ್ಕೆ ಶಕ್ತವಾದೊಂದು ಸ್ಫುರಣ ಉಂಟಾಗುತ್ತದೆ. ಹಾಗೂ ಪ್ರಬಲವೂ ಪ್ರಭಾಪೂರ್ಣವೂ ಆದ ಶಬ್ದದೊಂದಿಗೆ ಅದು ಹೃದಯದ ಮೇಲೆ ಇಳಿಯುತ್ತದೆ. ಆದರೆ, ಹುಸಿ ಇಲ್‌ಹಾಮುಗಳು ಕಳ್ಳರಂತಹ, ನಪುಂಸಕರಂತಹ, ಹೆಂಗಸರಂತಹ ಕ್ಷೀಣವಾದ ಸ್ವರದಲ್ಲಿರುತ್ತದೆ. ಯಾಕೆಂದರೆ ಶೈತಾನ್ ಕಳ್ಳನೂ ನಪುಂಸಕವೂ ಸ್ತ್ರೀಯೂ ಆಗಿದೆ.

4. ಸತ್ಯವಾದ ಇಲ್‌ಹಾಂ ದೇವನ ಶಕ್ತಿ ಸಾಮರ್ಥ್ಯಗಳ ಪ್ರಭಾವವನ್ನು ಹೊಂದಿರುತ್ತದೆ. ಅದರಲ್ಲಿ ಭವಿಷ್ಯವಾಣಿಗಳೂ ಇರುತ್ತವೆ ಹಾಗೂ ಅವು ಪೂರ್ಣಗೊಳ್ಳುತ್ತವೆ.

5. ಸತ್ಯವಾದ ಇಲ್‌ಹಾಂ ಮನುಷ್ಯನನ್ನು ದಿನೇ ದಿನೇ ಸತ್ಕರ್ಮಿಯನ್ನಾಗಿ ಮಾಡುತ್ತದೆ. ಆಂತರಿಕವಾದ ಕಲ್ಮಶಗಳನ್ನು ಮತ್ತು ಮಾಲಿನ್ಯಗಳನ್ನು ಅದು ಶುದ್ಧೀಕರಿಸುತ್ತದೆ. ಅಂತೆಯೇ ಅದು ಸ್ವಭಾವ ಗುಣಗಳನ್ನು ಸಹ ಉತ್ತಮಗೊಳಿಸುತ್ತದೆ.

6. ಸತ್ಯವಾದ ಇಲ್‌ಹಾಮಿಗೆ ಮನುಷ್ಯನ ಎಲ್ಲ ಆಂತರಿಕ ಶಕ್ತಿಗಳೂ ಸಾಕ್ಷಿ ಹೇಳುತ್ತವೆ. ಆ ಎಲ್ಲ ಶಕ್ತಿಗಳ ಮೇಲೂ ಒಂದು ನವೀನವಾದ ಹಾಗೂ ಪರಿಶುದ್ಧವಾದ ಪ್ರಕಾಶ ಬೀಳುತ್ತಿರುತ್ತದೆ. ಹಾಗೆ ಅವನಿಗೆ ತನ್ನೊಳಗೆ ಒಂದು ಬದಲಾವಣೆಯ ಅನುಭವ ಉಂಟಾಗುತ್ತದೆ; ಹಾಗೂ ಅವನ ಮೊದಲಿನ ಜೀವನ ಗತಿಸಿಹೋಗಿ ಒಂದು ಹೊಸ ಜೀವನ ಪ್ರಾರಂಭವಾಗುತ್ತದೆ. ಹಾಗೆ ಅವನು ಮಾನವಕುಲದ ಸಾರ್ವತ್ರಿಕ ಸಹಾನುಭೂತಿಯ ಒಂದು ನಿಮಿತ್ತವಾಗಿ ಮಾರ್ಪಡುತ್ತಾನೆ.

7. ಸತ್ಯವಾದ ಇಲ್‌ಹಾಂ ಕೇವಲ ಒಂದು ಶಬ್ದದಲ್ಲಿ ಮಾತ್ರ ಸ್ಥಗಿತಗೊಳ್ಳುವುದಿಲ್ಲ. ಯಾಕೆಂದರೆ, ಅಲ್ಲಾಹನ ವಾಣಿ ಒಂದು ನಿರಂತರ ಪ್ರಕ್ರಿಯೆಯಾಗಿದೆ. ದೇವನು ಅತ್ಯಂತ ಮೃದುತ್ವವನ್ನು ಹೊಂದಿದವನಾಗಿದ್ದಾನೆ. ಅವನು ಯಾರ ಮೇಲೆ ಗಮನಹರಿಸುತ್ತಾನೋ ಅವನೊಡನೆ ಮಾತನಾಡುತ್ತಾನೆ. ಪ್ರಶ್ನೆಗಳಿಗೆ ಉತ್ತರ ನೀಡುತ್ತಾನೆ. ಒಂದೇ ಭವನದಲ್ಲಿ ಮತ್ತು ಒಂದೇ ಸಮಯದಲ್ಲಿ ಮನುಷ್ಯನು

ತನ್ನ ಅಪೇಕ್ಷೆಗಳಿಗೆ ಉತ್ತರವನ್ನು ಪಡೆಯಬಹುದಾಗಿದೆ. ಆದರೂ ಕೆಲವೊಮ್ಮೆ ಆ ಸಂಭಾಷಣೆಯು ಸ್ಥಗಿತಗೊಳ್ಳಲೂಬಹುದು.

8. ಸತ್ಯವಾದ ಇಲ್‌ಹಾಂ ಲಭಿಸುವ ವ್ಯಕ್ತಿಯು ಯಾವತ್ತೂ ಹೇಡಿಯಾಗಿರುವುದಿಲ್ಲ. ತನ್ನೆದುರು ನಿಲ್ಲುವ ಇತರ ಯಾವ ಇಲ್‌ಹಾಂ ವಾದಿಗೂ ಅವರು ಹೆದರುವುದಿಲ್ಲ – ಆತನು ಎಂತಹ ವಿರೋಧಿಯಾಗಿದ್ದರೂ ಸರಿ. ದೇವನು ತನ್ನೊಂದಿಗಿರುವನೆಂದೂ ಅವನು ತನ್ನ ಎದುರಾಳಿಯನ್ನು ಅಪಮಾನದೊಂದಿಗೆ ಪರಾಭವಗೊಳಿಸುವನೆಂದೂ ಅವರು ದೃಢವಿಶ್ವಾಸ ಹೊಂದಿರುತ್ತಾರೆ.

9. ಸತ್ಯವಾದ ಇಲ್‌ಹಾಂ ವಿಜ್ಞಾನ ಮತ್ತು ದೇವಜ್ಞಾನಗಳನ್ನು ಅಧಿಕವಾಗಿ ತಿಳಿದುಕೊಳ್ಳುವ ಒಂದು ಮಾರ್ಗವಾಗಿರುತ್ತದೆ. ಯಾಕೆಂದರೆ, ಅಲ್ಲಾಹನು ತನ್ನ ಮುಲ್‌ಹಮ್‌ನನ್ನು ತಿಳಿಗೇಡಿಯಾಗಿಯೂ ಅಜ್ಞಾನಿಯಾಗಿಯೂ ಇಡಲು ಇಷ್ಟಪಡುವುದಿಲ್ಲ.

10. ಸತ್ಯವಾದ ಇಲ್‌ಹಾಮಿನ ಜೊತೆ ಇನ್ನೂ ಅನೇಕ ಅನುಗ್ರಹಗಳು ಸಹ ಇರುತ್ತವೆ. ಅಲ್ಲಾಹನೊಡನೆ ಸಂಭಾಷಿಸುವ ವ್ಯಕ್ತಿಗೆ (ಕಲೀಮುಲ್ಲಾಹ್) ಪರೋಕ್ಷವಾದ ದೈವಿಕ ಸಹಾಯವೂ ಗೌರವಾದರಗಳೂ ಲಭಿಸುವುದು. ಜೊತೆಗೆ ಅವರನ್ನು ಅತ್ಯಂತ ಪ್ರಭಾವಶಾಲಿಯನ್ನಾಗಿಯೂ ಮಾಡಲಾಗುವುದು.

## ದಿವ್ಯ ಸಂದೇಶವಾಣಿ ಮೂಲಕ ಸುಜ್ಞಾನ ಪ್ರಸರಣ

ಇಂದಿನ ಕಾಲವು ಎಷ್ಟು ಆಪತ್ಕರವಾಗಿದೆಯೆಂದರೆ, ಇಂದಿನ ಬಹುತೇಕ ತತ್ವಜ್ಞಾನಿಗಳು ಮತ್ತು ಭೌತಿಕವಾದಿಗಳು, ಅದೇ ರೀತಿ ಬ್ರಹ್ಮಸಮಾಜ ವಿಭಾಗದವರು ಇಲ್‌ಹಾಮನ್ನು (ದೇವನಿಂದ ಲಭಿಸುವ ದಿವ್ಯ ಸಂದೇಶವನ್ನು) ನಿರಾಕರಿಸುವವರಾಗಿದ್ದಾರೆ. ಈ ನಿರಾಕರಣೆಯ ಅವಸ್ಥೆಯಲ್ಲೇ ಅನೇಕರು ಇಹಲೋಕ ತ್ಯಜಿಸಿದ್ದಾರೆ. ಆದರೆ ವಾಸ್ತವ ಸಂಗತಿಯೇನೆಂದರೆ, ಲೋಕದಲ್ಲಿರುವ ಎಲ್ಲರೂ ನಿರಾಕರಿಸಿದರೂ ಸತ್ಯವು ಸತ್ಯವಾಗಿಯೇ ಇರುತ್ತದೆ. ಅಂತೆಯೇ ಸುಳ್ಳನ್ನು ಲೋಕವೆಲ್ಲ ಸತ್ಯವೆಂದು ಹೇಳಿದರೂ ಸುಳ್ಳು ಸುಳ್ಳೇ ಆಗಿರುತ್ತದೆ. ಯಾರು ದೇವನಲ್ಲಿ ನಂಬಿಕೆಯುಳ್ಳವರಾಗಿ, ಅವನನ್ನು ಸಮಸ್ತ ಜಗತ್ತಿನ ಪರಿಪಾಲಕನೆಂದು ತಿಳಿಯುತ್ತಾರೋ ಆ ದೇವನು ಎಲ್ಲವನ್ನು ಕಾಣುವವನೂ ಎಲ್ಲವನ್ನು ಕೇಳುವವನೂ ಎಲ್ಲವನ್ನು ಬಲ್ಲವನೂ **(ಸಮೀಅ್, ಬಸೀರ್, ಅಲೀಂ)**

ಆಗಿದ್ದಾನೆಂದು ಒಪ್ಪುತ್ತಾರೋ ಅಂತಹ ಆಸ್ತಿಕ ವಿಶ್ವಾಸಿಗಳು ಇಷ್ಟೆಲ್ಲವನ್ನು ನಂಬುವವರಾಗಿಯೂ ಕೂಡ ದೇವನ ಮಾತುಗಳನ್ನು (ಮಾತನಾಡುವ ಶಕ್ತಿಯನ್ನು) ನಿರಾಕರಿಸುತ್ತಿರುವುದು ಅವರ ಮೌಢ್ಯವೆಂದೇ ಹೇಳಬೇಕಾಗುತ್ತದೆ. ಏನು, ಯಾವನು ಎಲ್ಲವನ್ನೂ ಕಾಣುತ್ತಾನೋ ಎಲ್ಲವನ್ನೂ ತಿಳಿಯುತ್ತಾನೋ ಹಾಗೂ ಯಾವನ ಜ್ಞಾನವು ಭೌತಿಕ ಇಂದ್ರಿಯದ ಸಹಾಯವಿಲ್ಲದೆ ಸೂಕ್ಷ್ಮಾತಿ ಸೂಕ್ಷ್ಮ ಸಂಗತಿಗಳನ್ನೂ ಆವರಿಸಿಕೊಂಡಿರುವುದೋ ಅಂಥವನು ಮಾತನಾಡಲಾರನೇ? ಅದೇ ರೀತಿ, ಅವನಿಗೆ ಮಾತನಾಡುವ ಶಕ್ತಿ ಹಿಂದಿನ ಕಾಲದಲ್ಲಿ ಇತ್ತೆಂದೂ ಈಗ ಅದು ನಿಂತುಹೋಗಿದೆಯೆಂದೂ ಹೇಳುವುದು ಸಹ ಅಸಂಬದ್ಧವಾಗಿದೆ. ಹಾಗಂತಾದರೆ, 'ಮಾತನಾಡುವವನು' ಎಂಬ ಅವನ ಸಿಫತ್ (ಗುಣ) ಭವಿಷ್ಯತ್ ಕಾಲಕ್ಕೆ ಸಂಬಂಧಪಟ್ಟದ್ದಲ್ಲವೆಂದೂ ಅದು ಪೂರ್ವಕಾಲಕ್ಕೆ ಮಾತ್ರ ಸೀಮಿತವೆಂದೂ ಹೇಳಿದಂತಾಗುವುದು, ಮಾತ್ರವಲ್ಲ ಈ ರೀತಿ ಹೇಳುವುದು ಅತ್ಯಂತ ಆಪತ್ಕರವೂ ನಿರಾಶಾದಾಯಕವೂ ಆಗಿದೆ. ಯಾಕೆಂದರೆ, ದೇವನ ಸಿಫತ್‌ಗಳು ಸಹ ಒಂದು ನಿರ್ದಿಷ್ಟ ಕಾಲದವರೆಗೆ ಇದ್ದು ಅನಂತರ ಅವು ಹೇಳ ಹೆಸರಿಲ್ಲದೆ ನಶಿಸಿಹೋಗುವುದೆಂದು ನಂಬುವುದಾದರೆ, ಅವನ ಇತರ ಗುಣಗಳ ಬಗ್ಗೆಯೂ ಸಂದೇಹವುಂಟಾಗುವುದು ಸಹಜವಾಗಿದೆ. ಪರಮಾತ್ಮನ ಎಲ್ಲ ಗುಣಗಳಲ್ಲೂ ವಿಶ್ವಾಸ ಹೊಂದಿದ ಬಳಿಕ ಕೈಯಲ್ಲಿ ಚೂರಿ ಹಿಡಿದುಕೊಂಡು ಅದರಿಂದ ಪ್ರಧಾನವಾದೊಂದು ಭಾಗವನ್ನು ಕತ್ತರಿಸಿ ಬಿಸಾಡುವಂತಹ ಈ ವಿಚಾರಧಾರೆ ಮತ್ತು ವಿಶ್ವಾಸವನ್ನು ಅತ್ಯಂತ ದೌರ್ಭಾಗ್ಯಕರವೆಂದೇ ಹೇಳಬೇಕಾಗಿದೆ. ಅಕಟಾ! ಆರ್ಯ ಸಮಾಜದವರು ವೇದಗಳ ಅವತೀರ್ಣದೊಂದಿಗೆ ಪರಮಾತ್ಮನ ದಿವ್ಯವಾಣಿಗೆ ಮುದ್ರೆಯೊತ್ತಿಬಿಟ್ಟಿದ್ದಾರೆ. ಕ್ರೈಸ್ತರೂ ಸಹ ದೇವವಾಣಿಗೆ ಮೊಹರು ಹಾಕದೆ ಬಿಡಲಿಲ್ಲ. ಯೇಸುಕ್ರಿಸ್ತರ ಕಾಲದವರೆಗೆ ಮಾತ್ರ ಮನುಷ್ಯರಿಗೆ ಆಧ್ಯಾತ್ಮಿಕ ಅರಿವು ಮತ್ತು ದಿವ್ಯಜ್ಞಾನ ಕರಗತಮಾಡಿಕೊಳ್ಳಲು ಪ್ರತ್ಯಕ್ಷ ರೀತಿಯ ದೇವವಾಣಿಗಳ ಆವಶ್ಯಕತೆಯಿತ್ತಾದರೂ ನಂತರದ ತಲೆಮಾರು ಎಷ್ಟೊಂದು ಭಾಗ್ಯಹೀನರೆಂದರೆ, ಈ ದೇವಾನುಗ್ರಹದಿಂದ ಅವರು ಎಂದೆಂದಿಗೂ ವಂಚಿತರಾಗಿಯೇ ಇರುವರು.

ಆದರೆ, ವಾಸ್ತವದಲ್ಲಿ ಮನುಷ್ಯನಿಗೆ ದಿವ್ಯಾನುಭವ ಮತ್ತು ದೇವಸಂದೇಶದ ಆವಶ್ಯಕತೆ ಯಾವಾಗಲೂ ಇರುತ್ತದೆ. ದೇವನ ಗುಣ ಮಹಾತ್ಮೆಗಳು ನವನವೀನ ಪ್ರಕಾಶವನ್ನು ನಿರಂತರ ಬೀರುತ್ತಲಿರುವ ಕಾಲದವರೆಗೆ ಮಾತ್ರವೇ ಯಾವುದಾದರೂ ಧರ್ಮವು ವೈಚಾರಿಕವಾಗಿ ನೆಲೆನಿಲ್ಲಲು ಸಾಧ್ಯ. ಇಲ್ಲವಾದರೆ

ಕೇವಲ ಕಥೆಗಳಾಗಿ ರೂಪಾಂತರಗೊಂಡು ಬೇಗನೇ ನಿರ್ನಾಮವಾಗುವುದು. ಇಂತಹ ಪರಾಭವವನ್ನು ಯಾವನೇ ಪ್ರಜ್ಞಾವಂತ ಮನುಷ್ಯನಿಗೆ ಸ್ವೀಕರಿಸಲು ಸಾಧ್ಯವೇ? ದಿವ್ಯ ವಚನಗಳ ಮೂಲಕವೂ ದೊಡ್ಡ ದೊಡ್ಡ ದಿವ್ಯ ದೃಷ್ಟಾಂತಗಳ ಮೂಲಕವೂ ಮಾತ್ರವೇ ಈಡೇರಬಹುದಾದಂತಹ ಪರಿಪಕ್ವವಾದ ದಿವ್ಯಜ್ಞಾನದ ಆವಶ್ಯಕತೆ ಖಂಡಿತವಾಗಿಯೂ ನಮಗೆ ಇದೆಯೆಂದು ನಮ್ಮ ಅಂತರಾತ್ಮ ನಮ್ಮೊಡನೆ ಹೇಳುತ್ತಿರುವಾಗ, ಅಲ್ಲಾಹನ ಕಾರುಣ್ಯವು ದೇವವಾಣಿ ಎಂಬ ಈ ಅನುಗ್ರಹದ ಬಾಗಿಲನ್ನು ನಮ್ಮ ಮೇಲೆ ಮುಚ್ಚಿ ಬಿಡಲು ಹೇಗೆ ಸಾಧ್ಯ? ಏನು, ಈ ಕಾಲದಲ್ಲಿ ನಮ್ಮ ಮನಸ್ಸು ಬೇರೇನೋ ಆಗಿ ಮಾರ್ಪಟ್ಟಿದೆಯೇ? ಅಥವಾ ದೇವನಲ್ಲಿ ಏನಾದರೂ ಮಾರ್ಪಟು ಉಂಟಾಗಿದೆಯೇ? ಒಂದು ಕಾಲಘಟ್ಟದಲ್ಲಿ ಓರ್ವ ವ್ಯಕ್ತಿಗೆ ಉಂಟಾಗುವ ಇಲ್‌ಹಾಂ ಲಕ್ಷಾಂತರ ಜನರ ದಿವ್ಯಜ್ಞಾನವನ್ನು ಬೆಳಗಿಸಲು ಪರ್ಯಾಪ್ತವಾಗಿದೆಯೆಂಬುದನ್ನು ಹಾಗೂ ಪ್ರತಿಯೋರ್ವ ವ್ಯಕ್ತಿಗೂ ಅದೇ ರೀತಿ ಉಂಟಾಗಬೇಕಾದುದು ಅನಿವಾರ್ಯವಲ್ಲವೆಂಬುದನ್ನು ನಾವು ಸಮ್ಮತಿಸುತ್ತೇವೆ. ಆದರೆ, ದೇವವಾಣಿಯ ಬುನಾದಿಯನ್ನೇ ಅಡಿಮೇಲು ಮಾಡುವ ರೀತಿಯಲ್ಲಿ ನಾವು ಸ್ವತಃ ಕಂಡರಿಯದ ಕೇವಲ ದಂತ ಕಥೆಗಳು ಮಾತ್ರವೇ ನಮ್ಮ ಬಳಿ ಇರುವುದೆಂಬ ವಾದವನ್ನು ನಾವು ಸುತರಾಂ ಒಪ್ಪಲು ಸಾಧ್ಯವಿಲ್ಲ. ಒಂದು ಸಂಗತಿ ಕಥೆಗಳ ರೂಪದಲ್ಲೇ ಮುಂದುವರಿದು ಬಂದು, ಅದನ್ನು ಸತ್ಯಪಡಿಸುವಂತಹ ನವೀನ ಮಾದರಿಗಳ್ಯಾವೂ ಸೃಷ್ಟಿಯಾಗದಿದ್ದಲ್ಲಿ, ಜ್ಞಾನಿಗಳಾದವರು ಸುದೃಢವಾದ ಇತರ ಪುರಾವೆಗಳ ಅಭಾವದಲ್ಲಿ ಆ ಕಥೆಗಳನ್ನು ನಂಬಲಾರರು. ವಿಶೇಷತಃ ಆ ಕಥೆಗಳು ವಿಚಾರಹೀನವೆಂದು ಹೇಳಲ್ಪಡುತ್ತಿರುವ ನಮ್ಮ ಈ ಕಾಲದಲ್ಲಿ. ಇದೇ ಕಾರಣದಿಂದ ಕಾಲಾಂತರದಲ್ಲಿ ಬುದ್ಧಿಜೀವಿಗಳಾದವರು ಇಂತಹ ದಿವ್ಯ ದೃಷ್ಟಾಂತಗಳನ್ನು ಪರಿಹಾಸ್ಯ ಮಾಡಿದರು. ಅವುಗಳನ್ನು ಸಂಶಯಾಸ್ಪದವಾದ ಸಂಗತಿಗಳೆಂದು ಕೂಡ ಒಪ್ಪಲು ಅವರು ತಯಾರಿಲ್ಲ. ಆ ರೀತಿ ಮಾಡುವ ಹಕ್ಕು ಅವರಿಗಿದೆ. ಯಾಕೆಂದರೆ, ಅದೇ ದೇವನು, ಅದೇ ಗುಣ ಲಕ್ಷಣಗಳು, ಅಂತಹದೇ ಆವಶ್ಯಕತೆ ಕೂಡ ನಮ್ಮ ಮುಂದೆ ಇರುವಾಗ, ಮಾತ್ರವಲ್ಲ ನಮಗೂ ಹೊಸ ಹೊಸ ಜೀವಂತ ದೃಷ್ಟಾಂತಗಳ ಆವಶ್ಯಕತೆಯಿದೆಯೆಂದು ಎಲ್ಲ ಆತ್ಮಗಳೂ ಬೊಬ್ಬಿಡುತ್ತಿರುವಾಗ, ಮತ್ತೆ ದೇವವಾಣಿಯ ಅವತರಣ ನಿಂತು ಹೋದದ್ದು ಯಾಕೆ? ಎಂಬ ಯೋಚನೆ ಅವರ ಮನಸ್ಸಿನಲ್ಲಿ ಉದ್ಭವವಾಗುತ್ತದೆ. ಈ ಕಾರಣದಿಂದಲೇ ಲಕ್ಷಾಂತರ ಜನ ಹೈಂದವರು ನಾಸ್ತಿಕ ವಾದಿಗಳಾದರು. ಇಲ್‌ಹಾಂ

ಮತ್ತು ದೇವವಾಣಿಯ ಅವತರಣ ಕೋಟ್ಯಾಂತರ ವರ್ಷಗಳಿಂದ ನಿಂತು ಹೋಗಿದೆಯೆಂದು ಅವರ ಪಂಡಿತರು ಅವರಿಗೆ ನಿರಂತರ ಉಪದೇಶ ನೀಡಿದರು. ಆದರೆ, ವೈದಿಕ ಕಾಲಕ್ಕಿಂತಲೂ ಹೆಚ್ಚಾಗಿ ನಮ್ಮ ಈ ಕಾಲದಲ್ಲಿ ಪರಮಾತ್ಮನ ದಿವ್ಯ ಬೋಧನೆಗಳ ಆವಶ್ಯಕತೆ ಇದೆಯೆಂಬ ವಿಚಾರ ಜನರ ಮನಸ್ಸನ್ನು ಕಾಡುತ್ತಿತ್ತು. ಈಶ್ವರೀಯ ವಾಣಿಯ ಅವತರಣ ಒಂದು ವಾಸ್ತವಿಕ ಸತ್ಯವೆಂದಾದರೆ, ವೇದಗಳ ನಂತರವೂ ಅದರ ಪರಂಪರೆ ಮುಂದುವರಿಯದಿರಲು ಕಾರಣವೇನು? ಆರ್ಯಾವರ್ತದಲ್ಲಿ ವ್ಯಾಪಕವಾಗಿ ನಾಸ್ತಿಕವಾದ ಹರಡಲು ಕಾರಣ ಇದೇ ಆಗಿದೆ. ವೇದಗಳನ್ನು ಪರಿಹಾಸ್ಯ ಮಾಡುವ ಹಾಗೂ ಅವುಗಳನ್ನು ನಿರಾಕರಿಸುವ ನೂರಾರು ಪಂಗಡಗಳನ್ನು ಹಿಂದೂಗಳಲ್ಲಿ ಕಾಣಬಹುದು. ಅವುಗಳಲ್ಲಿ ಒಂದು ಜೈನ ಮತ ಎಂಬ ವಿಭಾಗವಾಗಿದೆ. ಯಥಾರ್ಥದಲ್ಲಿ ಸಿಖ್ ಪಂಗಡದವರು ಸಹ ಹಿಂದೂಗಳಿಂದ ಬೇರ್ಪಟ್ಟು ಹೋಗಲು ಕಾರಣವೂ ಇದೇ ಆಗಿದೆ. ಯಾಕೆಂದರೆ, ಒಂದನೆಯದಾಗಿ, ಹಿಂದೂ ಧರ್ಮದಲ್ಲಿ ಪ್ರಪಂಚದ ನೂರಾರು ವಸ್ತುಗಳಿಗೆ ದೇವಸಹಭಾಗಿತ್ವವನ್ನು ನೀಡಲಾಗಿದೆ. ಬಹುದೇವ ವಿಶ್ವಾಸ ಎಷ್ಟರ ಮಟ್ಟಿಗೆ ವ್ಯಾಪಕವಾಗಿದೆಯೆಂದರೆ, ಅಲ್ಲಿ ಪರಮೇಶ್ವರನ ಕುರಿತು ಯಾವುದೇ ಸ್ಪಷ್ಟ ಕಲ್ಪನೆ ಲಭಿಸುವುದಿಲ್ಲ. ಮತ್ತೊಂದು, ವೇದಗಳು ದೇವವಾಣಿಗಳಾಗಿವೆ ಎಂಬ ವಾದ. ಅವು ಲಕ್ಷಾಂತರ ವರ್ಷಗಳಷ್ಟು ಹಳೆಯದೆಂದು ಹೇಳಲ್ಪಡುತ್ತಿದೆಯಾದರೂ ಅದು ನಿರಾಧಾರವಾದ ಒಂದು ಕಥೆ ಮಾತ್ರವಾಗಿದೆ. ನೂತನವಾದ ದೃಷ್ಟಾಂತಗಳೇನೂ ಇಲ್ಲ. ಆದುದರಿಂದ ನೈಜ ಸಿಖ್ ಆಗಿರುವವರು ವೇದಗಳನ್ನು ನಂಬುವುದಿಲ್ಲ.

ಲಾಹೋರಿನಿಂದ ಪ್ರಕಟವಾಗುವ 'ಅಖ್‌ಬಾರೆ ಆಂ' ಎಂಬ ಪತ್ರಿಕೆಯ 1898ನೇ ಸೆಪ್ಟೆಂಬರ್ 22ರ ಸಂಚಿಕೆಯಲ್ಲಿ ಈ ಕುರಿತು ಓರ್ವ ಸಿಖ್ ಸಾಹೇಬರ ಒಂದು ಲೇಖನ ಪ್ರಕಟವಾಗಿದೆ. ಅದರಲ್ಲಿ ಅವರು, ಖಾಲ್ಸ ವಿಭಾಗದವರು ವೇದಗಳನ್ನು ನಂಬುವುದಿಲ್ಲವೆಂದು ಸ್ಪಷ್ಟವಾಗಿ ಬರೆದಿದ್ದಾರೆ. ವೇದಗಳನ್ನು ಸರ್ವಥಾ ನಂಬಬಾರದೆಂದು ಗುರುಗಳ ನಿರ್ದೇಶವಿದೆಯೆಂಬುದಕ್ಕೆ ಪುರಾವೆಯಾಗಿ 'ಗ್ರಂಥಸಾಹಿಬ್'ನಿಂದ ಕೆಲವು ವಚನಗಳನ್ನೂ ಅವರು ಅದರಲ್ಲಿ ಬರೆದಿದ್ದಾರೆ. ವೇದಗಳನ್ನು ಖಂಡಿತ ನಂಬಬಾರದು ಎಂಬುದು ಅದರ ಸಾರಾಂಶವಾಗಿದೆ. 'ನಿಶ್ಚಯವಾಗಿಯೂ ನಾವು ವೇದಗಳ ಅನುಯಾಯಿಗಳಲ್ಲ. ನಾವು ಅವುಗಳನ್ನು ಸ್ವೀಕರಿಸುವುದೂ ಇಲ್ಲ' ಎಂದು ಅವರು ಘೋಷಿಸಿದ್ದಾರೆ. ಅದೇ ರೀತಿ ಪವಿತ್ರ ಖುರ್‌ಆನನ್ನು ಸ್ವೀಕರಿಸುವುದಾಗಿ ಅವರು ತನ್ನ ಲೇಖನದಲ್ಲಿ ಹೇಳಲಿಲ್ಲವೆಂಬುದೂ

ನಿಜವೇ. ಆದರೆ, ಅದಕ್ಕೆ ಕಾರಣ ಇಸ್ಲಾಂ ಧರ್ಮದ ಕುರಿತು ಅವರಿಗೆ ಸರಿಯಾದ ತಿಳಿವಳಿಕೆ ಇಲ್ಲದಿರುವುದೇ ಆಗಿದೆ. ಸರ್ವಶಕ್ತನೂ ಸರ್ವವನ್ನೂ ನೆಲೆನಿಲ್ಲಿಸುವವನೂ **(ಖಾದಿರ್, ಖಯ್ಯೂಂ)** ಆದ ದೇವನು ಇಸ್ಲಾಂ ಧರ್ಮದಲ್ಲಿ ರೂಢಮೂಲಗೊಳಿಸಿರುವ ದಿವ್ಯಪ್ರಕಾಶದ ಕುರಿತು ಅವರಿಗೆ ಅರಿವಿಲ್ಲ. ಅಜ್ಞಾನ ಮತ್ತು ಶತ್ರುತ್ವದ ಕಾರಣದಿಂದ ಅವರಿಗೆ ಪವಿತ್ರ ಖುರ್‌ಆನಿನಲ್ಲಿ ತುಂಬಿಕೊಂಡಿರುವ ಆಧ್ಯಾತ್ಮಿಕ ಪ್ರಕಾಶದ ಬಗ್ಗೆ ತಿಳಿವಳಿಕೆ ಲಭಿಸಲೂ ಇಲ್ಲ. ಅಷ್ಟು ಮಾತ್ರವಲ್ಲ, ಅವರು ಹಿಂದೂ ಸಮುದಾಯದವರೊಡನೆ ಹೊಂದಿರುವಷ್ಟು ಸಾಮಾಜಿಕ ಸಂಪರ್ಕವನ್ನು ಸಹ ಮುಸ್ಲಿಮರೊಂದಿಗೆ ಇಟ್ಟುಕೊಂಡಿಲ್ಲ. ಯಥಾರ್ಥದಲ್ಲಿ ಬಾಬಾ ನಾನಕ್ ಸಾಹೇಬರು **'ಚೋಲಾ ಸಾಹಿಬ್'**ನಲ್ಲಿ ಬರೆದಿಟ್ಟ ನಸೀಹತು ಪ್ರಕಾರ ನಡೆದುಕೊಂಡಿದ್ದರೆ ಅದೇ ಅವರಿಗೆ ಸಾಕಾಗಿತ್ತು. ಯಾಕೆಂದರೆ, ಇಸ್ಲಾಂ ಧರ್ಮದ ಹೊರತು ಸರಿಯೂ ಸತ್ಯವೂ ಆದ ಬೇರೆ ಯಾವ ಧರ್ಮವೂ ಇಲ್ಲ ಎಂಬುದಾಗಿ ಚೋಲಾ ಸಾಹಿಬ್‌ನಲ್ಲಿ ಬಾಬಾ ನಾನಕ್ ಸಾಹೇಬರು ಬರೆದಿದ್ದಾರೆ. ಆದ್ದರಿಂದ ಅಂತಹ ಮಹಾತ್ಮರ ಬಹುಮುಖ್ಯವಾದ ಈ ನಿರ್ದೇಶವನ್ನು ನಿರ್ಲಕ್ಷಿಸುವುದು ನಿಜವಾಗಿಯೂ ಅತ್ಯಂತ ದೌರ್ಭಾಗ್ಯಕರವಾಗಿದೆ. ಬಾಬಾ ನಾನಕ್ ಸಾಹೇಬರ ಕೈ ಬರಹದ ಕುರುಹಾಗಿ ಖಾಲ್ಸಾಗಳ ಬಳಿ ಈ ಒಂದು 'ಚೋಲಾ ಸಾಹಿಬ್' ಮಾತ್ರ ಇದೆ. 'ಗುರು ಗ್ರಂಥ ಸಾಹಿಬ್'ನ ಶ್ಲೋಕಗಳಂತೂ ಬಹಳ ನಂತರ ಕ್ರೋಢೀಕರಿಸಲ್ಪಟ್ಟವುಗಳಾಗಿವೆ ಹಾಗೂ ಅವುಗಳ ಬಗ್ಗೆ ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಅವುಗಳಲ್ಲಿ ಏನೆಲ್ಲ ಬದಲಾವಣೆಗಳು ಉಂಟಾಗಿವೆ, ಅವು ಯಾರದೆಲ್ಲ ಮಾತುಗಳ ಸಂಗ್ರಹವಾಗಿದೆ ಎಂಬುದನ್ನು ದೇವನೇ ಬಲ್ಲ. ಅಂತೂ ಅದರ ಬಗ್ಗೆ ವಿವರಿಸಬೇಕಾದ ಸಂದರ್ಭ ಇದಲ್ಲ. ನಮ್ಮ ಮುಖ್ಯ ಉದ್ದೇಶವೆಂದರೆ, ಮನುಷ್ಯರ ದೇವವಿಶ್ವಾಸಕ್ಕೆ ನವ ಚೈತನ್ಯವನ್ನು ತುಂಬಲು ಹೊಸ ಹೊಸ ಇಲ್‌ಹಾಮ್‌ಗಳ ಆವಶ್ಯಕತೆ ಯಾವಾಗಲೂ ಇದೆ ಎಂಬುದನ್ನು ವಿವರಿಸುವುದಾಗಿದೆ. ಅಂತಹ ಇಲ್‌ಹಾಮುಗಳಾದರೋ ಅತ್ಯುಜ್ವಲ ಪ್ರಭಾಶಕ್ತಿಯ ಕಾರಣದಿಂದ ಪ್ರತ್ಯೇಕಗೊಂಡು ಕಾಣುವಂಥದ್ದಾಗಿದೆ. ಯಾಕೆಂದರೆ, ಪರಮಾತ್ಮನಿಗೆ ಹೊರತು ಯಾವ ಶೈತಾನ್, ಜಿನ್ನ್, ಭೂತಕ್ಕಾಗಲಿ ಇಂತಹ ಪ್ರಬುದ್ಧವಾದ ಪ್ರಭಾಶಕ್ತಿ ಇರುವುದಿಲ್ಲ. ಆದುದರಿಂದ ಇಮಾಮುಝ್ಝಮಾನ್‌ರ ಇಲ್‌ಹಾಮ್ ಮೂಲಕವೇ ಇತರ ಇಲ್‌ಹಾಂಗಳ ಸತ್ಯಾಸತ್ಯತೆ ನಿರ್ಣಯಿಸಲ್ಪಡುತ್ತದೆ.

ಇಮಾಮುಝ್ಝಮಾನ್ ಆಗಿರುವ ವ್ಯಕ್ತಿಯ ಪ್ರಕೃತಿಯಲ್ಲೇ ನೇತೃತ್ವದ

ಗುಣವೂ ಅಡಕವಾಗಿರುವುದೆಂಬುದನ್ನು ನಾನು ಈಗಾಗಲೇ ವಿವರಿಸಿದ್ದೇನೆ. ಮುಂದಾಳುತನದ ವಿಶಿಷ್ಟ ಗುಣವು ನೈಸರ್ಗಿಕವಾಗಿಯೇ ಅವರಲ್ಲಿ ಲೀನಗೊಳಿಸಲ್ಪಟ್ಟಿರುತ್ತದೆ. ಅಲ್ಲಾಹನು ಮನುಷ್ಯರನ್ನು ವಿಂಗಡಿತ ರೀತಿಯಲ್ಲಿ ಬಿಟ್ಟುಬಿಡಲು ಬಯಸುವುದಿಲ್ಲವೆಂಬುದು ಅವನ ಒಂದು ನಡವಳಿಕೆ ಕ್ರಮವಾಗಿದೆ. ಯಾವ ರೀತಿ ಅವನು ಸೌರವ್ಯೂಹದಲ್ಲಿ ಗ್ರಹ ಉಪಗ್ರಹಗಳಾಗಿ ಅನೇಕ ನಕ್ಷತ್ರಗಳನ್ನು ಸೇರ್ಪಡಿಸಿದ್ದರೂ ಅವುಗಳ ರಾಜನಾಗಿ ಸೂರ್ಯನನ್ನು ಇರಿಸಿದಂತೆ, ಸತ್ಯವಿಶ್ವಾಸಿಗಳನ್ನು ನಕ್ಷತ್ರಗಳಂತೆ ಯಥಾ ಪ್ರಕಾರ ಸ್ಥಾನಕ್ರಮದಲ್ಲಿ ನಿಲ್ಲಿಸಿ, ದಿವ್ಯಪ್ರಕಾಶವನ್ನು ಅನುಗ್ರಹಿಸುತ್ತಾ ಇಮಾಮುಝ್ಝಮಾನ್‌ರನ್ನು ಅವರ ಸೂರ್ಯನನ್ನಾಗಿ ಮಾಡಿರುವನು. ದೈವಿಕವಾದ ಈ ನಡವಳಿಕೆ ಕ್ರಮವು ಜೇನು ನೊಣಗಳಲ್ಲಿಯೂ ನಮಗೆ ಕಂಡುಬರುತ್ತದೆ. ಅವುಗಳಿಗೂ ರಾಣಿ ಎಂದು ಕರೆಯಲ್ಪಡುವ ಒಂದು ನೇತಾರ ಇರುತ್ತದೆ. ಅದೇ ರೀತಿ ಐಹಿಕ ವ್ಯವಸ್ಥೆಯಲ್ಲೂ ಒಂದು ಸಮೂಹಕ್ಕೆ ಓರ್ವ ಅಮೀರ್ ಅಥವಾ ರಾಜನು ಇರಬೇಕೆಂಬುದು ದೇವನ ಇಚ್ಛೆಯಾಗಿದೆ. ಭಿನ್ನ ಭಿನ್ನರಾಗಿ ಪ್ರತ್ಯೇಕಗೊಳ್ಳಲು ಬಯಸುವವರ ಮೇಲೆ ಹಾಗೂ ಓರ್ವ ನೇತಾರನ ಆಜ್ಞಾನುವರ್ತಿಗಳಾಗಿ ಜೀವಿಸಲು ಬಯಸದವರ ಮೇಲೆ ಅಲ್ಲಾಹನ ಶಾಪವಿದೆ. ಮಹೋನ್ನತನಾದ ಅಲ್ಲಾಹನು ಹೇಳುತ್ತಾನೆ:

اَطِيْعُوا اللّٰهَ وَاَطِيْعُوا الرَّسُوْلَ وَاُولِى الْاَمْرِ مِنْكُمْ

**ಅತೀಉಲ್ಲಾಹ ವಅತೀಉರ್ರಸೂಲ ವಉಲಿಲ್‌ಅಮ್‌ರಿ ಮಿನ್‌ಕುಮ್** (4:60)

"ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ನಿಮ್ಮ ಪೈಕಿಯ ಅಧಿಕಾರಿಗಳಿಗೂ (ಉಲಿಲ್ ಅಂರ್) ನೀವು ವಿಧೇಯರಾಗಿರಿ."

**'ಉಲಿಲ್ ಅಂರ್'** ಎಂಬುದರ ತಾತ್ಪರ್ಯ, ಐಹಿಕ ದೃಷ್ಟಿಯಲ್ಲಿ ರಾಜ ಅಥವಾ ಆಡಳಿತಾಧಿಕಾರಿ ಎಂದೂ ಆಧ್ಯಾತ್ಮಿಕ ದೃಷ್ಟಿಯಲ್ಲಿ ಇಮಾಮುಝ್ಝಮಾನ್ ಎಂದೂ ಆಗಿದೆ. ಐಹಿಕ ನೆಲೆಯಲ್ಲಿ ಯಾರು ನಮ್ಮ ಉದ್ದೇಶ ಲಕ್ಷ್ಯಗಳನ್ನು ವಿರೋಧಿಸುವುದಿಲ್ಲವೋ ಮತ್ತು ಯಾರಿಂದ ನಮಗೆ ಧಾರ್ಮಿಕವಾಗಿ ಪ್ರಯೋಜನವುಂಟಾಗುವುದೋ ಅಂಥವರನ್ನು 'ನಮ್ಮ ಪೈಕಿಯವರು' ಎಂದು ಹೇಳಬಹುದಾಗಿದೆ. ಈ ಕಾರಣದಿಂದಲೇ ಬ್ರಿಟಿಷರ ಆಡಳಿತವನ್ನು ತಮ್ಮ ಉಲಿಲ್‌ಅಂರ್ ಆಗಿ ಅಂಗೀಕರಿಸುವಂತೆ ನಾನು ನನ್ನ ಜಮಾಅತ್ ಸದಸ್ಯರಿಗೆ ಉಪದೇಶ ನೀಡಿರುವುದು. ಅವರು ನಮ್ಮ ಧಾರ್ಮಿಕ ನಡವಳಿಕೆಗಳನ್ನು

ತಡೆಯುವವರಲ್ಲದ ಕಾರಣ ಹೃತ್ಪೂರ್ವಕವಾಗಿ ಅವರನ್ನು ಅನುಸರಿಸಬೇಕಾಗಿದೆ. ಅವರ ಇರುವಿಕೆಯಿಂದ ನಮಗೆ ಬಹಳಷ್ಟು ನೆಮ್ಮದಿ ಲಭಿಸಿದೆ. ಹಿಂದೂಸ್ಥಾನದ ಮುಸ್ಲಿಂ ರಾಜರುಗಳಿಗೆ ಸಹ ಸಾಧ್ಯವಾಗದ ರೀತಿಯಲ್ಲಿ ನಮ್ಮ ಧರ್ಮಕ್ಕೆ ಆಂಗ್ಲರಿಂದ ನೆರವು ಲಭಿಸಿದೆ ಎಂಬ ಮಾತನ್ನು ಅಂಗೀಕರಿಸದೆ ಹೋದಲ್ಲಿ ನಾವು ಕೃತಘ್ನತೆ ತೋರಿಸಿದಂತೆ ಆಗುವುದು. ಹಿಂದೂಸ್ಥಾನದ ಕೆಲವು ಮುಸ್ಲಿಂ ರಾಜರಾದರೋ ತಮ್ಮ ಭೀರುತ್ವದ ಕಾರಣದಿಂದ ಪಂಜಾಬ್ ರಾಜ್ಯವನ್ನು ಕೈಚೆಲ್ಲಿ ಬಿಟ್ಟಿದ್ದರು. ಅವರ ಈ ನಿರ್ಲಕ್ಷ್ಯ ಮತ್ತು ಅಸಡ್ಡೆಯ ಫಲವಾಗಿ ವಿವಿಧ ಸಿಖ್ ಆಡಳಿತ ಕಾಲದಲ್ಲಿ ನಮಗೂ ನಮ್ಮ ಧರ್ಮಕ್ಕೂ ಬಹಳಷ್ಟು ತೊಂದರೆಗಳು ಉಂಟಾಗಿವೆ. ಮಸೀದಿಗಳಲ್ಲಿ ಒಟ್ಟು ಸೇರಿ (ಜಮಾಅತ್ ಆಗಿ) ನಮಾಝ್ ಮಾಡಲಿಕ್ಕೂ ಉಚ್ಚ ಧ್ವನಿಯಲ್ಲಿ ಅಧ಼ಾನ್ (ಬಾಂಗ್) ನೀಡಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ. ಪಂಜಾಬಿನಲ್ಲಿ ಇಸ್ಲಾಮ್ ಧರ್ಮ ಗತಿಸಿಹೋದ ರೀತಿ ಯಲ್ಲಿ ಇತ್ತು. ನಂತರ ಆಂಗ್ಲರ ಆಡಳಿತ ಬಂದಾಗ ನಮ್ಮ ಸೌಭಾಗ್ಯ ನಮಗೆ ಮರಳಿ ಲಭಿಸಿತು. ಅವರು ಇಸ್ಲಾಂ ಧರ್ಮದ ನೆರವಿಗೆ ನಿಂತರು. ನಮ್ಮ ಧಾರ್ಮಿಕ ಚಟುವಟಿಕೆಗಳಲ್ಲಿ ನಮಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದರು. ನಮ್ಮ ಮಸೀದಿಗಳು ಪುನಃಶ್ಚೇತನಗೊಂಡವು. ಹಾಗೆ, ಬಹಳ ಕಾಲದ ಬಳಿಕ ಪಂಜಾಬಿನಲ್ಲಿ ಇಸ್ಲಾಂ ಧರ್ಮದ ಕುರುಹುಗಳು ಗೋಚರಿಸತೊಡಗಿದವು. ಏನು, ಈ ಔದಾರ್ಯ ಸ್ಮರಣೀಯವಲ್ಲವೇ? ವಾಸ್ತವದಲ್ಲಿ ಹೇಡಿಗಳಾದ ಕೆಲವು ಮುಸ್ಲಿಂ ಅರಸರು ತಮ್ಮ ಆಲಸ್ಯದ ಕಾರಣದಿಂದ ನಮ್ಮನ್ನು ಕುಫ್ರ್‌ಸ್ತಾನಕ್ಕೆ ತಳ್ಳಿ ಬಿಟ್ಟಿದ್ದರು. (ವಿಶ್ವಾಸಿಗಳಿಗೆ ನೆಲೆಸಲು ಅಯೋಗ್ಯವಾದ ದೇಶವನ್ನಾಗಿ ಮಾಡಿದ್ದರು.) ಆಂಗ್ಲರು ನಮ್ಮನ್ನು ಕೈಹಿಡಿದು ಅಲ್ಲಿಂದ ಮೇಲೆತ್ತಿದರು. ಆದುದರಿಂದ ಆಂಗ್ಲರ ವಿರುದ್ಧ ವಿದ್ವೇಷದ ಅಲೆ ಎಬ್ಬಿಸುವುದು ದೇವನ ಅನುಗ್ರಹಗಳನ್ನು ಕಡೆಗಣಿಸುವುದಕ್ಕೆ ಸಮವಾಗಿದೆ.

ಮೂಲ ವಿಷಯದ ಕಡೆಗೇ ಬರೋಣ, ಲೌಕಿಕ ಭದ್ರತೆಗಾಗಿ ಓರ್ವ ರಾಜನಿಗೆ ವಿಧೇಯರಾಗಿ ಜೀವಿಸಲು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತದೆ. ಇದೇ ರೀತಿಯ ಆಜ್ಞೆ ಆಧ್ಯಾತ್ಮಿಕ ಸಂಸ್ಕಾರಕ್ಕಾಗಿಯೂ ನೀಡಲಾಗಿದೆ. **"ಇಹ್‌ದಿನಸ್ಸಿರಾತಲ್ ಮುಸ್ತಖೀಂ ಸಿರಾತಲ್ಲಧ಼ೀನ ಅನ್‌ಅಮ್‌ತ ಅಲೈಹಿಮ್"** ಎಂಬ ಪ್ರಾರ್ಥನೆಯನ್ನು ಅಲ್ಲಾಹನು ಕಲಿಸಿರುವುದು ಇದರತ್ತ ಸೂಚನೆಯಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಯಾವನೇ ಸತ್ಯವಿಶ್ವಾಸಿಯಾಗಲಿ, ಯಾವನೇ ಮನುಷ್ಯನಾಗಲಿ,

ಮಾತ್ರವಲ್ಲ ಯಾವುದೇ ಜೀವಿಯೂ ಅಲ್ಲಾಹನ ಅನುಗ್ರಹದಿಂದ ವಂಚಿತವಲ್ಲ. ಹಾಗಿದ್ದೂ ಇವೆಲ್ಲವನ್ನೂ ಅನುಗಮಿಸಲಿಕ್ಕಾಗಿ ಅಲ್ಲಾಹನು ಈ ನಿರ್ದೇಶವನ್ನು ನೀಡಿದ್ದಾನೆಂದು ಹೇಳಲು ಸಾಧ್ಯವಿಲ್ಲವಷ್ಟೆ. ಆದುದರಿಂದ ಈ ವಚನದ ಅರ್ಥವು, ಯಾರ ಮೇಲೆ ಪರಿಪೂರ್ಣವೂ ಸಮಗ್ರವೂ ಆದ ರೀತಿಯಲ್ಲಿ ಆಧ್ಯಾತ್ಮಿಕ ಅನುಗ್ರಹಗಳ ವರ್ಷಧಾರೆ ಸುರಿಸಲ್ಪಟ್ಟಿದೆಯೋ ಅಂಥವರ ಹಾದಿಯನ್ನು ನಮಗೆ ದಯಪಾಲಿಸು ಹಾಗೂ ಅವರನ್ನು ಅನುಗಮಿಸುವ ಭಾಗ್ಯವನ್ನು ಕರುಣಿಸು ಎಂದಾಗಿದೆ. ಒಟ್ಟಿನಲ್ಲಿ, ನೀವು ಇಮಾಮುಝ್ಝಮಾನ್‌ರೊಂದಿಗೆ ಸೇರಿಕೊಳ್ಳಬೇಕೆಂಬುದೇ ಈ ವಚನದ ಸೂಚನೆಯಾಗಿದೆ. ಇಮಾಮುಝ್ಝಮಾನ್ ಎಂಬ ಪದದಲ್ಲಿ ನಬಿ, ರಸೂಲ್, ಮುಜದ್ದಿದ್ ಎಂಬಿವರೆಲ್ಲರೂ ಸೇರಿದ್ದಾರೆಂದು ತಿಳಿದುಕೊಳ್ಳಬೇಕಾಗಿದೆ. ಆದರೆ, ಯಾರು ದೇವನ ಸೃಷ್ಟಿಗಳ ಶಿಕ್ಷಣಕ್ಕಾಗಿ ಮತ್ತು ಮಾರ್ಗದರ್ಶನಕ್ಕಾಗಿ ನಿಯೋಜಿಸಲ್ಪಟ್ಟಿಲ್ಲವೋ ಹಾಗೂ ಅಂತಹ ಪರಿಪೂರ್ಣತೆ ಯಾರಿಗೆ ನೀಡಲ್ಪಟ್ಟಿಲ್ಲವೋ ಅವರು, 'ವಲಿಯ್ಯ್' ಆದರೂ 'ಅಬ್‌ದಾಲ್' ಆದರೂ ಇಮಾಮುಝ್ಝಮಾನ್ ಎಂದು ಕರೆಯಲ್ಪಡಲಾರರು.

## ನಾನು ಇಮಾಮುಝ್ಝಮಾನ್ ಆಗಿರುವೆನು.

ಈಗ ಅಂತಿಮವಾಗಿ ಬಾಕಿಯುಳಿಯುವ ಪ್ರಶ್ನೆ ಇದಾಗಿದೆ: ಮುಸ್ಲಿಮರೂ ಸಂತರೂ ಸ್ವಪ್ನದರ್ಶಿಗಳೂ ದಿವ್ಯವಾಣಿ ಲಭಿಸಿದವರೂ ಎಲ್ಲರೂ ಅನುಗಮಿಸಬೇಕೆಂದು ದೇವನು ಕಡ್ಡಾಯಗೊಳಿಸಿರುವ ಈ ಕಾಲದ ಇಮಾಮುಝ್ಝಮಾನ್ ಯಾರು? ಆದುದರಿಂದ ನಾನು ಈ ಸಂದರ್ಭದಲ್ಲಿ ನಿರ್ಭಯವಾಗಿ ಘೋಷಿಸುತ್ತೇನೆ: ದೇವನ ಅನುಗ್ರಹ ಮತ್ತು ಆಶೀರ್ವಾದದಿಂದ ಆ **ಇಮಾಮುಝ್ಝಮಾನ್ ನಾನೇ ಆಗಿರುವೆನು.** ನನ್ನಲ್ಲಿ ಆ ಎಲ್ಲ ಲಕ್ಷಣಗಳನ್ನೂ ನಿಬಂಧನೆಗಳನ್ನೂ ಅಲ್ಲಾಹನು ಒಟ್ಟುಗೂಡಿಸಿರುವನು. ಈ ಶತಮಾನದ ಆದಿಯಲ್ಲೇ ಅವನು ನನ್ನನ್ನು ನಿಯುಕ್ತಿಗೊಳಿಸಿರುವನು. ಅದರಲ್ಲಿ ಹದಿನೈದು ವರ್ಷಗಳು ಈಗಾಗಲೇ ಕಳೆದು ಹೋಗಿವೆ. ಇಸ್ಲಾಮಿನ ಅಖೀದ (ವಿಶ್ವಾಸಗಳು) ಭಿನ್ನಾಭಿಪ್ರಾಯಗಳಿಂದ ತುಂಬಿಹೋದ ಒಂದು ಕಾಲದಲ್ಲಿ ನನ್ನ ಆಗಮನವಾಗಿದೆ. ಯಾವುದೇ ವಿಶ್ವಾಸವೂ ಭಿನ್ನಭೇದದಿಂದ ಹೊರತಾಗಿರಲಿಲ್ಲ. ಅದೇ ರೀತಿ ಮಸೀಹ್ ಅಲೈಹಿಸ್ಸಲಾಮರ ಆಗಮನದ ಕುರಿತು ಸಹ ಬಹಳಷ್ಟು ತಪ್ಪು ಭಾವನೆಗಳು ಪ್ರಚಲಿತವಾಗಿದ್ದವು. ಈ ತಪ್ಪಾದ ವಿಶ್ವಾಸದಲ್ಲಿಯೂ ಭಿನ್ನಾಭಿಪ್ರಾಯಗಳು! ಅದರ

ಸ್ಥಿತಿ ಹೇಗಿತ್ತೆಂದರೆ, ಕೆಲವರು ಹಝ್ರತ್ ಈಸಾ ಅಲೈಹಿಸ್ಸಲಾಂ ಜೀವಿಸಿರುವರೆಂದು ನಂಬುವವರು. ಕೆಲವರು ಅವರು ಮೃತಪಟ್ಟಿದ್ದಾರೆಂದು ನಂಬುವವರು. ಕೆಲವರು ಅವರೇ ಸ್ವತಃ ಶರೀರ ಸಮೇತ ಇಳಿದು ಬರುವರೆಂದು ವಿಶ್ವಾಸ ಹೊಂದಿದ್ದರೆ, ಇನ್ನು ಕೆಲವರು ಅವರ ಬರುವಿಕೆ ಪ್ರತಿರೂಪಾತ್ಮಕವಾದುದೆಂದು ನಂಬುವವರು. ಇಳಿದು ಬರುವರೆಂದು ನಂಬುವವರಲ್ಲಿ ಸಹ ಕೆಲವರು ಅವರನ್ನು ದಿಮಿಶ್ಕ್‌ನಲ್ಲಿ ಇಳಿಸಿದರೆ, ಇನ್ನು ಕೆಲವರು ಮಕ್ಕದಲ್ಲೂ ಮತ್ತೆ ಕೆಲವರು ಬೈತುಲ್ ಮುಖದ್ದಸ್‌ನಲ್ಲೂ ಮತ್ತೂ ಕೆಲವರು ಇಸ್ಲಾಮಿ ಸೇನೆಯ ಮಧ್ಯೆ ಇಳಿಸುವವರು. ಅವರು ಭಾರತದಲ್ಲಿ ಅವತರಿಸುವರೆಂದು ನಂಬುವವರೂ ಇದ್ದರು. ಒಟ್ಟಿನಲ್ಲಿ, ಈ ಎಲ್ಲ ವಿಭಿನ್ನ ವಿಶ್ವಾಸಗಳೂ ಭಿನ್ನಾಭಿಪ್ರಾಯಗಳೂ ಓರ್ವ 'ಹಕಂ'ನ (ತೀರ್ಪುಗಾರ) ಅನಿವಾರ್ಯತೆಯನ್ನು ಒತ್ತಿ ಹೇಳುತ್ತಿದ್ದವು. ಆ ತೀರ್ಪುಗಾರನಾದ 'ಹಕಂ' ನಾನೇ ಆಗಿರುವೆನು. ನಾನು ಆಧ್ಯಾತ್ಮಿಕ ನೆಲೆಯಲ್ಲಿ ಶಿಲುಬೆಯನ್ನು ಒಡೆಯಲಿಕ್ಕಾಗಿಯೂ ಇತರ ಭಿನ್ನಾಭಿಪ್ರಾಯಗಳನ್ನು ದೂರೀಕರಿಸಲಿಕ್ಕಾಗಿಯೂ ಕಳುಹಿಸಲ್ಪಟ್ಟಿರುವೆನು. ನನ್ನ ಆಗಮನವನ್ನು ಅನಿವಾರ್ಯಗೊಳಿಸಿದ್ದು ಈ ಎರಡು ಸಂಗತಿಗಳೇ ಆಗಿವೆ. ನನ್ನ ಸತ್ಯತೆಗೆ ನಾನು ಬೇರೆ ಏನಾದರೂ ದೃಷ್ಟಾಂತಗಳನ್ನು ತೋರಿಸಬೇಕಾದ ಅಗತ್ಯವಿರಲಿಲ್ಲ. ಯಾಕೆಂದರೆ, ಆವಶ್ಯಕತೆಯೇ ಸ್ವಯಂ ಸಾಕ್ಷ್ಯವಾಗಿರುತ್ತದೆ. ಆದರೂ ಅಲ್ಲಾಹನು ನನ್ನ ಪರವಾಗಿ ಅನೇಕ ದೃಷ್ಟಾಂತಗಳನ್ನು ತೋರಿಸಿಕೊಟ್ಟಿರುತ್ತಾನೆ. ಯಾವ ರೀತಿ ನಾನು ಇತರ ಭಿನ್ನಾಭಿಪ್ರಾಯಗಳಿಗೆ ತೀರ್ಪು ನೀಡಬೇಕಾದ 'ಹಕಂ' ಆಗಿರುವೆನೋ ಅದೇ ರೀತಿ ಮಸೀಹರ ಜೀವನ – ಮರಣದ ತರ್ಕದಲ್ಲೂ ನಾನು ತೀರ್ಮಾನಗಾರನಾಗಿರುವೆನು. ಈಸಾ ಮಸೀಹರ ಮರಣದ ಕುರಿತು ಇಮಾಂ ಮಾಲಿಕ್(ರಹ್) ಮತ್ತು ಇಬ್ನು ಹಝ್ಮ್(ರಹ್) ಹಾಗೂ ಮುಅ್‌ತಝಿಲ ವಿಭಾಗದವರ ಹೇಳಿಕೆಗಳು ಸರಿಯೆಂದು ನಾನು ವಿಧಿಸುತ್ತೇನೆ. ಅಹ್ಲೆ ಸುನ್ನತ್ ವಿಭಾಗದ ಇತರರು ಈ ವಿಷಯದಲ್ಲಿ ತಪ್ಪಿತಸ್ಥರೆಂದು ನಾನು ಭಾವಿಸುತ್ತೇನೆ. ಈ ವಿವಾದದಲ್ಲಿ ಮುಳುಗಿ ಹೋದವರೊಡನೆ, ತೀರ್ಪುಗಾರನೆಂಬ ನೆಲೆಯಲ್ಲಿ ನಾನು ನೀಡುವ ವಿಧಿಯೇನೆಂದರೆ, ತಾತ್ವಿಕವಾಗಿ ನುಝೂಲ್ (ಇಳಿಯುವಿಕೆ) ಬಗ್ಗೆ ಅಹ್ಲೆ ಸುನ್ನತ್ ವಿಭಾಗದವರ ಭಾವನೆ ಸರಿಯಾಗಿಯೇ ಇದೆ. ಯಾಕೆಂದರೆ, ಸದೃಶ ರೂಪದಲ್ಲಿ ಮಸೀಹರ ಅವತರಣವಾಗಬೇಕಾದುದು ಅಗತ್ಯವಾಗಿತ್ತು. ಆದರೆ, ಅವತರಣದ (ನುಝೂಲ್–ಇಳಿಯುವಿಕೆಯ) ವಿಧಾನವನ್ನು ಗ್ರಹಿಸುವಲ್ಲಿ ಇವರಿಗೆ ತಪ್ಪು ಸಂಭವಿಸಿದೆ. ಅವತರಣವು ಬಾಹ್ಯಾರ್ಥದಲ್ಲಿ ಸಂಭವಿಸತಕ್ಕದ್ದಲ್ಲ. ಬದಲಾಗಿ,

ಗುಣ ಲಕ್ಷಣಗಳುಳ್ಳ ಉಪಮಾ ಸ್ವರೂಪದ ಅವತರಿಸುವಿಕೆಯಾಗಿದೆ. ಅದೇ ರೀತಿ, ಈಸಾ ಮಸೀಹರ(ಅ) ಮರಣದ ಬಗ್ಗೆ ಇರುವ ವಿವಾದದ ಕುರಿತು ಹೇಳುವುದಾದರೆ, ಮುಅ್‌ತಝಿಲ, ಇಮಾಂ ಮಾಲಿಕ್, ಇಬ್ನು ಹಝ್ಮ್ ಮೊದಲಾದವರ ಹೇಳಿಕೆಗಳು ಸರಿಯಿವೆ. ಯಾಕೆಂದರೆ, ಪವಿತ್ರ ಖುರ್‌ಆನಿನ ವಚನದಲ್ಲಿ ಖಚಿತವಾಗಿ ಪ್ರಸ್ತಾಪಿಸಲಾದಂತೆ, ಅಂದರೆ **'ಫಲಮ್ಮಾ ತವಫ್ಫಯ್‌ತನೀ'** ಎಂಬ ಪವಿತ್ರ ವಚನದಲ್ಲಿ ಹೇಳಲಾದಂತೆ, ಕ್ರಿಸ್ತೀಯರು ಮಾರ್ಗಭ್ರಷ್ಠರಾಗುವುದಕ್ಕಿಂತ ಮುಂಚಿತವಾಗಿಯೇ ಮಸೀಹ್(ಅ) ಮರಣ ಹೊಂದಿರಬೇಕಾದುದು ಅನಿವಾರ್ಯವಾಗಿತ್ತು. ಇದು ತೀರ್ಪುಗಾರನಾದ ನಾನು ನೀಡುವ ತೀರ್ಮಾನ ಆಗಿದೆ. ಇನ್ನು, ಯಾವನಾದರೂ ನನ್ನ ಈ ತೀರ್ಮಾನವನ್ನು ಸ್ವೀಕರಿಸದೆ ಇದ್ದರೆ, ಆತನು ಯಾರು ನನ್ನನ್ನು 'ಹಕಂ' (ತೀರ್ಪುಗಾರ) ಆಗಿ ನಿಶ್ಚಯಿಸಿರುವನೋ ಅವನನ್ನು ತಿರಸ್ಕರಿಸುವವನಾಗುತ್ತಾನೆ.

ನೀನು 'ಹಕಂ' ಆಗಿರುವುದಕ್ಕೆ ಪ್ರಮಾಣವೇನು? ಎಂದು ಕೇಳುವುದಾದಲ್ಲಿ ಅದಕ್ಕೆ ಉತ್ತರ, ಯಾವ ಕಾಲದಲ್ಲಿ 'ಹಕಂ' ಬರಬೇಕಾಗಿದೆಯೋ ಆ ಕಾಲ ಇದೇ ಆಗಿದೆ. ಯಾವ ಜನತೆಯ 'ಶಿಲುಬಾ ಮರಣ'ದ ತಪ್ಪು ಕಲ್ಪನೆಗಳನ್ನು ತೀರ್ಪುಗಾರನು ಬಂದು ಸರಿಪಡಿಸಬೇಕಾಗಿತ್ತೋ ಆ ಜನತೆಯೂ ಇಲ್ಲಿ ಇದೆ. ಯಾವ ಯಾವ ದೃಷ್ಟಾಂತಗಳು ಈ ತೀರ್ಪುಗಾರನ ಬಗ್ಗೆ ಸಾಕ್ಷ್ಯ ನೀಡಬೇಕಾಗಿತ್ತೋ ಆ ದೃಷ್ಟಾಂತಗಳೂ ಪ್ರಕಟಗೊಂಡಿವೆ. ದೃಷ್ಟಾಂತಗಳ ಸರಣಿ ಈಗಲೂ ಮುಂದುವರಿದಿವೆ. ಆಕಾಶ ದೃಷ್ಟಾಂತಗಳನ್ನು ಪ್ರಕಟಗೊಳಿಸುತ್ತಿದೆ. ಭೂಮಿಯೂ ದೃಷ್ಟಾಂತಗಳನ್ನು ಪ್ರಕಟಪಡಿಸುತ್ತಿದೆ. ಯಾರ ಕಣ್ಣುಗಳು ಇನ್ನೂ ಮುಚ್ಚಿಕೊಂಡಿಲ್ಲವೋ ಅವರೇ ಭಾಗ್ಯವಂತರು!

ಈ ಹಿಂದೆ ಪ್ರಕಟಗೊಂಡ ದೃಷ್ಟಾಂತಗಳನ್ನಷ್ಟೇ ನಂಬಿರಿ ಎಂದು ನಾನು ನಿಮ್ಮೊಡನೆ ಹೇಳುವುದಿಲ್ಲ. ಬದಲಾಗಿ, 'ನಾನು ಹಕಂ ಅಲ್ಲವೆಂದು ನೀವು ಭಾವಿಸುವಿರಾದರೆ, ನನ್ನ ಪರವಾಗಿ ಪ್ರಕಟಗೊಂಡ ದೃಷ್ಟಾಂತಗಳೊಡನೆ ಸ್ಪರ್ಧಿಸಲು ನೀವು ಮುಂದೆ ಬನ್ನಿರಿ' ಎಂದು ನಾನು ಹೇಳುತ್ತೇನೆ. ವಿಶ್ವಾಸ ಸಂಬಂಧವಾದ ಭಿನ್ನಾಭಿಪ್ರಾಯಗಳು ಪರಾಕಾಷ್ಠೆಯಲ್ಲಿರುವ ತಕ್ಕ ಸಮಯದಲ್ಲೇ ಆಗತನಾದ ನನ್ನ ವಿರುದ್ಧ ನಡೆಸುವ ಸಂವಾದಗಳೆಲ್ಲವೂ ನಿರರ್ಥಕವಾಗಿವೆ. ಹಕಂ ಎಂಬ ಬಗ್ಗೆ ಪರಿಜ್ಞಾನ ಹೊಂದಲಿಕ್ಕಾಗಿ ಮಾತುಕತೆ ನಡೆಸಲು ಪ್ರತಿಯೊಬ್ಬನಿಗೂ ಹಕ್ಕು ಇದೆ. ಆದರೆ ಅದನ್ನು ಸಹ ನಾನು ಪೂರ್ತೀಕರಿಸಿರುವೆನು. ದೇವನು ನನಗೆ ನಾಲ್ಕು ದೃಷ್ಟಾಂತಗಳನ್ನು ನೀಡಿದ್ದಾನೆ:

1. ಪವಿತ್ರ ಖುರ್‌ಆನಿನ ಅದ್ಭುತ ದೃಷ್ಟಾಂತದ ಪ್ರತಿರೂಪ ಎಂಬ ನೆಲೆಯಲ್ಲಿ ನನಗೆ ಅರಬಿ ಭಾಷೆಯ ಜಾಣ್ಮೆ ಮತ್ತು ಅದರ ಸಾಹಿತ್ಯದಲ್ಲಿ ಪ್ರಭುತ್ವ ಹಾಗೂ ಪ್ರಾವೀಣ್ಯದ ದೃಷ್ಟಾಂತ ನೀಡಲ್ಪಟ್ಟಿದೆ. ಈ ವಿಷಯದಲ್ಲಿ ನನ್ನೊಂದಿಗೆ ಸ್ಪರ್ಧಿಸಲು ಯಾರಿಂದಲೂ ಸಾಧ್ಯವಿಲ್ಲ.

2. ನನಗೆ ಪವಿತ್ರ ಖುರ್‌ಆನಿನ ಯಥಾರ್ಥ ದಿವ್ಯಜ್ಞಾನವನ್ನು ವಿವರಿಸುವ ಸಾಮರ್ಥ್ಯ ನೀಡಲ್ಪಟ್ಟಿದೆ. ಈ ವಿಷಯದಲ್ಲಿ ನನ್ನೊಂದಿಗೆ ಸ್ಪರ್ಧಿಸಲು ಯಾರೂ ಸಮರ್ಥರಲ್ಲ.

3. ಧಾರಾಳವಾಗಿ ಪ್ರಾರ್ಥನೆಗಳು ಸ್ವೀಕರಿಸಲ್ಪಡುವ ದೃಷ್ಟಾಂತವು ನನಗೆ ನೀಡಲ್ಪಟ್ಟಿದೆ. ಈ ವಿಷಯದಲ್ಲಿ ನನಗೆ ಸ್ಪರ್ಧೆ ನೀಡಲು ಯಾರಿಂದಲೂ ಸಾಧ್ಯವಾಗಲಾರದು. ಮೂವತ್ತು ಸಾವಿರದಷ್ಟು ನನ್ನ ಪ್ರಾರ್ಥನೆಗಳು ಸ್ವೀಕರಿಸಲ್ಪಟ್ಟಿವೆ ಎಂದು ನಾನು ಪ್ರಮಾಣ ಮಾಡಿ ಹೇಳಬಲ್ಲೆ. ಅವುಗಳ ಪುರಾವೆ ನನ್ನ ಬಳಿ ಇವೆ.

4. ನಾನು ಅಗೋಚರ ಅಥವಾ ಪರೋಕ್ಷ ಜ್ಞಾನ ಲಬ್ಧಿಯ ದೃಷ್ಟಾಂತ ನೀಡಲ್ಪಟ್ಟವನಾಗಿದ್ದೇನೆ. ಅದರಲ್ಲಿ ನನ್ನೊಂದಿಗೆ ಪೈಪೋಟಿ ನಡೆಸಬಲ್ಲವರು ಯಾರೂ ಇಲ್ಲ. ಈ ಬಗ್ಗೆ ದೈವಿಕ ಸಾಕ್ಷ್ಯಗಳು ನನ್ನ ಬಳಿ ಇವೆ. ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಗಳು ಪ್ರಕಾಶಮಾನವಾದ ದೃಷ್ಟಾಂತಗಳ ರೂಪದಲ್ಲಿ ನನ್ನ ಪರವಾಗಿ ಪೂರ್ತಿಯಾಗಿವೆ.

آسمان بارد نشان الوقت مے گوید زمین　　این دو شاہد از پئے تصدیق من استادہ اند

"ಆಕಾಶವು ದೃಷ್ಟಾಂತಗಳನ್ನು ತೋರಿಸುತ್ತಿದೆ. ಭೂಮಿಯಾದರೋ ಕಾಲದ ಬಗ್ಗೆ ಕೂಗಿ ಹೇಳುತ್ತಿದೆ. ಈ ಎರಡು ಸಾಕ್ಷ್ಯಗಳೂ ನನ್ನ ಸತ್ಯತೆಗೆ ಸಾಕ್ಷಿಯಾಗಿ ಎದ್ದು ನಿಂತಿವೆ."

ಒಂದೇ ರಮಝಾನ್ ಮಾಸದಲ್ಲಿ ಚಂದ್ರ ಗ್ರಹಣ ಮತ್ತು ಸೂರ್ಯ ಗ್ರಹಣ ಸಂಭವಿಸಿ ತುಂಬಾ ಕಾಲ ಕಳೆದಿದೆ. 'ಹಜ್ಜ್'ಗೆ ತಡೆಯುಂಟಾಯಿತು. ಹದೀಸಿನಲ್ಲಿ ವಿವರಿಸಲಾದಂತೆ ರಾಜ್ಯದಲ್ಲಿ ಪ್ಲೇಗು ವ್ಯಾಪಕವಾಗಿ ಹರಡಿತು. ಇವಲ್ಲದೆ ನಾನಿಲ್ಲಿ ಉಲ್ಲೇಖಿಸದೆ ಇರುವ, ನನ್ನ ಮೂಲಕವಾಗಿ ಪ್ರಕಟಗೊಂಡ ಇನ್ನೂ ಬಹಳಷ್ಟು ದೃಷ್ಟಾಂತಗಳು ಇವೆ. ಅವುಗಳಿಗೆ ಸಾಕ್ಷಿಗಳಾಗಿ ನೂರಾರು ಹಿಂದುಗಳೂ ಮುಸ್ಲಿಮರೂ ಇದ್ದಾರೆ. ಈ ಎಲ್ಲ ಕಾರಣಗಳಿಂದ ನಾನು ಇಮಾಮುಝುಮಾನ್ ಆಗಿರುವೆನು; ಹಾಗೂ ಅಲ್ಲಾಹನು ನನ್ನ ಸಹಾಯಕ್ಕೆ ಇದ್ದಾನೆ. ಅವನು ನನ್ನ

ಪರವಾಗಿ ಒಂದು ಹರಿತವಾದ ಖಡ್ಗದಂತೆ ನಿಂತಿದ್ದಾನೆ. ನನ್ನ ವಿರುದ್ಧವಾಗಿ ದುಷ್ಟತನದಿಂದ ಎದ್ದು ನಿಲ್ಲುವವನು ಪರಾಜಿತನೂ ಅಪಮಾನಿತನೂ ಆಗುವನೆಂದು ಅವನು ನನಗೆ ತಿಳಿಸಿರುತ್ತಾನೆ.

ನೋಡಿರಿ, ನನಗೆ ವಹಿಸಿಕೊಡಲಾದ ಸಂದೇಶವನ್ನು ನಾನು ನಿಮಗೆ ತಲಪಿಸಿರುವೆನು. ನಾನು ನನ್ನ ಗ್ರಂಥಗಳಲ್ಲಿ ಈ ಬಗ್ಗೆ ಅನೇಕ ಸಲ ಪ್ರತಿಪಾದಿಸಿಯೂ ಇರುವೆನು. ಈಗ ಮತ್ತೊಮ್ಮೆ ಈ ವಿಷಯವನ್ನು ಪ್ರತಿಪಾದಿಸಲು ನನ್ನನ್ನು ಪ್ರೇರೇಪಿಸಿರುವುದು ನನ್ನ ಓರ್ವ ಮಿತ್ರನಿಗೆ ಸಂಭವಿಸಿದ **ಇಜ್‌ತಿಹಾದ್** ಸಂಬಂಧವಾದ ಒಂದು ತಪ್ಪು ತಿಳಿವಳಿಕೆಯಾಗಿದೆ. (ಎಂದರೆ, ವಿಷಯವನ್ನು ಮನವರಿಕೆ ಮಾಡುವುದರಲ್ಲಿ ಉಂಟಾದ ಲೋಪ). ಅದನ್ನು ತಿಳಿದೊಡನೆ ನಾನು ಅತ್ಯಂತ ಮನೋವೇದನೆಯೊಂದಿಗೆ ಈ ಕೃತಿಯನ್ನು ಬರೆಯುತ್ತಿದ್ದೇನೆ. ಅದೇನೆಂದರೆ: ಇತ್ತೀಚೆಗೆ, ಅಂದರೆ 1898ನೇ ಇಸವಿ ಸಪ್ಟೆಂಬರ್ ತಿಂಗಳು – ಹಿಜರಿ ವರ್ಷ 1316ನೇ ಜಮಾದಿಲ್ ಅವ್ವಲ್ ಮಾಸದ ಸಂಭವ. ನನ್ನ ಓರ್ವ ಸ್ನೇಹಿತ, ಅವರನ್ನು ನಾನು ಓರ್ವ ನಿಷ್ಕಳಂಕ, ಸದ್ಧರ್ಮಿ, ದೇವಭಕ್ತ ಹಾಗೂ ದೇವಭಯವಿರುವ ವ್ಯಕ್ತಿಯೆಂದೂ ಭಾವಿಸಿರುವೆನು – ಪ್ರಾರಂಭದಿಂದಲೇ ಅವರ ಕುರಿತು ನನಗೆ ಒಳ್ಳೆಯ ಭಾವನೆಯಿತ್ತು – **ವಲ್ಲಾಹು ಹಸೀಬಹು** (ಲೆಕ್ಕ ತೆಗೆಯುವವನು ಅಲ್ಲಾಹನಾಗಿದ್ದಾನೆ). ಆ ನನ್ನ ಸ್ನೇಹಿತ ಕೆಲವು ತಪ್ಪು ಕಲ್ಪನೆಗಳನ್ನು ಹೊಂದಿರುವುದಾಗಿ ನನಗೆ ತಿಳಿದುಬಂತು. ಅವರ ಈ ತಪ್ಪು ತಿಳಿವಳಿಕೆಯ ಕಾರಣದಿಂದಾಗಿ ನನಗೆ ಅವರ ಬಗ್ಗೆ ಆತಂಕವೂ ಉಂಟಾಯಿತು. ಅವರು ನನ್ನ ಮತ್ತೊಬ್ಬ ನಿಕಟ ಸ್ನೇಹಿತನ ಜೊತೆ ಬಹಳ ಕಷ್ಟಪಟ್ಟು ಪ್ರಯಾಣ ಮಾಡಿ ನನ್ನ ಬಳಿಗೆ ಖಾದಿಯಾನಿಗೆ ಬಂದಿದ್ದರು. ಅವರಿಗೆ ಲಭಿಸಿದ ಅನೇಕ ಇಲ್‌ಹಾಮ್‌ಗಳನ್ನು ನನಗೆ ಹೇಳಿಕೊಟ್ಟರು. ಅವರು ಇಲ್‌ಹಾಮ್‌ನಿಂದ (ದೇವ ಸಂದೇಶ) ಅನುಗ್ರಹಿಸಲ್ಪಟ್ಟದ್ದನ್ನು ತಿಳಿದು ನನಗೆ ತುಂಬಾ ಸಂತೋಷವಾಯಿತು. ಆದರೆ, ಅವರು ತನ್ನ ಇಲ್‌ಹಾಮ್‌ಗಳ ಬಗ್ಗೆ ವಿವರಿಸುತ್ತಾ ತಾನು ಕಂಡ ಒಂದು ಸ್ವಪ್ನ ದರ್ಶನದ ಬಗ್ಗೆಯೂ ನನಗೆ ಹೀಗೆ ತಿಳಿಸಿದರು: 'ನಾನು ತಮ್ಮ ಬಗ್ಗೆ ಹೇಳಿದೆ – ನಾನೇಕೆ ಅವರಿಗೆ ಬೈಅತ್ ಮಾಡಬೇಕು? ಅವರು ನನಗೆ ಬೈಅತ್ ಮಾಡಬೇಕಲ್ಲವೇ?'

ಈ ಸ್ವಪ್ನದಿಂದಾಗಿ ಅವರು ನನ್ನನ್ನು ಮಸೀಹ್ ಮೌಊದ್ (ವಾಗ್ದತ್ತ ಮಸೀಹ್) ಆಗಿ ಅಂಗೀಕರಿಸುವುದಿಲ್ಲವೆಂದೂ ನೈಜ ಇಮಾಮತಿನ ಪರಿಕಲ್ಪನೆ

ಕುರಿತು ಅವರಿಗೆ ಅರಿವಿಲ್ಲವೆಂದೂ ನನಗೆ ತಿಳಿಯಿತು. ಆದುದರಿಂದ ಅವರ ಮೇಲಿನ ನನ್ನ ಸಹಾನುಭೂತಿಯು ಯಥಾರ್ಥ ಇಮಾಮತಿನ ಕುರಿತು ಅವರಿಗೆ ವಿವರಿಸಿಕೊಡುವ ಹಾಗೂ ಬೈಅತಿನ ನಿಜಾಂಶವನ್ನು ವಿವರಿಸುವ ಈ ಕೃತಿಯನ್ನು ಬರೆಯಲು ನನ್ನನ್ನು ಪ್ರೇರೇಪಿಸಿತು. ಬೈಅತ್ ಸ್ವೀಕರಿಸಲು ಅರ್ಹತೆಯಿರುವ ಯಥಾರ್ಥ ಇಮಾಂ ಯಾರೆಂಬ ಕುರಿತು ಈ ಪುಸ್ತಕದಲ್ಲಿ ನಾನು ಹಲವು ವಿವರಣೆಗಳನ್ನು ನೀಡಿರುವೆನು.

## ‘ಬೈಅತ್’ ಅಂದರೇನು?

**ಬೈಅತ್** ಅಂದರೇನೆಂಬುದನ್ನು ಸಹ ಇಲ್ಲಿ ವಿವರಿಸಬೇಕಾಗಿದೆ. ಬೈಅತ್ ಎಂಬ ಶಬ್ದವು **‘ಬೈಅ್’** ಎಂಬ ಮೂಲ ಪದದಿಂದ ಉದ್ಭವಿಸಿದ್ದಾಗಿದೆ. ಪರಸ್ಪರ ತೃಪ್ತಿಪಟ್ಟುಕೊಂಡು ಒಂದು ವಸ್ತುವನ್ನು ಮತ್ತೊಂದು ವಸ್ತುವಿನೊಂದಿಗೆ ಬದಲಾಯಿಸುವ ವ್ಯವಹಾರವನ್ನು **‘ಬೈಅ್’** ಎಂದು ಹೇಳಲಾಗುತ್ತದೆ. ಆದುದರಿಂದ ಬೈಅತ್ ಎಂಬುದರ ತಾತ್ಪರ್ಯವು, ಬೈಅತ್ ಮಾಡುವವನು ತನಗೆ ದಿವ್ಯಜ್ಞಾನವೂ ಮೋಕ್ಷವೂ ದೇವ ಸಂಪ್ರೀತಿಯೂ ಲಭಿಸಲು ಕಾರಣವಾಗುವ ಯಥಾರ್ಥ ಜ್ಞಾನ ಮತ್ತು ಅನುಗ್ರಹಗಳನ್ನು ಹೊಂದಲಿಕ್ಕಾಗಿ ತನ್ನ ಜೀವನ ಮತ್ತು ಜೀವಿತದ ಸರ್ವ ಉದ್ದೇಶಗಳನ್ನೂ ಓರ್ವ ಮಾರ್ಗದರ್ಶಿಯ ಕೈಗಳಲ್ಲಿ ಸಂಪೂರ್ಣವಾಗಿ ಒಪ್ಪಿಸಿಕೊಡುವುದನ್ನು ಬೈಅತ್ ಎಂದು ಹೇಳಲಾಗುವುದು. ಆದುದರಿಂದ ಕೇವಲ **‘ತೌಬ’** (ಪಶ್ಚಾತ್ತಾಪ) ಮಾಡುವುದನ್ನು ಬೈಅತ್ ಎಂದು ನಿರ್ಧರಿಸಲಾಗದು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಯಾಕೆಂದರೆ, ಆ ರೀತಿ ತೌಬ (ಪಾಪ ವಿಮೋಚನೆಗಾಗಿ ಮಾಡುವ ಪ್ರಾರ್ಥನೆ) ಓರ್ವ ವ್ಯಕ್ತಿ ತಾನೇ ಸ್ವಯಂ ಮಾಡಿಕೊಳ್ಳಬಹುದಾಗಿದೆ. ಆದರೆ, ಯಥಾರ್ಥವಾದ ತೌಬದ ಕಡೆಗೆ ತನ್ನನ್ನು ಸೆಳೆದುಕೊಂಡು ಹೋಗುವ ದಿವ್ಯಜ್ಞಾನ, ಅನುಗ್ರಹ ಮತ್ತು ದೃಷ್ಟಾಂತಗಳು ಇಲ್ಲಿ ಉದ್ದೇಶಿಸಲ್ಪಟ್ಟಿವೆ. ಆದುದರಿಂದ ಬೈಅತಿನ ನಿಜವಾದ ಗುರಿಯು ತನ್ನ ಜೀವಿತವನ್ನು ಓರ್ವ ಮಾರ್ಗದರ್ಶಕ ಗುರುವಿನ ದಾಸ್ಯದಲ್ಲಿ ಸಂಪೂರ್ಣವಾಗಿ ಒಪ್ಪಿಸಿಕೊಂಡು ಅದಕ್ಕೆ ಪ್ರತಿಯಾಗಿ ದಿವ್ಯಜ್ಞಾನ ಮತ್ತು ಅನುಗ್ರಹಗಳನ್ನು ಪಡೆಯುವುದಾಗಿದೆ. ಆ ಮೂಲಕ ಸತ್ಯವಿಶ್ವಾಸ (ಈಮಾನ್) ಸುದೃಢಗೊಳ್ಳುತ್ತದೆ. ದಿವ್ಯಜ್ಞಾನದಲ್ಲಿ ಅಭಿವೃದ್ಧಿಯುಂಟಾಗುತ್ತದೆ. ಅಲ್ಲಾಹನೊಡನೆ ನಿಷ್ಕಳಂಕವಾದ ಸಂಪರ್ಕವುಂಟಾಗುತ್ತದೆ. ಅಂತೆಯೇ ಪ್ರಾಪಂಚಿಕವಾದ ದುರ್ದೆಶೆಯಿಂದ

ಪಾರಾಗುವುದು ಮತ್ತು ಪರಲೋಕದ ನರಕದಿಂದ ಮುಕ್ತಿ ಹೊಂದುವುದು ಸಹ ಅದರ ಉದ್ದೇಶವಾಗಿರಬೇಕಾಗಿದೆ. ಈ ಲೋಕದ ಅಂಧಕಾರದಿಂದ ವಿಮೋಚಿತನಾಗಿ ಪರಲೋಕದ ಅಂಧತ್ವದಿಂದಲೂ ರಕ್ಷೆ ಹೊಂದಬೇಕಾಗಿದೆ. ಆದುದರಿಂದ ಈ ರೀತಿಯ ಬೈಅತಿನ ಸತ್ಫಲವನ್ನು ನೀಡಬಲ್ಲ ಓರ್ವ ವ್ಯಕ್ತಿ ಇರುವಾಗ ಮನಃಪೂರ್ವಕವಾಗಿ ಯಾರಾದರೂ ಅವರಿಂದ ಬೇರ್ಪಟ್ಟು ನಿಲ್ಲುವುದೆಂದರೆ ಅದು ಅತ್ಯಂತ ದೌರ್ಭಾಗ್ಯಕರವೇ ಆಗಿರುವುದು.

ಪ್ರಿಯರೇ, ನಾನಾದರೋ ದಿವ್ಯಜ್ಞಾನದ ಮತ್ತು ಯಥಾರ್ಥ ಅರಿವು ಹಾಗೂ ಪಾರಮಾರ್ಥಿಕ ಅನುಗ್ರಹಗಳ ಹಸಿವಿನಿಂದಲೂ ದಾಹದಿಂದಲೂ ಬಳಲುತ್ತಿದ್ದೇನೆ – ಒಂದು ಸಮುದ್ರದಷ್ಟನ್ನು ಕುಡಿದರೂ ತೃಪ್ತಿಯಾಗಲಾರದಷ್ಟು. ಆದುದರಿಂದ ಯಾರಾದರೂ ನಮ್ಮನ್ನು ತನ್ನ ದಾಸತ್ವದಲ್ಲಿ ಸ್ವೀಕರಿಸಲು ಬಯಸುವುದಿದ್ದಲ್ಲಿ, ಬೈಅತಿನ ನಿಬಂಧನೆಗಳನ್ನೂ ಅದರ ನಿಜ ತತ್ವವನ್ನೂ ಪೂರ್ತೀಕರಿಸಿಕೊಂಡು ಕ್ರಯವಿಕ್ರಯದ ಈ ಒಡಂಬಡಿಕೆಯನ್ನು ನೇರಮಾರ್ಗದಲ್ಲಿ ನಮ್ಮಿಂದ ಪಡೆದುಕೊಳ್ಳಲಿ. ನಮಗೆ ಲಭಿಸದೆ ಇರುವಂತಹ ಸತ್ಯಜ್ಞಾನವೂ ಆಧ್ಯಾತ್ಮಿಕ ಸಂಪತ್ತೂ ಸ್ವರ್ಗೀಯ ಅನುಗ್ರಹಗಳೂ ಅವರ ಬಳಿ ಇರುವುದಾದರೆ ಅಥವಾ ನಮಗೆ ತೆರೆದುಕೊಡಲ್ಪಡದಂತಹ ಪವಿತ್ರ ಖುರ್‌ಆನಿನ ಜ್ಞಾನೋದಯವೇನಾದರೂ ಅವರಿಗೆ ಲಭಿಸಿದೆಯೆಂದಾದರೆ ಅಂತಹ ಮಾನ್ಯ ವ್ಯಕ್ತಿಯು ಅಲ್ಲಾಹನ ನಾಮದಲ್ಲಿ ನಮ್ಮಿಂದ ದಾಸ್ಯತ್ವದ ಮತ್ತು ಅನುಸರಣೆಯ ಪ್ರತಿಜ್ಞೆಯನ್ನು ಪಡೆದುಕೊಳ್ಳಲಿ ಹಾಗೂ ತನ್ನ ಬಳಿಯಿರುವ ಆಧ್ಯಾತ್ಮಿಕ ಸಂಪತ್ತು, ಪವಿತ್ರ ಖುರ್‌ಆನಿನ ಜ್ಞಾನ, ಹಾಗೂ ಸ್ವರ್ಗೀಯ ಅನುಗ್ರಹಗಳನ್ನು ನಮಗೂ ನೀಡಲಿ. ಹೆಚ್ಚಿನ ಪ್ರಯಾಸವೇನೂ ಬೇಕಾಗಿಲ್ಲ, ನಮ್ಮ ಮುಲ್‌ಹಂ (ದಿವ್ಯ ಬೋಧನೆಗಳು ಲಭಿಸುವ) ಸ್ನೇಹಿತ, ಯಾವುದಾದರೂ ಒಂದು ಸಭೆಯಲ್ಲಿ ಪವಿತ್ರ ಖುರ್‌ಆನಿನ ಕೇವಲ ಸೂರಃ ಇಖ್‌ಲಾಸಿನ ತತ್ವ ರಹಸ್ಯವನ್ನೂ ದಿವ್ಯ ಜ್ಞಾನವನ್ನೂ ವಿವರಿಸಲಿ. ಅದಕ್ಕಿಂತಲೂ ಸಾವಿರ ಪಟ್ಟು ಮಹತ್ವಪೂರ್ಣವಾದ ವ್ಯಾಖ್ಯಾನವನ್ನು ನೀಡಲು ನಮ್ಮಿಂದ ಸಾಧ್ಯವಾಗದ ಪಕ್ಷದಲ್ಲಿ ನಾವು ಅವರ ಅನುಸಾರಿಯಾಗಲು ಸಿದ್ಧ.

ندارد کسے با تو ناگفتہ کار ولیکن چو گفتی دلیلش بیار

"ನಿನಗೆ ಹೇಳಲು ಏನೂ ಇಲ್ಲದಿದ್ದರೆ ಯಾರೂ ನಿನ್ನ ಪರಿವೆ ಮಾಡಲಿಕ್ಕಿಲ್ಲ; ಆದರೆ ನೀನು ಮಾತಿಗೆ ಇಳಿದ ಕಾರಣ ಪುರಾವೆಗಳೊಂದಿಗೆ ಮಾತ್ರ ಮಾತನ್ನಾಡಬೇಕು."

ಒಟ್ಟಿನಲ್ಲಿ ತಮ್ಮ ಬಳಿ ದಿವ್ಯ ದೃಷ್ಟಾಂತದಿಂದ ಪ್ರಭಾಪೂರಿತವಾಗಿರುವ ಸತ್ಯದರ್ಶನವೂ ಆಧ್ಯಾತ್ಮಿಕ ಜ್ಞಾನವೂ ಅನುಗ್ರಹಗಳೂ ಇವೆಯೆಂದಾದರೆ, ನಾನು ಮಾತ್ರವಲ್ಲ, ನನ್ನ ಪೂರ್ಣ ಜಮಾಅತ್ ಸಹ ತಮ್ಮ ಕೈಯಲ್ಲಿ ಬೈಅತ್ ಸ್ವೀಕರಿಸಿಕೊಳ್ಳುವೆವು. ಹಾಗೆ ಮಾಡದವನು ಅತ್ಯಂತ ನೀಚನೇ ಸರಿ. ಆದರೆ, ನಾನೇನು ಹೇಳಲಿ, ನಾನೇನು ಬರೆಯಲಿ. ಕ್ಷಮಾಪಣೆಯೊಂದಿಗೆ ಹೇಳುತ್ತೇನೆ – ಲಿಖಿತ ರೂಪದಲ್ಲಿದ್ದ ತಮ್ಮ ಇಲ್‌ಹಾಮ್‌ಗಳ ಬಗ್ಗೆ ನಾನು ಗಮನಿಸಿದಾಗ ಅದರಲ್ಲಿ ಕೆಲವೆಡೆ ರಚನೆ ಮತ್ತು ವ್ಯಾಖ್ಯಾನ ದೋಷಗಳಿರುವುದು ಕಂಡುಬಂತು. ತಾವು ಕೋಪಿಸದಿರಿ. ನಾನು ಸದುದ್ದೇಶದಿಂದಲೂ ಧಾರ್ಮಿಕವಾದ ಉಪದೇಶವೆಂಬ ನೆಲೆಯಲ್ಲೂ ಬಹಳ ವಿನಮ್ರತೆಯಿಂದ ಇದನ್ನು ಹೇಳುತ್ತಿದ್ದೇನೆ. ಮಾತ್ರವಲ್ಲ, ಅರಿವಿಲ್ಲದ ಅನಕ್ಷರಸ್ಥನೋರ್ವನ ಇಲ್‌ಹಾಂ ವಚನಗಳಲ್ಲಿ ವ್ಯಾಕರಣ ಸಂಬಂಧವಾದ ಏನಾದರೂ ಸಣ್ಣ ಪುಟ್ಟ ದೋಷಗಳು ಇರುವುದಾದರೂ ಇಲ್‌ಹಾಮಿನ ಮೂಲ ಸ್ವರೂಪವು ಆಕ್ಷೇಪಾರ್ಹವಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ಇದೊಂದು ಅತಿ ಗಹನವಾದ ವಿಷಯವಾಗಿದೆ. ವಿಶಾಲವಾದ ವಿವರಣೆಯ ಅಗತ್ಯವಿದೆ. ಈ ಸಂದರ್ಭದಲ್ಲಿ ಅದರ ಆವಶ್ಯಕತೆಯಿಲ್ಲ. ಒಂದು ವೇಳೆ ಅಂತಹ ತಪ್ಪುಗಳನ್ನು ಕಂಡು ಯಾರಾದರೂ ಹಠವಾದಿ ಮುಲ್ಲಾ ಆವೇಶಭರಿತನಾದರೂ ಸಹ ಆತನಿಗೆ ವಿನಾಯಿತಿಯಿದೆ. ಯಾಕೆಂದರೆ ಆಧ್ಯಾತ್ಮಿಕ ಜ್ಞಾನ ಮಂಡಲದಲ್ಲಿ ಆತ ಇನ್ನೂ ಪ್ರವೇಶಿಸಿಲ್ಲ ಎಂದರ್ಥ. ಆದರೆ, ಅದನ್ನೊಂದು ಕೆಳ ದರ್ಜೆಯ ದಿವ್ಯ ಬೋಧನೆ ಎಂದು ಮಾತ್ರ ಕರೆಯಬಹುದಾಗಿದೆ. ಅದು ಅಲ್ಲಾಹನ ದಿವ್ಯ ಪ್ರಕಾಶದ ಪೂರ್ಣ ತೇಜಸ್ಸಿನಿಂದ ಪ್ರಭಾವಿತವಾಗಿರುವುದಿಲ್ಲ. ಯಾಕೆಂದರೆ, ಇಲ್‌ಹಾಂ ಮೂರು ವಿಧಗಳಲ್ಲಿವೆ. ಅತಿ ಕೆಳಮಟ್ಟದ್ದು, ಮಧ್ಯಮ ಮತ್ತು ಅತ್ಯುನ್ನತ ಮಟ್ಟದ್ದು.

ಒಟ್ಟಿನಲ್ಲಿ, ನಮ್ಮ ಈ ಮಾನ್ಯ ಸ್ನೇಹಿತನ ಈ ತಪ್ಪುಗಳಿಂದಾಗಿ ನಾನು ಲಜ್ಜಿತನಾಗಿಬಿಟ್ಟೆ ಹಾಗೂ ಅವರು ಪ್ರತ್ಯಕ್ಷದಲ್ಲಿ ಆಕ್ಷೇಪಾರ್ಹವೆಂದು ಕಂಡುಬರುವ ಈ ದಿವ್ಯ ಬೋಧನೆಗಳನ್ನು ಯಾರಾದರೂ ಕುತರ್ಕಿ ಬರಡು ಮುಲ್ಲಾಗೆ ಹೇಳಿಕೊಡದಿರಲಿ ಎಂದು ನಾನು ಮನಸ್ಸಿನಲ್ಲೇ ಪ್ರಾರ್ಥಿಸುತ್ತಿದ್ದೆ. ಯಾಕೆಂದರೆ, ಅವರು ಸುಮ್ಮನೆ ಟೀಕೆ ಮತ್ತು ಅಪಹಾಸ್ಯಕ್ಕೆ ಗುರಿಯಾಗುವರು. ಯಾವ ಇಲ್‌ಹಾಮಿನಲ್ಲಿ ಸತ್ಯಜ್ಞಾನವೂ ಆಧ್ಯಾತ್ಮಿಕ ಚೇತನವೂ ಇರುವುದಿಲ್ಲವೋ ಹಾಗೂ ಅವು ತಪ್ಪುಗಳಿಂದ ಕೂಡಿದ್ದಾಗಿರುವುದೋ ಅಂತಹ ಇಲ್‌ಹಾಮ್‌ಗಳು ಮಿತ್ರರಿಗಾಗಲಿ ಶತ್ರುಗಳಿಗಾಗಲಿ ಯಾರಿಗೂ ಪ್ರಯೋಜನ ನೀಡಲಾರದು.

ವಿಶೇಷತಃ ಈ ಕಾಲದಲ್ಲಿ ಅವು ಪ್ರಯೋಜನಕ್ಕೆ ಬದಲಾಗಿ ಹಾನಿಕಾರಕವೆಂದು ಭಯಪಡಬೇಕಾಗಿದೆ. ನಾನು ಸಂಪೂರ್ಣ ಭರವಸೆಯೊಂದಿಗೆ ಸತ್ಯವಾಗಿಯೂ ಪ್ರಮಾಣ ಪೂರ್ವಕವಾಗಿಯೂ ಹೇಳುತ್ತೇನೆ. ಈ ಮಾತುಗಳು ಪರಮ ಸತ್ಯ. ನನ್ನ ಪ್ರಿಯ ಸ್ನೇಹಿತ ದೇವಭಕ್ತಿಯ ಕಡೆಗೆ ಇನ್ನೂ ಹೆಚ್ಚಿನ ಗಮನಹರಿಸಿ ಮುಂದುವರಿಯಬೇಕಾಗಿದೆ*. ಹೃದಯ ಹೆಚ್ಚು ಹೆಚ್ಚು ಶುದ್ಧೀಕರಣಗೊಂಡಂತೆಯೇ ಇಲ್‌ಹಾಮ್‌ಗಳ ಪದಗಳಲ್ಲಿನ ಪರಿಶುದ್ಧಿಯೂ ಹೆಚ್ಚುತ್ತಾ ಬರುವುದು. ಈ ಕಾರಣದಿಂದಲೇ ಪವಿತ್ರ ಖುರ್‌ಆನಿನ ದಿವ್ಯ ವಚನಗಳು ಇತರ ಎಲ್ಲ ಪ್ರವಾದಿಗಳ ದಿವ್ಯ ಬೋಧನೆಗಳಿಗಿಂತ, ಪಾರಮಾರ್ಥಿಕ ಜ್ಞಾನದಲ್ಲಿ ಮಾತ್ರವಲ್ಲ ಅರ್ಥ ಸಂಪುಷ್ಟಿಯಲ್ಲೂ ಸರಳತೆಯಲ್ಲೂ ಅತ್ಯಂತ ಶ್ರೇಷ್ಠ ಮಟ್ಟದಲ್ಲಿದೆ. ಯಾಕೆಂದರೆ, ನಮ್ಮ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಇತರ ಎಲ್ಲರಿಗಿಂತಲೂ ಹೆಚ್ಚು ಹೃದಯ ಶುದ್ಧಿ ಲಭಿಸಿತ್ತು. ಆದುದರಿಂದ ಆ ವಹ್ಯ್ ಅಥವಾ ದಿವ್ಯ ಬೋಧನೆಗಳು ತತ್ವಜ್ಞಾನ ಭರಿತವಾದ ಅರ್ಥವನ್ನೊಳಗೊಂಡು, ಸರಳ ಸುಂದರವಾದ ಪದಗಳನ್ನೊಳಗೊಂಡು ಅವತೀರ್ಣವಾದವು.

ನಾನು ಈ ಮೊದಲೇ ವಿವರಿಸಿದಂತೆ 'ಬೈಅತ್' ಎಂದರೆ ಒಂದು ಕೊಡು ಕೊಳ್ಳುವಿಕೆಯ ವ್ಯವಸ್ಥೆ ಎಂಬುದನ್ನು ನನ್ನ ಸ್ನೇಹಿತ ನೆನಪಿನಲ್ಲಿಟ್ಟುಕೊಳ್ಳಬೇಕು. ನಾನು ಸತ್ಯವಾಗಿ ಹೇಳುತ್ತೇನೆ, ಪಂಡಿತವರೇಣ್ಯರಾದ ನಮ್ಮ ಅಬ್ದುಲ್ ಕರೀಂ ಸಾಹೇಬರು ಉಪದೇಶ ಪ್ರವಚನ ನೀಡುವಾಗ ಯಾವ ರೀತಿ ಪವಿತ್ರ ಖುರ್‌ಆನಿನ ದಿವ್ಯಜ್ಞಾನ ಮತ್ತು ತತ್ವಸಾರಗಳನ್ನು ವಿವರಿಸುವರೋ ಅದರ ಸಾವಿರದಲ್ಲಿ ಒಂದಂಶದಷ್ಟಾದರೂ ನಮ್ಮ ಈ ಮಾನ್ಯ ಸ್ನೇಹಿತರ ಬಾಯಿಯಿಂದ ಹೊರಬೀಳುವುದೆಂದು ನಾನು ಭಾವಿಸುವುದಿಲ್ಲ. ಅದಕ್ಕೆ ಕಾರಣ ಇಷ್ಟೆ. ಅವರ ಇಲ್‌ಹಾಮಿನ ಸ್ವರೂಪ ಇನ್ನೂ ನ್ಯೂನತೆಯಿಂದಲೇ ಕೂಡಿದೆ; ಅವರಿಗೆ ಲಭಿಸಿದ ಶಿಕ್ಷಣವಾದರೋ ಅಪೂರ್ಣವೂ ಆಗಿದೆ. ಅವರಿಗೆ ಯಾರಾದರೂ "ಮುಹಖ್ಖಿಖ್"ರಿಂದ (ಖುರ್‌ಆನ್ ಬಗ್ಗೆ ಆಳವಾಗಿ ಶೋಧನೆ ನಡೆಸುವ ಪಂಡಿತ) ಪವಿತ್ರ ಖುರ್‌ಆನ್ ಬಗ್ಗೆ ಕೇಳಿ ತಿಳಿಯುವ ಅವಕಾಶವಾದರೂ ಲಭಿಸಿದೆಯೋ ಎಂದು ಗೊತ್ತಿಲ್ಲ*.

* ಈ ಮಾನ್ಯ ಸ್ನೇಹಿತ ಈ ಬಗ್ಗೆ ಹೆಚ್ಚಿನ ಗಮನಹರಿಸುವರೆಂದಾದರೆ, ಶೀಘ್ರದಲ್ಲೇ ಅವರ ಇಲ್‌ಹಾಮ್‌ಗಳಲ್ಲಿ ಪರಿಪಕ್ವತೆ ಮತ್ತು ಪರಿಪೂರ್ಣತೆಯ ಒಂದು ಹೊಸ ರೂಪ ಬೆಳೆದು ಬರುವುದೆಂದು ನನಗೆ ಭರವಸೆಯಿದೆ.

ತಾವು ಸಿಟ್ಟಾಗಬಾರದೆಂದು ದೇವನಾಮದಲ್ಲಿ ಕೇಳಿಕೊಳ್ಳುತ್ತೇನೆ. ಬೈಅತಿನ ನಿಜವಾದ ಉದ್ದೇಶವನ್ನು ಎಂದರೆ, ಅದರಲ್ಲಿ ಏನನ್ನು ಕೊಡಲಾಗುತ್ತದೆ ಮತ್ತು ಏನನ್ನು ಪಡೆಯಲಾಗುತ್ತದೆ ಎಂಬುದನ್ನು ತಾವು ಇದುವರೆಗೂ ತಿಳಿದುಕೊಂಡಿಲ್ಲ. ನನ್ನ ಕೈಯಲ್ಲಿ ಬೈಅತ್ ಮಾಡಿರುವ ದೇವದಾಸರ ಪೈಕಿ ಮಹಾ ಪಂಡಿತರಾದ ಓರ್ವ ಮಹೋನ್ನತ ವ್ಯಕ್ತಿ ನಮ್ಮ ಜಮಾಅತಿನಲ್ಲಿದ್ದಾರೆ. ಹಕೀಂ ಹಾಫಿಝ್ ಹಾಜೀ ಹರಮೈನ್ ಮೌಲವಿ ನೂರುದ್ದೀನ್ ಸಾಹಿಬ್. ಅವರು ಲೋಕದಲ್ಲಿರುವ ಹೆಚ್ಚು ಕಮ್ಮಿ ಎಲ್ಲ ತಫ್‌ಸೀರ್‌ಗಳನ್ನೂ ಹೊಂದಿದವರಾಗಿದ್ದಾರೆ. ಅದೇ ರೀತಿ ಅವರ ಹೃದಯದಲ್ಲಿ ಸಾವಿರಾರು ಖುರ್‌ಆನಿಕ ತತ್ವಜ್ಞಾನದ ಭಂಡಾರವಿದೆ. ನಿಜವಾಗಿಯೂ ನಿಮಗೆ ಬೈಅತ್ ಪಡೆಯುವ ಪದವಿ ಲಭಿಸಿದೆಯೆಂದಾದರೆ, ಪವಿತ್ರ ಖುರ್‌ಆನಿನ ಒಂದು ಅಧ್ಯಾಯವನ್ನು ಸತ್ಯ ಜ್ಞಾನ ಪೂರ್ಣವಾದ ಆಧ್ಯಾತ್ಮಿಕ ವಿವರಣೆಯೊಂದಿಗೆ ಅವರಿಗೆ ಹೇಳಿಕೊಡಿರಿ! ಇತರ ಆಧ್ಯಾತ್ಮಿಕದರ್ಶಿಗಳನ್ನೆಲ್ಲ ಬಿಟ್ಟು ನನ್ನ ಕೈಯಲ್ಲಿಯೇ ಬೈಅತ್ ಮಾಡಲು ಅವರು ಹುಚ್ಚರೇನೂ ಅಲ್ಲವಲ್ಲ. ತಾವು ಕೂಡ ಹಝ್ರತ್ ಮೌಲವಿ ಸಾಹಿಬರಂತೆಯೇ ನಡೆದುಕೊಂಡಿದ್ದರೆ ತಮಗೆ ಅದು ಉತ್ತಮವಾಗಿರುತ್ತಿತ್ತು. ತಾವು ಯೋಚಿಸಿ ನೋಡಿರಿ, ಪಂಡಿತವರೇಣ್ಯರಾದ ಪ್ರಸ್ತುತ ಮೌಲವಿ ಸಾಹೇಬರು ತನ್ನ ಎಲ್ಲ ಸ್ಥಾನಮಾನಗಳನ್ನು ತ್ಯಜಿಸಿ ನನ್ನ ಬಳಿಗೆ ಬಂದಿರುತ್ತಾರೆ. ಇಲ್ಲಿನ ಮಣ್ಣುಗೋಡೆಗಳ ಕುಟೀರಗಳಲ್ಲಿ ಬಹಳ ಕಷ್ಟದಿಂದ ಜೀವನ ಸಾಗಿಸುತ್ತಿದ್ದಾರೆ. ಏನು, ಅವರು ಯಾವುದೇ ಕಾರಣವಿಲ್ಲದೆ ಸುಮ್ಮನೆ ಇಲ್ಲಿ ಬಂದು ಈ ಕಷ್ಟವನ್ನು ಸಹಿಸುತ್ತಿರುವರೇ? ಇಲ್‌ಹಾಂ ವಾದಿಯಾದ ನಮ್ಮ ಪ್ರಿಯ ಸ್ನೇಹಿತ ತನ್ನ ಈ ಚಿಂತನೆಗಳಲ್ಲಿ ಅತ್ಯಂತ ಆಪತ್ಕರವಾದ ತಪ್ಪು ಹೆಜ್ಜೆಗಳನ್ನಿಡುತ್ತಿದ್ದಾರೆಂದು ತಿಳಿದುಕೊಳ್ಳಬೇಕಾಗಿದೆ. ಅವರು ಮೊದಲು ತಮ್ಮ

---

* ಲದುನ್ನಿ (ದೇವದತ್ತ ಆಧ್ಯಾತ್ಮಿಕ ಅರಿವು) ಜ್ಞಾನದ ಒರತೆ ತಮ್ಮ ಮೇಲೆ ತೆರೆಯಲ್ಪಡುವ ಸಾಧ್ಯತೆಯನ್ನು ನಾವು ನಿರಾಕರಿಸುವುದಿಲ್ಲ. ಆದರೆ ಅದು ಈಗ ಇಲ್ಲವೆಂದು ಮಾತ್ರ. ಸ್ವಪ್ನ ಮತ್ತು ದರ್ಶನಗಳಲ್ಲಿ ಹೆಚ್ಚಾಗಿ ಉಪಮಾಲಂಕಾರಗಳೂ ಹೋಲಿಕೆಗಳೂ ಇರುತ್ತವೆ. ಆದರೆ, ತಾವು ತಮ್ಮ ಸ್ವಪ್ನವನ್ನು ವಾಸ್ತವಿಕತೆಗೆ ಹೋಲಿಸಿದಿರಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಖ಼ಲೀಲುಲ್ಲಾಹ್ ಎಂಬ ಪದವಿ ತನ್ನ ಮೂಲಕ ಲಭಿಸಿತು ಎಂಬುದಾಗಿ ಮುಜದ್ದಿದ್ ಸರ್‌ಹಿಂದಿ(ರಹ್) ಒಂದು ಆಧ್ಯಾತ್ಮಿಕ ದರ್ಶನದಲ್ಲಿ ಕಂಡಿದ್ದರು. ಅದಕ್ಕೂ ಮಿಗಿಲಾಗಿ, ಹಝ್ರತ್ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ತನ್ನ ಕೈಯಲ್ಲಿ 'ಬೈಅತ್' ಮಾಡುವುದಾಗಿ ಶಾಹ್ ವಲಿಯುಲ್ಲಾಹ್ ಸಾಹಿಬ್(ರಹ್) ಕಂಡಿದ್ದರು. ಆದರೆ ಜ್ಞಾನ ಪರಿಪಕ್ವತೆಯ ಕಾರಣದಿಂದ ಅವರ್‍ಯಾರೂ ನೀವು ಯೋಚಿಸಿದಂತೆ ಯೋಚಿಸಲಿಲ್ಲ. ಬದಲಾಗಿ ಅವುಗಳಿಗೆ ಸಮಂಜಸವಾದ ವ್ಯಾಖ್ಯಾನವನ್ನು ನೀಡಿದರು.

ಇಲ್‌ಹಾಮಿನ ಸಾಮರ್ಥ್ಯದಿಂದ ಮೌಲವಿ ಸಾಹೇಬರಿಗೆ ತನ್ನ ಖುರ್‌ಆನ್ ಜ್ಞಾನದ ನಮೂನೆಯನ್ನೊಮ್ಮೆ ವಿವರಿಸಿಕೊಡಲಿ. ಹಾಗೆ, ತನ್ನ ಅದ್ಭುತವಾದ ದಿವ್ಯ ಪ್ರಕಾಶದ ಮೂಲಕ ನೂರುದ್ದೀನ್‌ರಂತಹ ಖುರ್‌ಆನ್ ಭಕ್ತರಿಂದ ಬೈಅತ್ ಪಡೆದುಕೊಳ್ಳಲಿ. ಹಾಗೆ ಮಾಡಿದಲ್ಲಿ ನಾನು ಮತ್ತು ನನ್ನ ಜಮಾಅತಿನ ಎಲ್ಲರೂ ನಿಮ್ಮಲ್ಲಿ ಅರ್ಪಿತರಾಗುವೆವು. ಏನು, ಸಮರ್ಥನೀಯವಲ್ಲದ ಕೆಲವು ಇಲ್‌ಹಾಂ ವಾಕ್ಯಗಳು – ಅವುಗಳಲ್ಲಿ ಹೆಚ್ಚಿನವು ತಪ್ಪುಗಳಿಂದ ಕೂಡಿದ್ದಾಗಿರುವಾಗ – ಅವುಗಳ ಬಲದಿಂದ ಮಾತ್ರ ಓರ್ವ ಮನುಷ್ಯ ತನ್ನನ್ನು ತಾನೇ ಇಮಾಮುಝ್ಝಮಾನ್ ಎಂದು ಹೇಳಿಕೊಳ್ಳುವ ಮಟ್ಟಕ್ಕೆ ತಲಪುವನೇ? ಪ್ರಿಯರೇ, ಇಮಾಮುಝ್ಝಮಾನ್ ಆಗಬೇಕಾದರೆ ಅದಕ್ಕೆ ಅನೇಕ ನಿಬಂಧನೆಗಳಿವೆ. ಅವೆಲ್ಲ ಪೂರ್ತಿಗೊಂಡಾಗ ಮಾತ್ರ ಅವರಿಗೆ ಒಂದು ಲೋಕವನ್ನೇ ಎದುರಿಸಲು ಸಾಧ್ಯವಾಗುವುದು.

ہزار نکتۂ باریک تر ز موایںجاست ‏ ‏ نہ ہر کہ سر بتر اشد قلندری داند

"ಇಲ್ಲಿ ಕೂದಲಿಗಿಂತಲೂ ಹೆಚ್ಚಿನ ಸೂಕ್ಷ್ಮತೆಯುಳ್ಳ ಸಾವಿರಾರು ತಂತಿಗಳಿವೆ. ತಲೆ ಬೋಳಿಸಿದ ಮಾತ್ರಕ್ಕೆ ಪ್ರತಿಯೊಬ್ಬ ಸನ್ಯಾಸಿಯಾಗುವುದಿಲ್ಲ."

ನನ್ನ ಪ್ರಿಯ ಮುಲ್‌ಹಂ ವಾದಿ ನಿಮಗೆ ಬಹಳಷ್ಟು ಇಲ್‌ಹಾಂ ವಚನಗಳು ಪ್ರಕಟಗೊಳ್ಳುತ್ತವೆ ಎಂಬ ವಂಚನೆಯಲ್ಲಿ ಬೀಳಬಾರದು. ನಾನು ಸತ್ಯವಾಗಿಯೂ ಸತ್ಯವಾಗಿಯೂ ಹೇಳುತ್ತೇನೆ, ಈ ರೀತಿಯಲ್ಲಿ ದಿವ್ಯ ಬೋಧನೆಗಳು ಲಭಿಸುವ ಅನೇಕರು ನನ್ನ ಜಮಾಅತಿನಲ್ಲಿದ್ದಾರೆ. ಕೆಲವರ ಇಲ್‌ಹಾಮುಗಳನ್ನು ಕ್ರೋಢೀಕರಿಸಿದರೆ ಒಂದು ಗ್ರಂಥವೇ ಆಗಬಹುದು. ಸೈಯದ್ ಅಮೀರಲಿ ಶಾಹ್ ಸಾಹೇಬರು ಪ್ರತಿ ವಾರಾಂತ್ಯದಲ್ಲಿ ತನಗೆ ಲಭಿಸಿದ ಇಲ್‌ಹಾಮುಗಳ ಒಂದು ಹಾಳೆಯನ್ನೇ ಕಳುಹಿಸಿಕೊಡುತ್ತಾರೆ. ನನ್ನ ಸತ್ಯವನ್ನು ಅಂಗೀಕರಿಸಿರುವ ಕೆಲವು ಸ್ತ್ರೀಯರು ಸಹ, ಅವರು ಅರಬಿ ಭಾಷೆಯ ಒಂದಕ್ಷರವನ್ನು ಓದಿರದಿದ್ದರೂ ಅವರಿಗೆ ಅರಬಿಯಲ್ಲಿ ಇಲ್‌ಹಾಂ ಉಂಟಾಗುತ್ತದೆ. ನಾನು ಆಶ್ಚರ್ಯಪಡುತ್ತೇನೆ – ತಮ್ಮ ಇಲ್‌ಹಾಮ್‌ಗಳಿಗಿಂತಲೂ ಅವರಿಗುಂಟಾಗುವ ಇಲ್‌ಹಾಮುಗಳಲ್ಲಿ ತಪ್ಪುಗಳು ಕಡಿಮೆ ಇರುತ್ತವೆ. 1898 ಸಪ್ಟೆಂಬರ್ 28ರಂದು ಅವರ (ಸೈಯದ್ ಅಮೀರಲಿ ಶಾಹ್ ಸಾಹೇಬರ – ಭಾ) ಸಹೋದರ ಫತಹ್ ಮುಹಮ್ಮದ್ ಬಝ್‌ದಾರರ ಪತ್ರ ಮೂಲಕ ಅವರ ಕೆಲವು ಇಲ್‌ಹಾಮುಗಳು ನನಗೆ ಲಭಿಸಿದವು. ಅಂತಹ ಅನೇಕ ಮುಲ್‌ಹಂ (ದಿವ್ಯವಾಣಿ ಲಭಿಸುವವರು) ನಮ್ಮ ಜಮಾಅತಿನಲ್ಲಿದ್ದಾರೆ.

ಒಬ್ಬರು ಲಾಹೋರಿನಲ್ಲಿಯೂ ಇದ್ದಾರೆ. ಆದರೆ ಏನು, ಅಂತಹ ಇಲ್‌ಹಾಮುಗಳು ಲಭಿಸಿದ ಮಾತ್ರಕ್ಕೆ ಅವರು ಇಮಾಮುಝ್ಝಮಾನರಿಗೆ ಬೈಅತ್ ಮಾಡುವುದರಿಂದ ಸ್ವತಂತ್ರರಾಗಬಲ್ಲರೇ? ನನ್ನ ಬಗ್ಗೆ ಹೇಳುವುದಾದರೆ, ಯಾರ ಕೈಯಲ್ಲಿ ಬೈಅತ್ ಮಾಡುವುದಕ್ಕೂ ನನಗೆ ಅಭ್ಯಂತರವಿಲ್ಲ. ಆದರೆ, ಬೈಅತಿನ ಉದ್ದೇಶವು ಆಧ್ಯಾತ್ಮಿಕ ಜ್ಞಾನದ ವೃದ್ಧಿಯೂ ಸತ್ಯವಿಶ್ವಾಸದ ದೃಢೀಕರಣವೂ ಆಗಿದೆ. ಈಗ ಹೇಳಿರಿ, ತಮ್ಮಲ್ಲಿ ಬೈಅತ್ ಮಾಡಿದರೆ ಯಾವ ವಿಶೇಷ ಜ್ಞಾನವನ್ನು ತಾವು ಕಲಿಸಿಕೊಡುವಿರಿ. ಪವಿತ್ರ ಖುರ್‌ಆನಿನ ಯಾವ ನೈಜ ಮೌಲ್ಯಗಳನ್ನು ವಿವರಿಸಿ ಕೊಡುವಿರಿ? ಆದುದರಿಂದ ತಾವು ಬನ್ನಿರಿ, ಇಮಾಮತಿನ ಆ ಮಾಣಿಕ್ಯವನ್ನು ತೋರಿಸಿಕೊಡಿರಿ. ನಾವೆಲ್ಲರೂ ಬೈಅತ್ ಮಾಡುವೆವು.

حضرت ناصح گر آئیں دیدہ دل فرش راہ    پر کوئی مجھ کو تو سمجھائے کہ سمجھائیں گے کیا

> "ಆದರಣೀಯ ಉಪದೇಶಕ ಬಂದರೆ, ಅವರನ್ನು ಸ್ವಾಗತಿಸಲು ನಾವು ನಮ್ಮ ಕಣ್ಣುಗಳನ್ನು ಮತ್ತು ಹೃದಯಗಳನ್ನು ಮಾರ್ಗದಲ್ಲಿ ಹಾಸುವೆವು. ಆದರೆ, ಅವರು ಏನನ್ನು ಕಲಿಸುವರೆಂದು ಯಾರಾದರೂ ನನಗೆ ತಿಳಿಸಿಕೊಡಲಿ"

ನಾನಿದೋ ಉಚ್ಚ ಸ್ವರದಲ್ಲಿ ಘೋಷಿಸುತ್ತೇನೆ. ಅಲ್ಲಾಹನು ನನಗೆ ಏನನ್ನು ಅನುಗ್ರಹಿಸಿರುವನೋ ಅವೆಲ್ಲವೂ ಇಮಾಮತಿನ ಚಿಹ್ನೆಗಳಾಗಿವೆ. ಯಾರಾದರೂ ಇಮಾಮತಿನ ಈ ಚಿಹ್ನೆಗಳನ್ನು ತನ್ನಲ್ಲಿ ತೋರಿಸಿಕೊಡುವರಾದರೆ, ಅನುಗ್ರಹಲಬ್ಧಿಯಲ್ಲಿ ಅವರು ನನಗಿಂತಲೂ ಶ್ರೇಷ್ಠ ಎಂದು ಸಾಬೀತುಪಡಿಸುವರಾದರೆ ನಾನು ಅವರ ಕೈಯಲ್ಲಿ ಬೈಅತ್ ಮಾಡಲು ಸಿದ್ಧನಿದ್ದೇನೆ. ಆದರೆ, ಅಲ್ಲಾಹನ ವಾಗ್ದಾನಗಳಲ್ಲಿ ಬದಲಾವಣೆಯುಂಟಾಗಲು ಸಾಧ್ಯವಿಲ್ಲ. ಅದನ್ನು ಎದುರಿಸಲು ಸಹ ಯಾರಿಂದಲೂ ಸಾಧ್ಯವಿಲ್ಲ. ಇಂದಿಗೆ ಸುಮಾರು 20 ವರ್ಷಗಳ ಹಿಂದೆ **'ಬರಾಹೀನೆ ಅಹ್ಮದಿಯಾ'**ದಲ್ಲಿ ಈ ಇಲ್‌ಹಾಂ ಉಲ್ಲೇಖಿತವಾಗಿದೆ:

اَلرَّحْمٰنُ - عَلَّمَ الْقُرْاٰنَ - لِتُنْذِرَ قَوْمًا مَّآ اُنْذِرَ اٰبَآؤُهُمْ - وَلِتَسْتَبِيْنَ سَبِيْلُ الْمُجْرِمِيْنَ -
قُلْ اِنِّيْٓ اُمِرْتُ وَاَنَا اَوَّلُ الْمُؤْمِنِيْنَ

ಈ ಇಲ್‌ಹಾಮಿನ ಆಧಾರದಲ್ಲಿ ಅಲ್ಲಾಹನು ನನಗೆ ಪವಿತ್ರ ಖುರ್‌ಆನಿನ ವಿಶೇಷವಾದ ಜ್ಞಾನವನ್ನು ನೀಡಿರುವನು. **'ಅವ್ವಲುಲ್ ಮುಅ್‌ಮಿನೀನ್'** (ವಿಶ್ವಾಸಿಗಳಲ್ಲಿ ಮೊದಲಿಗ) ಎಂದು ನನಗೆ ನಾಮಕರಣ ಮಾಡಿದ್ದಾನೆ. ಅವನು ನನ್ನನ್ನು ಆಧ್ಯಾತ್ಮಿಕ ಪರಿಜ್ಞಾನಗಳಿಂದಲೂ ಸತ್ಯ ತತ್ವಗಳಿಂದಲೂ ಸಮುದ್ರದಂತೆ

ತುಂಬಿಸಿರುವನು. ಈ ಕಾಲದಲ್ಲಿ ದಿವ್ಯಜ್ಞಾನ ಮತ್ತು ದೇವಪ್ರೇಮದಲ್ಲಿ ನಿನಗೆ ಸರಿಸಮಾನರಾಗಿ ಯಾರೂ ಇಲ್ಲವೆಂದು ಅವನು ನನಗೆ ಪದೇ ಪದೇ ಇಲ್‌ಹಾಂ ಮೂಲಕ ತಿಳಿಸಿರುತ್ತಾನೆ. ಆದುದರಿಂದ ಅಲ್ಲಾಹನಾಣೆ, ನಾನಿದೋ ಕುಸ್ತಿಯ ಮೈದಾನದಲ್ಲಿ ನಿಂತಿರುವೆನು. ಯಾರು ನನ್ನನ್ನು ಸ್ವೀಕರಿಸುವುದಿಲ್ಲವೋ ಅವನು ಮರಣಾನಂತರ ಅಪಮಾನಿತನಾಗುವ ಕಾಲ ದೂರವಿಲ್ಲ. ಈಗ ಅವರು ಅಲ್ಲಾಹನ ನ್ಯಾಯ ಪೂರ್ತೀಕರಣದ ಹಂತದಲ್ಲಿರುವರು.

ಸ್ನೇಹಿತರೇ, ಯಾವುದೇ ಕೆಲಸ, ಅದು ಲೌಕಿಕವಾಗಲಿ ಧಾರ್ಮಿಕವಾಗಲಿ **ಲಿಯಾಖತ್** (ಕಾರ್ಯದಕ್ಷತೆ, ಯೋಗ್ಯತೆ) ಇಲ್ಲದೆ ಅದನ್ನು ಮಾಡಲು ಸಾಧ್ಯವಿಲ್ಲ. ದೊಡ್ಡ ಮನೆತನದ, ಆದರೆ ತೀರಾ ಅಜ್ಞಾನಿಯಾದ, ಉರ್ದು ಭಾಷೆ ಕೂಡ ಅರಿಯದ ವ್ಯಕ್ತಿಯೋರ್ವನನ್ನು ತಹಸಿಲ್ದಾರ್ ಆಗಿ ನೇಮಿಸಬೇಕೆಂಬ ಬೇಡಿಕೆಯೊಂದಿಗೆ ಒಬ್ಬ ಬ್ರಿಟಿಷ್ ಉನ್ನತಾಧಿಕಾರಿಯ ಮುಂದೆ ಹಾಜರುಪಡಿಸಲಾದ ಒಂದು ಘಟನೆ ನನಗೆ ನೆನಪಿಗೆ ಬರುತ್ತಿದೆ. ಆ ಬ್ರಿಟಿಷ್ ಅಧಿಕಾರಿ ಹೇಳಿದರು: ನಾನು ಈತನನ್ನು ತಹಸಿಲ್ದಾರ್ ಆಗಿ ನೇಮಕ ಮಾಡಿದರೆ ಈತನ ಬಳಿ ಬರುವ ಮೊಕದ್ದಮೆಗಳನ್ನು ಯಾರು ಇತ್ಯರ್ಥ ಮಾಡುವರು? ಈತನಿಗೆ ಐದು ರೂಪಾಯಿಯ ಕೂಲಿ ಕೆಲಸವಲ್ಲದೆ ಬೇರೆ ಯಾವ ಕೆಲಸವನ್ನೂ ನಾನು ಕೊಡಲಾರೆ. ಅದೇ ರೀತಿ ಅಲ್ಲಾಹನು ಹೇಳುತ್ತಾನೆ:

اَللّٰهُ اَعْلَمُ حَيْثُ يَجْعَلُ رِسَالَتَهٗ

**ಅಲ್ಲಾಹು ಅಅ್‌ಲಮು ಹಯ್‌ಸು ಯಜ್‌ಅಲು ರಿಸಾಲತಹು** **(6:125)**

"ತನ್ನ ರಿಸಾಲತನ್ನು (ಸಂದೇಶವಾಹಕತ್ವವನ್ನು) ಯಾರಿಗೆ ಯಾವಾಗ ನೀಡಬೇಕೆಂದು ಅಲ್ಲಾಹನೇ ಚೆನ್ನಾಗಿ ಬಲ್ಲವನಾಗಿದ್ದಾನೆ."

ಸಾವಿರಾರು ಶತ್ರುಗಳು ಮತ್ತು ಮಿತ್ರರು ಯಾರ ಬಳಿಗೆ ಸವಾಲುಗಳೊಂದಿಗೂ ವಿಮರ್ಶೆಗಳೊಂದಿಗೂ ಬರುವರೋ, ಯಾರಿಗೆ ನುಬುವ್ವತಿನ ಜವಾಬ್ದಾರಿಕೆಯನ್ನು ವಹಿಸಿ ಕೊಡಲಾಗುವುದೋ ಅಂತಹ ವ್ಯಕ್ತಿಯ ಬಳಿ ಅಸ್ಪಷ್ಟವಾದ ಕೆಲವು ಇಲ್‌ಹಾಂ ವಚನಗಳು ಇವೆಯೆಂಬುದು ಮಾತ್ರ ಆತನ ಅರ್ಹತೆಯ ಮಾನದಂಡವೇ? ತನ್ನ ಸ್ವಂತ ಜನರು ಮತ್ತು ಶತ್ರು ಜನರು ಇದರಿಂದ ಸಂತೃಪ್ತರಾಗುವರೇ?

ನಾನು ಈ ಬರಹವನ್ನು ಮುಕ್ತಾಯಗೊಳಿಸುತ್ತಿದ್ದೇನೆ. ಇದರಲ್ಲಿ ಅಹಿತಕರವಾದ ಪದಗಳೇನಾದರೂ ಬಳಕೆಯಾಗಿದ್ದಲ್ಲಿ ಸನ್ಮಾನ್ಯ ವಾಚಕರೊಂದಿಗೆ,

ವಿಶೇಷತಃ ನಮ್ಮ ಸ್ನೇಹಿತರಾದ ಮುಲ್‌ಹಂ ಸಾಹೇಬರೊಂದಿಗೆ ಕ್ಷಮೆ ಕೋರುತ್ತೇನೆ. ಯಾಕೆಂದರೆ, ನಾನು ಸಂಪೂರ್ಣ ಸದುದ್ದೇಶದಿಂದಲೇ ಈ ಕೆಲವು ಸಂಗತಿಗಳನ್ನು ಬರೆದಿರುವೆನು. ನಾನು ನನ್ನ ಪ್ರಿಯ ಮಿತ್ರನೊಂದಿಗೆ ಹೃತ್ಪೂರ್ವಕವಾದ ಹಾಗೂ ಪ್ರಾಮಾಣಿಕವಾದ ಸ್ನೇಹವನ್ನು ಹೊಂದಿದ್ದೇನೆ. ಅಲ್ಲಾಹನು ಅವರೊಂದಿಗಿರಲಿ ಎಂದು ಪ್ರಾರ್ಥಿಸುತ್ತೇನೆ.

ವಿನೀತ

**ಮಿರ್ಝಾ ಗುಲಾಂ ಅಹ್ಮದ್,**

**ಖಾದಿಯಾನ್, ಗುರುದಾಸ್‌ಪುರ ಜಿಲ್ಲೆ.**